ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallmmanudi@gmail.com E-paper: www.mallmmanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy

VOLUME - 13 ಸಂಪುಟ–13 | ISSUE - 29 ಸಂಚಿಕೆ– 29 | PAGE- 8 ಪುಟ–8 | ಬುಧುವಾರ 05.03.2025 | RS.2/- ಬೆಲೆ 2/–

## ನಿಯಮ ಬಾಹಿರವಾಗಿ ನಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಆರೋಪ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್. ಕೆಲ ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ನಿಯಮಗಳನ್ನು ಪಾಲಿಸದೇ ತಮ್ಮ ಮನಬಂದಂತೆ ನಡೆಸುತ್ತಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ. ಶಾಲಾ ವಹಾನಗಳಿಗೆ ಇನ್ಸುರೇನ್ಸ್, ಫಿಟ್ ನೆಸ್, ಹಾಗೂ ನಿಯಮದ ಪ್ರಕಾರ ಶಾಲಾ ದಾಖಲಾತಿ. ಹೀಗೆ ನಾನಾ ರೀತಿಯ ನಿಯಮಗಳನ್ನು ಉಲ್ಲಂಘನೆ ಮಾಡಿ. ಖಾಸಗಿ ಸಂಸ್ಥೆಗಳು ನಡೆಯುತ್ತಿವೆ ಎಂಬ ಆರೋಪ ವಿದ್ದು. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೌನವಹಿಸಿದ್ದು ಹತ್ತು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಹಾಗಾಗಿ ನಿಯಮಬಾಹಿರವಾಗಿ ನಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಗುರುತಿಸಿ ಅವುಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯ ಸಾರ್ವಜನಿಕರದಾಗಿದೆ.

## ವಿಧಾನ ಪರಿಷತನಲ್ಲಿ ಕಾಜಿ ಅರ್ಷದ್ ಅಲಿ ಅವರಿಗೆ ಸಭಾಪತಿಗಳಿಂದ ಸಂತಾಪ


ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು, ಮಾ.04 :ವಿಧಾನ ಪರಿಷತ್ ಸದಸ್ಯರೂ ಹಾಗೂ ಹಿರಿಯ ಪತ್ರಕರ್ತರೂ ಆಗಿದ್ದ ಕಾಜಿ ಅರ್ಷದ್ ಅಲಿ ಅವರು 2025ನೇ ಮಾರ್ಚ್ 3 ಸೋಮವಾರದಂದು ಸಂಜೆ ಹೃದಯಾಘಾತದಿಂದ ನಿಧನರಾದರು. ಶ್ರೀಯುತರು ಬಿ.ಡಿ.ಎ. ಅಧ್ಯಕ್ಷರಾಗಿ, ಜಿಲ್ಲಾ ಕಾಂಗ್ರಸ್ ಅಧ್ಯಕ್ಷರಾಗಿಯೂ ಸಹ ಕೆಲಸ ನಿರ್ವಹಿಸಿ ಬೀದರ್ ಜಿಲ್ಲೆಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಇವರು ಮಾಸ್ ಅಲ್ಲ ಕ್ಲಾಸ್ ರಾಜಕಾರಣಿಯಾಗಿದ್ದರು. ರಾಜಕರಣದಲ್ಲಿ ಬೆಳೆದರೂ ಅವರು ಪತ್ರಿಕಾ ವೃತ್ತಿಯಲ್ಲಿ ಸದಾ ತೊಡಗಿಸಿಕೊಂಡಿದ್ದರು. ದೇಹದಲ್ಲಿ ಶಕ್ತಿ ಇರುವ ತನಕ ಬರವಣಿಗೆಯನ್ನು ಮುಂದುವರೆಸಿದ್ದರು. ಉರ್ದು ಮತ್ತು ಹಿಂದಿ ಪತ್ರಿಕೆಗಳ ಸಂಪಾದಕರಾಗಿದ್ದರು. ಪ್ರಜಾವಾಣಿ ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಸಹ ಬರೆದ್ದರು. ಬಹಳ ಮೃದು ಸ್ವಭಾವದ ವ್ಯಕ್ತಿತ್ವ ಹೊಂದಿದ್ದ ಇವರು ಸಾಮಾಜಿಕ ಕಾಳಜಿ, ಬದ್ದತೆಗೆ ಹೆಸರಾಗಿದ್ದರು.

(2ನೇ ಪುಟ ನೋಡಿ)

# ಕರ್ನಾಟಕ ಬಂದ್ ಅಗತ್ಯವಿಲ್ಲ : ಸಚಿವ ರಾಮಲಿಂಗಾರೆಡ್ಡಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಮಾ.4: ಮಹಾರಾಷ್ಟ್ರ ಮತ್ತು ಕರ್ನಾಟಕದ ಬಸ್ ಸಂಚಾರ ಸುಗಮವಾಗಿದ್ದು ಕಾನೂನು ಸುವ್ಯವಸ್ಥೆ ಉತ್ತಮವಾಗಿದೆ. ಈ ಹಂತದಲ್ಲಿ ಕರ್ನಾಟಕ ಬಂದ್ ಅಗತ್ಯವಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿಯಲ್ಲಿ ಕಂಡಕ್ಟರ್ ಮೇಲೆ ಹಲ್ಲೆ ಖಂಡಿಸಿ ಇದೆ ಮಾರ್ಚ್ 22ರಂದು ಕನ್ನಡ ಪರ ಸಂಘಟನೆಗಳು ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡ ಪರ ಸಂಘಟನೆಗಳು ಕರ್ನಾಟಕ ಬಂದ್‌ಗೆ ಕರೆನೀಡಿರುವುದಕ್ಕೆ ಪ್ರತಿಕ್ರಿಯಿಸಿದರು.

ಕರ್ನಾಟಕದ ಸಾರಿಗೆ ಸಂಸ್ಥೆ ನಿರ್ವಾಹಕನ ಮೇಲೆ ಹಲ್ಲೆಯಾದ ಘಟನೆ ನಡೆದು 8–10 ದಿನ ಆಗಿದೆ. ಆರಂಭದಲ್ಲಿ ಒಂದೆರೆಡು ದಿನ ಪ್ರತಿಭಟನೆಗಳಾಗಿದ್ದವು. ಯಾವುದೇ ಹಾನಿಯಾಗಿಲ್ಲ. ಮಹಾರಾಷ್ಟ್ರದಲ್ಲೂ ನಮ್ಮ ಚಾಲಕರಿಗೆ ಹಾಗೂ ನಿರ್ವಾಹಕರಿಗೆ ಮಸಿ ಬಳಿದಿದ್ದರು. ಅದಕ್ಕೂ ಪ್ರತಿಭಟನೆಗಳು ನಡೆದಿವೆ ಎಂದು ಹೇಳಿದರು.

ನೆಲ, ಜಲ, ಭಾಷೆ ವಿಚಾರದಲ್ಲಿ ಹೋರಾಟಗಳಿಗೆ ನಮ್ಮ ಬೆಂಬಲವಿದೆ. ಆದರೆ ಈ ಸಂದರ್ಭದಲ್ಲಿ ಬಂದ್ ಅಗತ್ಯವಿಲ್ಲ ಎಂದರು.

## ಐದು ವರ್ಷ ಪೂರೈಸದ ಪತ್ರಿಕೆಗಳಿಗೆ ಪ್ರೋತ್ಸಾಹದ ಜಾಹೀರಾತು ನೀಡಿ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು: 5 ವರ್ಷ ಪೂರೈಸಿರದ ಒಬಿಸಿ /ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೆ ಪ್ರತಿ ಮಾಹೆ ಸರ್ಕಾರದ ಪ್ರೋತ್ಸಾಹ ರೂಪದ ಜಾಹೀರಾತನ್ನು ಇಲಾಖೆಯಿಂದ ಬಿಡುಗಡೆ ಮಾಡುವುದಕ್ಕೆ ಸರ್ಕಾರದ ಆದೇಶ ಇರುವುದಿಲ್ಲ. ಹೀಗಾಗಿ ಈ ಎರಡು ಸಮುದಾಯದ



ಪತ್ರಿಕೆಗಳ ಬೆಳವಣಿಗೆಗೆ ಮತ್ತು ಪತ್ರಿಕೆ ನಡೆಸಲು ತೊಂದರೆ–ಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆ ತಳಹದಿಯಲ್ಲಿ ಈ ಎರಡು ಸಮುದಾಯದ ಪತ್ರಿಕೆಗಳಿಗೆ ಮಾಸಿಕ 01 ಪುಟದ ಸರ್ಕಾರದ ಪ್ರೋತ್ಸಾಹರೂಪದ ಜಾಹೀರಾತನ್ನು ಸರ್ಕಾರದವತಿಯಿಂದ ಬಿಡುಗಡೆ ಮಾಡಲು ಸೂಕ್ತ ಆದೇಶವನ್ನು ಹೊರಡಿಸುವುದರ ಮೂಲಕ ಈ ಎರಡೂ ಸಮುದಾಯಗಳ ಪತ್ರಿಕೆಗಳಿಗೆ ಅನುಕೂಲ ಮಾಡಿಕೊಡಬೇಕು ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ಮನವಿ ಮಾಡಿಕೊಂಡರು.

ಅವರು ಮಂಗಳವಾರ ವಿಧಾನಸೌಧದಲ್ಲಿ ಕಾನೂನು, ಸಂಸದೀಯ ಹಾಗೂ ಪ್ರವಾಸೋದ್ಯಮ ಇಲಾಖೆ

(2ನೇ ಪುಟ ನೋಡಿ)

## ಸಿದ್ಧರಾಮಯ್ಯನವರು ಕಾಂಗ್ರೆಸ್ ಪಕ್ಷದ ಕೊನೆ ಮುಖ್ಯಮಂತ್ರಿ: ಕಾರಜೋಳ ವ್ಯಂಗ್ಯ



ಬೀದರ. ಮಾ. 04 : ಕಾಂಗ್ರೆಸ್ ಪಕ್ಷದಿಂದ ರಾಜ್ಯದಲ್ಲಿ ಸಿದ್ದರಾಮಯ್ಯನವರೇ ಕೊನೆ ಮುಖ್ಯಮಂತ್ರಿ. ಎಂದು ಚಿತ್ರದುರ್ಗದ ಸಂಸದರು ಹಾಗೂ ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ವ್ಯಂಗ್ಯವಾಡಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ವಿಜಯನಗರ ಸಾಮ್ರಾಜ್ಯದ ಕೊನೆಯ ಅರಸ ಅಳಿಯ ರಾಮರಾಯ ಆಗಿದ್ದರು. ಅದೇ ತರಹ ಸಿದ್ದರಾಮಯ್ಯನವರೇ ಕಡೆಯ ಕಾಂಗ್ರೆಸ್ಸಿನ ಸಿಎಂ ಎಂದು ಕುಟುಕಿದರು.

ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ ಅವರು ಮುಖ್ಯಮಂತ್ರಿ ಕುರ್ಚಿಗಾಗಿ ನಡೆಸುತ್ತಿರುವ ಕಾದಾಟದಲ್ಲಿ ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ. ಮುಖ್ಯಮಂತ್ರಿ ಆಗಲು ಡಿ.ಕೆ. ಶಿವಕುಮಾರ ಅವರು ಎರಡು ವರ್ಷಗಳಿಂದ ಪ್ರಯತ್ನಿಸುತ್ತಿದ್ದಾರೆ. ಅವರು ಸಿಎಂ ಆಗಬಾರದು ಎಂದು ಸಿದ್ದರಾಮಯ್ಯನವರ ಬೆಂಬಲಿಗರು ನಿರಂತರ ಹೋರಾಟ ಮಾಡುತ್ತಿದ್ದಾರೆ. ಇವರಿಬ್ಬರ ಜಗಳದಲ್ಲಿ ಆಡಳಿತ ಕುಸಿದು ಹೋಗಿದೆ ಎಂದು ಆರೋಪಿಸಿದರು.

(2ನೇ ಪುಟ ನೋಡಿ)

## ಅಂತರರಾಜ್ಯ ಕಳ್ಳರ ಬಂಧನ: ನಗದು ಸೇರಿ 7 ಲಕ್ಷ ಮೌಲ್ಯದ ಸ್ವತ್ತು ಜಪ್ತಿ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಮಾ.4:ತಾಲ್ಲೂಕಿನ ಭಾತಂಬ್ರಾ ಗ್ರಾಮ ಸಮೀಪದ ಲಕ್ಷ್ಮೀ ಭಾಂಡೆ ಸ್ಟೋರ್‌ನಲ್ಲಿ ಈಚೆಗೆ ಕಳ್ಳತನ ಮಾಡಿ 10 ಲಕ್ಷ ರೂಪಾಯಿ ಮೌಲ್ಯದ ಬೆಲೆ ಬಾಳುವ ಭಾಂಡೆ ಸಾಮಾನುಗಳನ್ನು ಕಳವು ಮಾಡಿದ್ದ ಆರೋಪಿಗಳನ್ನು ಗ್ರಾಮೀಣ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ 3 ಲಕ್ಷ ನಗದು, 1ಲಕ್ಷ ಮೌಲ್ಯದ ಸ್ಯಾಂಟ್ರೊ





ಕಾರು, 3 ಲಕ್ಷ ರೂಪಾಯಿ ಬೆಲೆಬಾಳುವ ಬೊಲೆರೊ ಪಿಕ್ ಅಪ್ ವಾಹನ ಸೇರಿದಂತೆ ಒಟ್ಟು 7 ಲಕ್ಷ ಮೌಲ್ಯದ ಸ್ವತ್ತು ಜಪ್ತಿ ಮಾಡಲಾಗಿದೆ.

ಜನವರಿ 30ರ ರಾತ್ರಿ ಕಳ್ಳರು ಭಾಂಡೆ ಸ್ಟೋರ್‌ನ ಹಿಂಭಾಗದ ನಟ್ ಬೋಲ್ಟ್

(2ನೇ ಪುಟ ನೋಡಿ)

## ೮೦ ಎಕರೆ ಭೂಮಿ ನೀಡಲು ಬೀದರ್ ಜಿಲ್ಲಾಧಿಕಾರಿಗೆ ಪತ್ರ



ಮಲ್ಲಮ್ಮನುಡಿ ವಾರ್ತೆ ಬೀದರ: ಮಾ.04: ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಕನಿಷ್ಠ 60ರಿಂದ 80 ಎಕರೆ ಸರ್ಕಾರಿ ಭೂಮಿಯನು ಉಚಿತವಾಗಿ ನೀಡಲು ಜಿಲ್ಲಾಧಿಕಾರಿಗೆ ಎಪಿಎಂಸಿ ಕಾರ್ಯದರ್ಶಿ ಪತ್ರ ಬರೆದಿದ್ದಾರೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ಮಂಗಳವಾರ ವಿಧಾನಪರಿಷತ್ತಿಗೆ ತಿಳಿಸಿದ್ದಾರೆ. ಪ್ರಸ್ತುತ ಬೀದರ್ ಎಪಿಎಂಸಿ 39 ಎಕರೆ 28 ಗುಂಟೆ ಭೂಮಿ ಹೊಂದಿದ್ದು, ಈಗಾಗಲೇ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಇನ್ನೂ ಎಪಿಎಂಸಿ ವಹಿವಾಟು ವಿಸ್ತರಣೆ ಮಾಡಲು ಸ್ಥಳಾವಕಾಶದ ಕೊರತೆ ಇರುವ ಕಾಣ ಬೀದರ್ ಸುತ್ತಮುತ್ತ 80 ಎಕರೆ ಸರ್ಕಾರದ ಭೂಮಿ ಒದಗಿಸಲು ಕೋರಲಾಗಿದೆ ಎಂದು ಸಚಿವರು ಶಾಸಕ ಭೀ???ರಾವ್ ಬಸವರಾಜ ಪಾಟೀಲ್ ಅವರ ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರುಕಟ್ಟೆ ಪ್ರಾಂಗಣದ ವಿಸ್ತರಣೆಗಾಗಿ ಅನುಮೋದಿತ ದದ ಪ್ರತಿಶತ 50ರ ರಿಯಾಯಿತಿ ದರದಲ್ಲಿ ನೂರು ಎಕರೆ ಭೂಮಿ ಮಂಜೂರು ಮಾಡುವಂತೆ ಕೃಷಿ ಮಾರಾಟ ಇಲಾಖೆ ನಿರ್ದೇಶಕರು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಕೋರಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ. ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಬೀದರ್, ಔರಾದ್ (ಬಾ), ಹುಮನಾಬಾದ್, ಬಸವಕಲ್ಯಾಣ ಮತ್ತು ಭಾಲ್ಕಿಯಲ್ಲಿ ಎಪಿಎಂಸಿಗಳು ಕಾರ್ಯನಿರ್ವಹಿಸುತ್ತಿವೆ. ಔರಾದ್ ಎಪಿಎಂಸಿ 45 ಎಕರೆ, ಹುಮನಾಬಾದ್ 16 ಎಕರೆ 15 ಗುಂಟೆ, ಬಸವಕಲ್ಯಾಣ 16 ಎಕರೆ 8 ಗುಂಟೆ ಹಾಗೂ ಭಾಲ್ಕಿ ಎಪಿಎಂಸಿ 36 ಎಕರೆ 37 ಗುಂಟೆ ಭೂಮಿ ಹೊಂದಿದ್ದು, ಈ ಮಾರುಕಟ್ಟೆಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸ್ಥಳಾವಕಾಶದ ಕೊರತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

## ವಿವಿಧೆಡೆ 20 ಬಾಲಕಾರ್ಮಿಕರು, ಕಿಶೋರ ಕಾರ್ಮಿಕರು ಪತ್ತೆ





ರಾಯಚೂರು ಮಾ.04: ಬಾಲಕಾರ್ಮಿಕರ ಮತ್ತು ಕಿಶೋರ ಕಾರ್ಮಿಕರ ಪತ್ತೆಗಾಗಿ ಮಾ.04ರಂದು ರಾಯಚೂರು ತಾಲೂಕಿನಲ್ಲಿ ಹಠಾತ್ ದಾಳಿ ನಡೆಸಲಾಯಿತು.

ತಾಲೂಕಿನ ಸಗಮಕುಂಟ, ಶಾಖವಾದಿ, ಇಬ್ರಾಹಿಂ ದೊಡ್ಡಿ, ವಡ್ಡೆಪಲ್ಲಿ, ಯಾಪಲದಿನ್ನಿ, ಆತ್ಕೂರು, ಹೆಗ್ಗಸನಹಳ್ಳಿ ಹಾಗೂ ಮಾಮಡ ದೊಡ್ಡಿ ವ್ಯಾಪ್ತಿಯಲ್ಲಿ ದಾಳಿ ನಡೆಸಿದಾಗ 20 ಮಕ್ಕಳು ಪತ್ತೆಯಾದರು. ಇವರನ್ನು ಶಾಲೆ ಬಿಡಿಸಿ ಕೃಷಿ ಕೆಲಸಕ್ಕಾಗಿ ಸರಕು ಸಾಗಣೆ ವಾಹನಗಳಲ್ಲಿ ಕರೆದೊಯ್ಯಲಾಗುತ್ತಿತ್ತು. ಈ ಬಾಲ ಕಾರ್ಮಿಕರನ್ನು ಕರೆದೊಯ್ಯಲು ಬಳಸಿದ 06 ಸರಕು ಸಾಗಣೆ ವಾಹನಗಳನ್ನು ಜಪ್ತಿ ಮಾಡಿ ಕ್ರಮ ವಹಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ಮಂಜುನಾಥ ರೆಡ್ಡಿ ಅವರು ಮಾತನಾಡಿ, ಮಕ್ಕಳನ್ನು ಶಾಲೆ ಬಿಡಿಸಿ ಕೃಷಿ ಮತ್ತು ಇನ್ನಿತರೆ ಚಟುವಟಿಕೆಗಳಲ್ಲಿ

(2ನೇ ಪುಟ ನೋಡಿ)

## ಸರಳ ಜೀವನ, ಉನ್ನತ ಚಿಕಿತ್ಸೆಯೇ ನಾಟಿವೈದ್ಯರ ಮೂಲಮಂತ್ರ: ಶಿಲ್ಪಾ ಶರ್ಮಾ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 04 : ಅತ್ಯಂತ ಸರಳ ಜೀವನ ನಡೆಸುತ್ತ ಪರಿಶುದ್ಧ ಭಾವದಿಂದ ಗ್ರಾಮೀಣ ಭಾಗದಲ್ಲಿ ಜನತೆಗೆ ಉನ್ನತ ಚಿಕಿತ್ಸೆ ನೀಡುವುದೇ ಪಾರಂಪರಿಕ ನಾಟಿ ವೈದ್ಯರ ಮೂಲಮಂತ್ರವಾಗಿದೆ. ಕಡಿಮೆ ಖರ್ಚಿನಲ್ಲಿ ಗ್ರಾಮೀಣ ಜನರ ಆರೋಗ್ಯ ಕಾಪಾಡುವ ನೀವು ನಿಜವಾದ ವೈದ್ಯೋ ನಾರಾಯಣರಾಗಿದ್ದೀರಿ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದರು.

ಕರ್ನಾಟಕ ಜೀವವೈವಿದ್ಯ ಮಂಡಳಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ರಾಜ್ಯ ವೈದ್ಯ ಪರಿಷತ್ತು ಹಾಗೂ ಜಿಲ್ಲಾಡಳಿತದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ 15ನೇ ಪಾರಂಪರಿಕ ವೈದ್ಯ ಸಮ್ಮೇಳನದ ಹೃದಯಸ್ಪರ್ಶಿ ಸಮಾರೋಪ ಸಮಾರಂಭದಲ್ಲಿ ಗೊಟ್ಟಮಗೊಟ್ಟಾ ಸ್ಮರಣ ಸಂಚಿಕೆ ಮುಖಪುಟ ಬಿಡುಗಡೆಗೊಳಿಸಿ ಮಾತನಾಡಿದರು.

ಪ್ರತಿಯೊಬ್ಬ ಪಾರಂಪರಿಕ ವೈದ್ಯರು ತಮ್ಮಲ್ಲಿರುವ ಜ್ಞಾನವನ್ನು ಕಿರಿಯರಿಗೆ ಧಾರೆ ಎರೆಯಬೇಕು. ತನ್ಮೂಲಕ ಇಡೀ ರಾಷ್ಟ್ರ ಆರೋಗ್ಯಯುತವಾಗಿರಲು ಸಹಕರಿಸಬೇಕು. ಜೊತೆಗೆ ತಮ್ಮಲ್ಲಿರುವ ಮೌಖಿಕ ಜ್ಞಾನವನ್ನು ಪುಸ್ತಕರ ರೂಪದಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ

(2ನೇ ಪುಟ ನೋಡಿ)

## ಒಂದನೇ ಪುಟದಿಂದ

# ನಾಟಿವೈದ್ಯರ ಮೂಲಮಂತ್ರ: ಶಿಲ್ಪಾ ಶರ್ಮಾ

ಹಾಗೂ ಆಡಿಯೋ ವಿಡಿಯೋ ಮೂಲಕ ದಾಖಲೀಕರಣಗೊಳಿಸಲು ಪ್ರಯತ್ನಿಸಬೇಕು. ಇದರಿಂದ ಹಲವರು ತಮ್ಮ ಮನೆಯಲ್ಲಿಯೇ ಪ್ರಯತ್ನಿಸಿ ಚಿಕಿತ್ಸೆ ಪಡೆದುಕೊಳ್ಳಲು ಸಹಕಾರಿಯಾಗುತ್ತದೆ. ಪಾರಂಪರಿಕ ವೈದ್ಯರಿಂದ ದೇಶದ ಜನತೆಗೆ ಒಳಿತಾಗಲಿ. ಈ ಸಮ್ಮೇಳನದ ಯಶಸ್ವಿಗೆ ಸಹಕರಿಸಿದ ಎಲ್ಲರಿಗೂ ಶುಭವಾಗಲಿ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹೇಳಿದರು. ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ.ಸಿ.ವೀರಣ್ಣ ಸಮಾರೋಪ ನುಡಿಗಳನ್ನಾಡಿ ಪಾರಂಪರಿಕ ಔಷಧಿಗಳು ಶಾರಿರಿಕ, ಮಾನಸಿಕ ಮತ್ತು ಆತ್ಮಶುದ್ಧಿಕರಣಕ್ಕೆ ಸಹಕಾರಿಯಾಗಿದೆ. ಪಾರಂಪರಿಕ ಔಷಧಗಳು ಸಂಶೋಧನೆಗೆ ಒಳಪಡಿಸಿ, ವೈಜ್ಞಾನಿಕ ನೆಲೆಗಟ್ಟಿನ ಮೇಲೆ ನೀಡಲು ಆರಂಭಿಸಬೇಕು. ಕಾಡು ಉಳಿಸಿ, ಸಸ್ಯ ಸಂರಕ್ಷಣೆ ಮಾಡಿದಾಗ ಮಾತ್ರ ಆಯುರ್ವೇದ ಕ್ಷೇತ್ರ ಉಳಿಸಲು ಸಾಧ್ಯ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿ ಡಾ. ಜೈನ್ ಎನ್ನುವವರು ನೂರಾರು ಎಕರೆ ಜಾಗದಲ್ಲಿ ಸಸ್ಯೌಷಧಿ ಉಳಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ. ಅವರ ಮಾದರಿ ಎಲ್ಲಾ ನಾಟಿ ವೈದ್ಯರು ಅಳವಡಿಸಿಕೊಳ್ಳಬೇಕು ಎಂದರು. ಸಮ್ಮೇಳನದ ಸಂಯೋಜಕ ಡಾ. ಜಗನ್ನಾಥ ಹೆಬ್ಬಾಳೆ ಸಭೀಕರಿಗೆ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿ ಸಮ್ಮೇಳನದ ಯಶಸ್ವಿಗೆ ಸಹಕಾರ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು, ವಿವಿಧ ಸಂಘ ಹಾಗೂ ಶಿಕ್ಷಣ ಸಂಸ್ಥೆಗಳ ಎಲ್ಲಾ ಗಣ್ಯಮಾನ್ಯರಿಗೆ, ಸಂಘಟಕರಿಗೆ ಕೃತಜ್ಞತೆ ಸಲ್ಲಿಸುವೆ. ಮುಂದಿನ ದಿನಗಳಲ್ಲಿ ಪಾರಂಪರಿಕ ವೈದ್ಯರ ಏಳ್ಗೆಗೆ ನಿರಂತರವಾಗಿ ಶ್ರಮಿಸಲಾಗುವುದು ಎಂದರು.

ಇದೇ ವೇಳೆ ಗೊಟ್ಟಮಗೊಟ್ಟಾ ಸ್ಮರಣ ಸಂಚಿಕೆಯ ಮುಖಪುಟ ಬಿಡುಗಡೆಗೊಳಿಸಲಾಯಿತು. ಕರ್ನಾಟಕ ಪಾರಂಪರಿಕ ವನೌಷಧಿ ಪ್ರಶಸ್ತಿಯನ್ನು ವೈದ್ಯ ಶೈಲೇಂದ್ರ ಕಾವಡಿ ಹಾಗೂ ರಾಘವೇಂದ್ರ ಬಿ ಅವರಿಗೆ ನೀಡಿ ಗೌರವಿಸಲಾಯಿತು. ಕರ್ನಾಟಕ ಪಾರಂಪರಿಕ ವೈದ್ಯರತ್ನ ಪ್ರಶಸ್ತಿಯನ್ನು ಖುರ್ಷಿದ್ ಪಟೇಲ್ ಬೀದರ, ಅಲ್ಲಯ್ಯ ಸಿದ್ಧಲಿಂಗಯ್ಯ ಬೆಳಗಾವಿ, ಎನ್ ದ್ಯಾಮಣ್ಣ ರಾಯಚೂರು, ವೆಂಕಟೇಶ ಮೂರ್ತಿ, ಭಾಸ್ಕರ್ ಉಡುಪಿ ಈ ಆರು ಜನರಿಗೆ ನೀಡಿ ಗೌರವಿಸಲಾಯಿತು. ಗೊತ್ತುವಳಿ ಮಂಡನೆ: ಸರ್ಕಾರ ಪಾರಂಪರಿಕ ವೈದ್ಯರಿಗೆ ಮಾನ್ಯತೆ ನೀಡಬೇಕು, ಪಾರಂಪರಿಕ ವೈದ್ಯರ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆ ಮಾಡಬೇಕು, ರಾಜ್ಯಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನ ಆಯೋಜಿಸಲು ಸರ್ಕಾರ ಪ್ರತೀ ವರ್ಷ ರೂ. 50 ಲಕ್ಷ ಮುಂಗಡ ಪತ್ರದಲ್ಲಿ ಅನುದಾನ ಮೀಸಲಿಡಬೇಕು ಮತ್ತು ಪಾರಂಪರಿಕ ವೈದ್ಯರ ತರಬೇತಿ ಕೇಂದ್ರವನ್ನು ಪ್ರತೀ ಜಿಲ್ಲೆಯಲ್ಲಿ ಸ್ಥಾಪಿಸಬೇಕೆಂದು ಈ ನಾಲ್ಕು ಗೊತ್ತುವಳಿಯನ್ನು ಸಮ್ಮೇಳನದ ಸಂಚಾಲಕ ಡಾ. ರಾಜಕುಮಾರ ಹೆಬ್ಬಾಳೆ ಮಂಡಿಸಿದರು. ಡಾ. ಉಮಾಕಾಂತ ಪಾಟೀಲ ಅನುಮೋದಿಸಿದರು. ಸಭೀಕ ಪಾರಂಪರಿಕ ವೈದ್ಯರು ಹಾಗೂ ವೇದಿಕೆ ಮೇಲಿರುವ ಗಣ್ಯರು ಕರತಾಡನ ಮೂಲಕ ಒಪ್ಪಿಗೆ ಸೂಚಿಸಿದರು. ಡಾ. ಸಂಜೀವಕುಮಾರ ಜುಮ್ಮಾ ನಿರೂಪಿಸಿದರು. ಕಜಾಪ ಜಿಲ್ಲಾಧ್ಯಕ್ಷೆ ಮಲ್ಲಮ್ಮ ಸಂತಾಜಿ ವಂದಿಸಿದರು.

## ಸಭಾಪತಿಗಳಿಂದ ಸಂತಾಪ

ನಿಷ್ಕಳಂಕ ವ್ಯಕ್ತಿತ್ವವನ್ನು ಹೊಂದಿದ್ದರು. ಪತ್ರಕರ್ತರಿಗೆ ಬೆನ್ನು ತಟ್ಟಿ ಹುರುದುಂಬಿಸುತ್ತಿದ್ದರು. ಅವರ ಅಗಲಿಕೆ ಪತ್ರಿಕಾ ರಂಗಕ್ಕೆ ಹಾಗೂ ರಾಜಕರಣಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿದೆ. ಭಗವಂತ ಅವರ ಅತ್ಮಕೆ ಶಾಂತಿ ನೀಡಲಿ ಹಾಗೂ ಅವರ ಕುಟುಂಬದವರಿಗೆ ಅವರ ಅಗಲಿಕೆಯಿಂದಾಗಿರುವ ನಷ್ಟವನ್ನು ತುಂಬುವಂತ ಶಕ್ತಿ ನೀಡಲಿ ಎಂದು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಸಂತಾಪ ವ್ಯಕ್ತಪಡಿಸಿದರು.

ಸಂತಾಪ ಸೂಚಕವನ್ನು ಬೆಂಬಲಿಸಿ ಮಾತನಾಡಿದ ಅರಣ್ಯ, ಜೀವಿ ಪರಿಸ್ಥಿತಿ ಹಾಗೂ ಪರಿಸರ ಇಲಾಖೆ ಸಚಿವ ಈಶ್ವರ್ ಬಿ. ಖಂಡ್ರೆ, ಕಾಜಿ ಅರ್ಷದ್ ಅಲಿ ಅವರು ಓರ್ವ ಸಜ್ಜನ ರಾಜಕಾರಣಿಯಾಗಿದ್ದರು. ಅಲ್ಲದೇ ಪತ್ರಕರ್ತರೂ ಸಹ ಆಗಿದ್ದರು. ಅವರು ಬೀದರ್ ಜಿಲ್ಲೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾರೆ ಎಂದು ತಿಳಿಸುತ್ತಾ ಸದನದ ಪರವಾಗಿ, ಎಲ್ಲರ ಪರವಾಗಿ ನಾಡಿನ ಜನತೆಯ ಪರವಾಗಿ ಮೃತ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದು ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು.

ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡುತ್ತಾ, ಕಾಜಿ ಅರ್ಷದ್ ಅಲಿ ಅವರು ಎರಡು ಬಾರಿ ವಿಧನ ಪರಿಷತ್ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಮಾಜಿ ಮುಖ್ಯ ಮಂತ್ರಿ ದಿ. ಧರ್ಮಸಿಂಗ್ ಅವರೊಂದಿಗೆ ಉತ್ತಮ ಒಡನಾಟವನ್ನು ಇಟ್ಟುಕೊಂಡಿದ್ದರು. ಉತ್ತರ ಭಾಗದ ಜಿಲ್ಲೆಗಳ ಸಮಸ್ಯೆಗಳು ಬಂದಾಗ ಅವರು ಅದರ ಪರವಾಗಿ ಎದ್ದು ನಿಲ್ಲುತ್ತಿದ್ದರು. ಅವರ ಅಗಲಿಕೆ ನಾಡಿಗೆ ತುಂಬಲಾರದ ನಷ್ಟವನ್ನುಂಟು ಮಾಡಿದೆ ಎಂದು ತಿಳಿಸುತ್ತಾ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

ನಂತರ ಮೃತರ ಗೌರವಾರ್ಥ ಸದನದಲ್ಲಿ ಎಲ್ಲಾ ಸದಸ್ಯರು ಒಂದು ನಿಮಿಷಗಳ ಮೌನಾಚರಣೆ ಮಾಡಿದರು.

## ಪತ್ರಿಕೆಗಳಿಗೆ ಪ್ರೋತ್ಸಾಹದ ಜಾಹೀರಾತು ನೀಡಿ

ಸಚಿವ ಎಚ್.ಕೆ. ಪಾಟೀಲರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ 5 ವರ್ಷ ಪೂರೈಸಿರುವ ಒಬಿಸಿ/ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೆ ಪ್ರತಿ ಮಾಹೆ 02 ಪುಟಗಳ ಸರ್ಕಾರದ ಪ್ರೋತ್ಸಾಹ ರೂಪದ ಜಾಹೀರಾತನ್ನು ಇಲಾಖೆಯಿಂದ ಬಿಡುಗಡೆ ಮಾಡಲಾಗುತ್ತಿದೆ. ಇದರಿಂದ ಈ ಸಮುದಾಯದ ಪತ್ರಿಕೆಗಳ ಬೆಳವಣಿಗೆಗೆ ಸರ್ಕಾರವು ಸಹಾಯ, ಸಹಕಾರ ನೀಡುತ್ತಿದೆ. ಪ್ರಸ್ತುತ ದಿನಮಾನದಲ್ಲಿ ರಾಜ್ಯದಲ್ಲಿ ಸಣ್ಣ ಪತ್ರಿಕೆಗಳನ್ನು ನಡೆಸಲು ತೀರಾ ಸಂಕಷ್ಟವನ್ನು ಅನುಭವಿಸುವಂತಾಗಿದೆ. ಹೀಗಾಗಿ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದಿಂದ ಸ್ಥಳೀಯ ಹಾಗೂ ಪ್ರಾದೇಶಿಕ ದಿನಪತ್ರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸರ್ಕಾರದ ಗಮನಕ್ಕೆ ನಿರಂತರವಾಗಿ ತರುತ್ತಲೇ ಇದ್ದೇವೆ. ಹೀಗಾಗಿ ಸಂಘದ ಬೇಡಿಕೆಗಳನ್ನು ಈಡೇರಿಸಲು ಸಹಕರಿಸಬೇಕು ಎಂದು ಮನವಿ ಮಾಡಿಕೊಂಡರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಜಾಹೀರಾತು ನೀತಿ 2013 ಅನುಷ್ಠಾನ ನಿಯಮಗಳು 2014 ರ ನಿಯಮ 14 ರ ಟಿಪ್ಪಣೆ 3 ರ ಪ್ರಕಾರ

ದಿನಾಂಕ: 01–04–2023 ರಿಂದ ಅನ್ವಯವಾಗುವಂತೆ ಹಾಲೇ ಜಾಹೀರಾತು ದರಕ್ಕೆ ಶೇ. 12 ರಷ್ಟು ಜಾಹೀರಾತು ದರವನ್ನು ಹೆಚ್ಚಳ ಮಾಡಬೇಕು. ದಿನಾಂಕ: 01–04–2025 ರಿಂದ ಅನ್ವಯವಾಗುವಂತೆ ಹಾಲೀ ಜಾಹೀರಾತು ದರಕ್ಕೆ ಮತ್ತೇ ಶೇ. 12 ರಷ್ಟು ಹೀಗೆ ಶೇ.24 ರಷ್ಟು ಜಾಹೀರಾತು ದರವನ್ನು ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು.ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಅಂಗೀಕೃತ ಜಾಹೀರಾತು ಸಂಸ್ಥೆಗಳ ಮೂಲಕ ಬಿಡುಗಡೆ ಮಾಡಲಾಗುವ ಎಲ್ಲಾ ಬಗೆಯ ಜಾಹೀರಾತು ವೆಚ್ಚದ ಬಿಲ್ಲುಗಳಲ್ಲಿ ಸರ್ಕಾರದ ಯಾವುದೇ ಆದೇಶ ಇಲ್ಲದಿದ್ದರೂ ಸಹ ಕಾನೂನು ಬಾಹಿರವಾಗಿ ಐಎನ್ಎಸ್ ಪ್ರಕಾರಕಡಿತಗೊಳಿಸುತ್ತಿರುವ ಶೇ.15 ರಷ್ಟು ಕಮಿಷನ್ ಹಣವನ್ನು ಕಡಿತಗೊಳಿಸುವುದನ್ನು ತಕ್ಷಣವೇ ನಿಲ್ಲಿಸಬೇಕು. ಎಲ್ಲಾ ಬಗೆಯ ಜಾಹೀರಾತುಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದಲೇ ಬಿಡುಗಡೆ ಮಾಡಬೇಕು, ಖಾಸಗಿ ಜಾಹೀರಾತು ಏಜೆನ್ಸಿಗಳ ಕಮಿಷನ್ ಹಣವನ್ನು ಟೆಂಡರ್ ಮತ್ತು ವರ್ಗೀಕೃತ ಮತ್ತು ಆಕರ್ಷಕ ಜಾಹೀರಾತುಗಳನ್ನು ನೀಡುವ ಕಚೇರಿಗಳೇ ಅದರ ಶೇ.15 ರಷ್ಟು ಕಮಿಷನ್ ಹಣವನ್ನು ಪಾವತಿಸುವ ವ್ಯವಸ್ಥೆಯನ್ನು ಮಾಡಿ ಸರ್ಕಾರದಿಂದ ಆದೇಶ ಹೊರಡಿಸಬೇಕು ಎಂದು ಮನವಿ ಮೂಲಕ ತಿಳಿಸಿದರು.

ಸಂಘದ ಪ್ರಮುಖವಾದ ಈ ಬೇಡಿಕೆಗಳನ್ನು ಮುಖ್ಯಮಂತ್ರಿಯವರ ಗಮನಕ್ಕೆ ತರುವುದರ ಮೂಲಕ ತಾವುಗಳು ಈಡೇರಿಸಿ ಕೊಟ್ಟು ರಾಜ್ಯದ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಬೆಳವಣಿಗೆಗೆ ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರವನ್ನು ನೀಡುವಂತೆ ವಿನಂತಿಸಿದರು.

ಈ ವೇಳೆ ಸಂಘದ ರಾಜ್ಯ ಉಪಾಧ್ಯಕ್ಷರಾದ ಭೀಮರಾವ್ ಹದ್ದಿನಾಳ, ಎಚ್.ಎಸ್. ಹರೀಶ್ ಎಚ್.ಎಸ್, ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಎಸ್. ಕೃಷ್ಣಮೂರ್ತಿ,

ಖಜಾಂಚಿ ವೇದಮೂರ್ತಿ ಎಸ್.ಟಿ ಹಾಗೂ ಪದಾಧಿಕಾರಿಗಳಾದ ಮೊಹ್ಮದ್ ಯುನೂಸ್, ವಿಶ್ವನಾಥ ಬೆಳಗಲಿಮಠ, ಜಾಕೀರಹುಸೇನ್, ಮುನಿರಾಜು, ಸಿ. ಕರುಣಾಕರ್, ಮಹೇಶ್ ಕುಮಾರ ಸಿ.ಎನ್, ಮಲ್ಲಿಕಾರ್ಜುನ ಪಿ.ಎಸ್. ಮಂಜುನಾಥಗೌಡ, ಮದನ್, ಶಿವಶಂಕರ, ಮಾಲತೇಶ ಅರಸ್, ಸಿ. ರಂಗನಾಥ, ರಮೇಶರೆಡ್ಡಿ, ಅಲ್ಲಾಭಕ್ಷ ಹಣಗಿ, ಎನ್.ಆರ್. ಭಾಂಡಗೆ, ಅಶೋಕ, ಮೊಹ್ಮದ್ ಖಲೀಲ್ ಸೇರಿದಂತೆ ಇತರರು ಇದ್ದರು.

## ನಗದು ಸೇರಿ 7 ಲಕ್ಷ ಮೌಲ್ಯದ ಸ್ವತ್ತು ಜಪ್ತಿ

ತೆಗೆದು ಅಂಗಡಿಯಲ್ಲಿನ ವಿವಿಧ ತಾಮ್ರ, ಹಿತ್ತಾಳೆ, ಸ್ಟೀಲ್ ಸೇರಿದಂತೆ ಇತರ ನಮೂನೆಯ ಸುಮಾರು ?10 ಲಕ್ಷ ರೂಪಾಯಿ ಮೌಲ್ಯದ ಸಾಮಾನುಗಳನ್ನು ಕಳವು ಮಾಡಿದ್ದರು.

ಸಿಪಿಐ ಹನುಮರೆಡ್ಡೆಪ್ಪ, ಪಿಎಸ್ಐಗಳಾದ ಅಶೋಕ, ರಮೇಶ ನೇತೃತ್ವದ ತಂಡವು ಭಾನುವಾರ ಮಹಾರಾಷ್ಟ್ರ ರಾಜ್ಯದ ಲಾತೂರಿನ ರಫೀಕ್ (30), ನರಸಿಂಗ (30), ಪ್ರಕಾಶ (30)ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಇಬ್ಬರು ತಲೆ ಮರೆಸಿಕೊಂಡಿದ್ದು, ಅವರ ಬಂಧನಕ್ಕಾಗಿ ಶೋಧ ಮುಂದುವರಿದಿದೆ. ಕಳ್ಳರ ಬಂಧನ ತಂಡದಲ್ಲಿ ಕಾನ್ಸ್‌ಟೆಬಲ್‌ಗಳಾದ ಗುರುನಾಥ, ಶಾಮರಾಯ, ಶಿವರಾಜ, ಉಮಾಕಾಂತ ದಾನಾ, ಭಗವಾನ, ರಾಜೇಂದ್ರ, ಮಹಾದೇವ ಹಿರೇಮಠ, ಜಗದೀಶ ಇದ್ದರು.

## ಕಿಶೋರ ಕಾರ್ಮಿಕರು ಪತ್ತೆ

ತೊಡಗಿಸುವುದು ಶಿಕ್ಷಾರ್ಹ ಅಪರಾಧವಾಗುತ್ತದೆ. ಯಾವುದೇ ಕಾರಣಕ್ಕೂ ಮಕ್ಕಳನ್ನು ಕರೆದುಕೊಂಡು ಹೋಗಿ ಬಾಲಕಾರ್ಮಿಕತೆಯಲ್ಲಿ ತೊಡಗಿಸಬಾರದು ಹಾಗೂ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ನೀಡಬೇಕು ಎಂದರು.

ಈ ವೇಳೆ ವಾಹನ ಚಾಲಕರು, ಮಾಲೀಕರಿಗೆ ಹಾಗೂ ಪಾಲಕರಿಗೆ, ಪೋಷಕರಿಗೆ ಸ್ಟಿಕ್ಕರ್ ಮತ್ತು ಕರಪತ್ರಗಳನ್ನು ನೀಡಿ ತಿಳಿವಳಿಕೆ ಮೂಡಿಸಲಾಯಿತು.

ಈ ವೇಳೆ ರಾಯಚೂರು 1ನೇ ವೃತ್ತದ ಕಾರ್ಮಿಕ ನಿರೀಕ್ಷಕರಾದ ಮಹ್ಮದ್ ಉಮರ್ ಅಬ್ದುಲ್ ಘನಿ, ಬಿ.ಇ.ಓ ಕಾರ್ಯಾಲಯದ ಇ.ಸಿ.ಓ ಮಂಜುನಾಥ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ದಿನೇಶ್ ರಮೇಶ್ ಯಾದವ್, ಮಕ್ಕಳ ಸಹಾಯವಾಣಿ ಘಟಕದ ಸಿಬ್ಬಂದಿ ತಾಯ್‌ರಾಜ್ ಸೇರಿದಂತೆ ಇತರರು ಇದ್ದರು.

## ಗೌರವದೊಂದಿಗೆ ಮಾಜಿ ಎಂಎಲ್‌ಸಿ ಅಂತ್ಯಕ್ರಿಯೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 04 : ವಿಧಾನ ಪರಿಷತ್ ಮಾಜಿ ಮಾಜಿ ಸದಸ್ಯ ಕಾಜಿ ಅರ್ಷದ್ ಅಲಿ (75) ಅವರ ಅಂತ್ಯಕ್ರಿಯೆ ಸಕಲ ಪೊಲೀಸ್ ಗೌರವಗಳೊಂದಿಗೆ ಭಾಲ್ಕಿಯಲ್ಲಿ ಮಂಗಳವಾರ ಮಧ್ಯಾಹ್ನ ನಡೆಯಿತು.

ಭಾಲ್ಕಿಯ ಅವರ ಜಮೀನಿನಲ್ಲಿ ಪ್ರಾರ್ಥನೆ ಬಳಿಕ ಧಾರ್ಮಿಕ ವಿಧಿ, ವಿಧಾನಗನ್ನು ನೆರವೇರಿಸಿ ಅಂತ್ಯಕ್ರಿಯೆ ಮಾಡಲಾಯಿತು.

ಇದಕ್ಕೂ ಮುನ್ನ ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಗೌರವ ಸಮರ್ಪಿಸಿದರು.

ಸಂಸದ ಸಾಗರ್ ಖಂಡ್ರೆ, ಡಿವೈಎಸ್ಪಿ ಶಿವಾನಂದ ಪವಾಡಶೆಟ್ಟಿ ಅಂತಿಮ ದರ್ಶನ ಪಡೆದು, ಗೌರವ ಸಲ್ಲಿಸಿದರು.

ಬೀದರ್‌ನ ನೂರ್‌ಖಾನ್ ತಾಲೀಂನಲ್ಲಿರುವ ಅರ್ಷದ್ ಅಲಿ ಅವರ ನಿವಾಸದಿಂದ ಜಾಮಾ ಮಸೀದಿ ವರೆಗೆ ಪಾರ್ಥಿವ ಶರೀರದ ಮೆರವಣಿಗೆ ನಡೆಯಿತು. ಜಾಮಾ ಮಸೀದಿಯಲ್ಲಿ ಅಂತ್ಯಕ್ರಿಯೆಯ ಪ್ರಾರ್ಥನೆ ಜರುಗಿತು. ಬೀದರ್ ದಕ್ಷಿಣ ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ, ಜಿಲ್ಲಾ ಬಿಜೆಪಿ ಅಧ್ಯಕ್ಷ ಸೋಮನಾಥ ಪಾಟೀಲ, ಬಿಜೆಪಿ ಮುಖಂಡ ಬಾಬುವಾಲಿ, ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ, ಕಾಂಗ್ರೆಸ್ ಮುಖಂಡರಾದ ನರಸಿಂಗರಾವ್ ಸೂರ್ಯವಂಶಿ, ವಿಜಯಸಿಂಗ್, ಅರವಿಂದಕುಮಾರ ಅರಳಿ, ಕೆ.ಪುಂಡಲೀಕರಾವ್, ಆನಂದ ದೇವಪ್ಪ, ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಉದ್ಯಮಿಗಳಾದ ಬಿ.ಜಿ. ಶೆಟಕಾರ್, ರಮೇಶ ಗೋಯಲ್ ಮತ್ತಿತರರು ಭೇಟಿ ಕೊಟ್ಟು ದರ್ಶನ ಪಡೆದರು. ಬಳಿಕ ಭಾಲ್ಕಿಗೆ ಪಾರ್ಥಿವ ಶರೀರ ಕೊಂಡೊಯ್ಯಲಾಯಿತು. ಸೋಮವಾರ ಸಂಜೆ ನಗರದಲ್ಲಿ ಹೃದಯಾಘಾತದಿಂದ ಅರ್ಷದ್ ಅಲಿ ಕೊನೆಯುಸಿರೆಳೆದಿದ್ದರು.

## ರೇಖಾ ನಾಗಶೆಟ್ಟಿ ಅವರಿಗೆ ಪಿಹೆಚ್.ಡಿ.



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮಾ.04:ಗುಲಬರ್ಗಾ ವಿಶ್ವವಿದ್ಯಾಲಯವು ಮನೋವಿಜ್ಞಾನ ವಿಭಾಗದಲ್ಲಿ ಶ್ರೀಮತಿ ರೇಖಾ ನಾಗಶೆಟ್ಟಿ ಅವರಿಗೆ ಪಿಹೆಚ್.ಡಿ. ಪದವಿ ಪ್ರಕಟಿಸಿದೆ.

ಡಾ.ಶಿವಕುಮಾರ ಎಸ್.ಚೇಂಗಟಿ ಅವರ ಮಾರ್ಗದರ್ಶನದಲ್ಲಿ "ಎಫೆಕ್ಟ್ ಆಫ್ ಸ್ಟ್ರೇಸ್ ಆಂಕ್ಸಿಎಟಿ ಆಂಡ್ ಡಿಪ್ರೇಶನ್ ಆನ್ ಮೆಂಟಲ್ ಹೆಲ್ತ್ ಆಫ್ ಸ್ಟುಡೆ–ಂಟ್ಸ್" (EFFECT OF STRESS,ANXIETY ANDDEPRESSION ONMENTALHEALTH OF STUDENTS) ಕುರಿತು ರೇಖಾ ನಾಗಶೆಟ್ಟಿ ಪ್ರಬಂಧವನ್ನು ಮಂಡಿಸಿದ್ದರು.

## ಕೊನೆ ಮುಖ್ಯಮಂತ್ರಿ: ಕಾರಜೋಳ ವ್ಯಂಗ್ಯ

ಡಿ.ಕೆ. ಶಿವಕುಮಾರ ಅವರಿಗೆ ಜ್ಯೋತಿಷ ಕೇಳುವುದು ಹವ್ಯಾಸ ಆಗಿದೆ. ಅದನ್ನು ನಂಬಿ ನಾನು ಮುಖ್ಯಮಂತ್ರಿ ಆಗುತ್ತೇನೆ ಎಂದು ಭಾವಿಸಿದ್ದಾರೆ. ಆದರೆ, ಅವರು ತಿಪ್ಪರಲಾಗ ಹಾಕಿದರೂ ಕಾಂಗ್ರೆಸ್‌ನವರು ಶಿವಕುಮಾರ ಅವರನ್ನು ಮುಖ್ಯಮಂತ್ರಿ ಮಾಡುವುದಿಲ್ಲ ಎಂದವರು ಹೇಳಿದರು. ರಾಜ್ಯ ಬಿಜೆಪಿಯಲ್ಲಿ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿವೆ. ಕೆಲವೇ ದಿನಗಳಲ್ಲಿ ಪಕ್ಷದಲ್ಲಿನ ಎಲ್ಲ ಸಮಸ್ಯೆ ಬಗೆಹರಿಯಲಿವೆ. ಮೂರು ರಾಜ್ಯಗಳ ಚುನಾವಣೆ ಇದ್ದದ್ದರಿಂದ ರಾಷ್ಟ್ರೀಯ ನಾಯಕರಿಗೆ ಕರ್ನಾಟಕದಲ್ಲಿನ ಗೊಂದಲ ನಿವಾರಿಸಲು ಕಾಲಾವಕಾಶ ಸಿಕ್ಕಿರಲಿಲ್ಲ. ಈಗ ಚುನಾವಣೆಗಳು ಮುಗಿದಿವೆ. ಎಲ್ಲ ರೀತಿಯ ಗೊಂದಲಗಳನ್ನು ನಿವಾರಿಸುತ್ತಾರೆ. ಪುನಃ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಕಾರಜೋಳ ಹೇಳಿದರು. ರಾಜ್ಯ ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥನಾರಾಯಣ ಮಾತನಾಡಿ, ರಾಜ್ಯ ಸರ್ಕಾರ ಮತ್ತೆ ಈ ವರ್ಷದ ಬಜೆಟ್‌ನಲ್ಲೂ ಸಹ ಪರಿಶಿಷ್ಟರ ಪಾಲಿನ ಎಸ್.ಈ.ಪಿ, ಟಿ.ಎಸ್.ಪಿ ಹಣ ಬಳಿಕೆ ಮಾಡಿದೆ. ಇದು ದುರದೃಷ್ಟಕರ. ಹಾಗಾಗಿ ಬಿಜೆಪಿ ವಿದನ ಸೌಧದ ಒಳಗೂ ಹಾಗೂ ಹೊರಗೂ ಹೋರಾಟ ನಡೆಸುತ್ತಿದೆ. ಬೀದರ್‌ನಲ್ಲಿ ಮಂಗಳವಾರ ಸರ್ಕರದ ವಿರೂದ್ಧ ಹೋರಾಟ ಕೈಗೊಂಡು ಯಾವುದೇ ಕಾರಣಕ್ಕೂ ಎಸ್.ಈ.ಪಿ ಹಾಗೂ ಟಿ.ಎಸ್.ಪಿ ಹಣ ಅನ್ಯ ಕಾರ್ಯಗಳಿಗೆ ಬಳಿಸದಂತೆ ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮುಖೇನ ಮನವಿ ಸಲ್ಲಿಸಲಾಗಿದೆ ಎಂದರು.

ಪಕ್ಷದ ರಾಜ್ಯ ಕಾರ್ಯದರ್ಶಿಯೂ ಆದ ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ, ಜಿಲ್ಲಾ ಬಿಜೆಪಿ ಅಧ್ಯಕ್ಷ ಸೋಮನಾಥ ಪಾಟೀಲ, ಜಿಲ್ಲಾ ಪ್ರಧಾನ ಕಾರ್ಯದರ್ಶ ಪೀರಪ್ಪ ಔರಾದೆ, ಮುಖಂಡರಾದ ಗುರುನಾಥ ಜ್ಯಾಂತಿಕರ್, ಗುಂಡಪ್ಪ ವಕೀಲ, ಬಸವರಾಜ ಆರ್ಯ, ಈಶ್ವರಸಿಂಗ್ ಠಾಕೂರ್, ಫರ್ನಾಂಡಿಸ್ ಹಿಪ್ಪಳಗಾಂವ್, ಸುಧೀರ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.4– ಹೆಸ್ಕಾಂ ಬೇವೂರ ಶಾಖಾ ವ್ಯಾಪ್ತಿಯಲ್ಲಿ ಎಫ್–6 ಹಳ್ಳೂರ ಇಐಪಿ ಡಬಲ್ ಸರ್ಕ್ಯೂಟ ಕಾಮಗಾರಿಯನ್ನು ಕೈಗೊಳ್ಳುವ ಪ್ರಯುಕ್ತ ಮಾರ್ಚ 6, 8, 9 ಮತ್ತು 11 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಬೇವೂರ ಶಾಖಾ ವ್ಯಾಪ್ತಿಯ ಹಳ್ಳೂರ, ಬೇವೂರ, ಚೌಡಾಪೂರ ಮತ್ತು ಭೈರಮಟ್ಟಿ ಗ್ರಾಮಗಳಿಗೆ ಸರಬರಾಜು ಆಗುವ ನಿರಂತರ ವಿದ್ಯುತ್ ಜ್ಯೋತಿ ಮಾರ್ಗದಲ್ಲಿ ವಿದ್ಯುತ್ ವ್ಯತ್ಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಮಾ.8 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ


ಮಲ್ಲಮ್ಮ ನುಡಿ ವಾರ್ತೆ

ಬೀದರ:ಮಾ.04:ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಮಾರ್ಚ.8 ರಂದು ಬೆಳಿಗ್ಗೆ 11 ಗಂಟೆಗೆ ರಾಜ್ಯ ಸರಕಾರಿ ನೌಕರರ ಭವನ ಪ್ರಥಾಪ ನಗರ ಬೀದರದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾ.ಎ ಕಾರ್ಯಕ್ರಮದ ಘನ ಉಪಸ್ಥಿತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ ಅವರು ವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ಲೋಕಸಭಾ ಸದಸ್ಯರಾದ ಸಾಗರ ಈಶ್ವರ ಖಂಡ್ರೆ,, ಔರಾದ (ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ, ಬಸವಕಲ್ಯಾಣ ಶಾಸಕರಾದ ಶರಣು ಸಲಗರ, ಬೀದರ ದಕ್ಷಿಣ ಶಾಸಕರಾದ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕರಾದ ಡಾ.ಸಿದ್ಧಲಿಂಗಪ್ಪ ಎನ್.ಪಾಟೀಲ ಹಾಗೂ ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ ಜಿ.ನಮೋಶಿ, ಭೀಮರಾವ ಬಿ.ಪಾಟೀಲ, ಡಾ.ಎಂ.ಜಿ.ಮೂಳೆ ಹಾಗೂ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಾಲಾ ನಾರಾಯಣ, ಬೀದರ ನಗರಸಭೆ ಅಧ್ಯಕ್ಷರಾದ ಮಹಮ್ಮದ ಗೌಸ್, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಸವರಾಜ ಜಾಬಶೆಟ್ಟಿ ಅವರುಗಳು ಭಾಗವಹಿಸಲಿದ್ದಾರೆ.

## ಖಾಜಿ ಅರ್ಷದ್ ಅಲಿ ಅವರ ನಿಧನಕ್ಕೆ ಸಚಿವ ರಹೀಂ ಖಾನ್ ಸಂತಾಪ



ಮಲ್ಲಮ್ಮ ನುಡಿ ವಾರ್ತೆ

ಬೀದರ:ಮಾ.04:ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್

ಅವರು ಮಾಜಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ (ಬೀದರ್) ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯರಾದ ಜನಾಬ್ ಖಾಜಿ ಅರ್ಷದ್ ಅಲಿ ಅವರ ನಿಧನದ ಸುದ್ದಿ ಕೇಳಿ ತೀವ್ರ ದುಃಖವಾಗಿದೆ.ಖಾಜಿ ಅರ್ಷದ್ ಅಲಿ ಅವರು ದೀರ್ಘಕಾಲ ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದರು ಮತ್ತು ಸಾರ್ವಜನಿಕ ಸೇವೆಗಾಗಿ ಯಾವಾಗಲೂ ಶ್ರಮಿಸಿದರು. ಅವರ ಅಗಲಿಕೆ ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

## ಹೊಸ ಇಂದಿರಾ ಕ್ಯಾಂಟೀನ್ ಆರಂಭಿಸಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 04 :ನಗರದ ಮೈಲೂರು ಕ್ರಾಸ್ ಬಳಿ ಹೊಸ ಇಂದಿರಾ ಕ್ಯಾಂಟೀನ್ ಆರಂಭಿಸಬೇಕು ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವಿನೋದಕುಮಾರ ಅಪ್ಪೆ ಬೇಡಿಕೆ ಮಂಡಿಸಿದ್ದಾರೆ.

ಸಾರ್ವಜನಿಕರೊಂದಿಗೆ ನಗರದಲ್ಲಿ ಮಂಗಳವಾರ ನಗರಸಭೆ ಆಯುಕ್ತ ಶಿವರಾಜ ರಾಠೋಡ್ ಅವರನ್ನು ಭೇಟಿ ಮಾಡಿ ಈ ಕುರಿತು ಮನವಿ ಪತ್ರ ಸಲ್ಲಿಸಿದರು.

ಮೈಲೂರು ಕ್ರಾಸ್ ಜನನಿಬಿಡ ಸ್ಥಳವಾಗಿದೆ. ಬಡ ಕೂಲಿ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಆಸ್ಪತ್ರೆಗೆ ಬರುವ ರೋಗಿಗಳು, ಪ್ರಯಾಣಿಕರು, ವಿದ್ಯಾರ್ಥಿಗಳು ಸೇರಿದಂತೆ ಈ ಪ್ರದೇಶದಲ್ಲಿ ನಿತ್ಯ ಸಾವಿರಾರು ಜನ ಓಡಾಡುತ್ತಾರೆ. ಆದರೆ, ಕೈಗೆಟಕುವ ದರದಲ್ಲಿ ತಿಂಡಿ, ಊಟ ಸಿಗದ ಕಾರಣ ಹೈರಾಣಾಗುತ್ತಿದ್ದಾರೆ ಎಂದು ಗಮನ ಸೆಳೆದರು.

ಮೈಲೂರು ಕ್ರಾಸ್‌ನಲ್ಲಿ ಇಂದಿರಾ ಕ್ಯಾಂಟೀನ್ ಪ್ರಾರಂಭಿಸಿದರೆ ಬಡವರಿಗೆ ಅನುಕೂಲವಾಗಲಿದೆ. ಅತ್ಯಂತ ಕಡಿಮೆ ದರದಲ್ಲಿ ತಿಂಡಿ, ಊಟ ಸಿಗಲಿದೆ ಎಂದು ತಿಳಿಸಿದರು.

ಪೌರಾಯುಕ್ತರು ಈ ಕುರಿತು ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದು ವಿನೋದಕುಮಾರ ಅಪ್ಪೆ ಹೇಳಿದರು.

ನಗರಸಭೆ ಸದಸ್ಯ ಸೂರ್ಯಕಾಂತ ಸಾಧುರೆ, ಪ್ರಮುಖರಾದ ಅಕ್ಷಯ್ ವರ್ಧನ್, ಯೋಗೇಶ್, ರಾಹುಲ್, ಶ್ರೀಕಾಂತ ಹಿಂದೊಡ್ಡಿ ಮತ್ತಿತರರು ಇದ್ದರು.

## ಬೀದರಿನ ವಿಶ್ವವಿದ್ಯಾಲಯದ ಕುಲ ಸಚಿವರು ಆಡಳಿತ ಸುರೇಖಾ ಏಂಖ ಅವರ ಮುಡಿಗೆ ರಾಜ್ಯಮಟ್ಟದ 'ರಾಣಿ ಅಬ್ಬಕ್ಕದೇವಿ' ಪ್ರಶಸ್ತಿ.

ಮಲ್ಲಮ್ಮ ನುಡಿ ವಾರ್ತೆ

ಬೀದರ್‌ಮಾ04-ಅಂತರಾಷ್ಟ್ರೀಯ ಮಹಿಳಾದಿನಾಚರಣೆಯಅಂಗವಾಗಿ ಕೊಡ ಮಾಡುವ ರಾಜ್ಯಮಟ್ಟದ "ರಾಣಿ ಅಬ್ಬಕ್ಕದೇವಿ" ಪ್ರಶಸ್ತಿಗೆ ಬೀದರ ವಿಶ್ವವಿದ್ಯಾಲಯದ ಕುಲ ಸಚಿವರು ಆಡಳಿತ ಸುರೇಖಾ KAS ಭಾಜನರಾಗಿದ್ದಾರೆ.




ಕರ್ನಾಟಕ ರಾಜ್ಯ ಸರಕಾರಿ ನೌಕರರ ಮಹಿಳಾ ಸಂಘವು ಕಲಬುರ್ಗಿಯಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ರಾಜ್ಯಮಟ್ಟದಮಹಿಳಾಸಮಾವೇಶವನ್ನು ಮಾಡುತ್ತಿದೆ. ಸಮಾವೇಶದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುತ್ತಿದೆ. ಈ ಪ್ರಶಸ್ತಿಗೆ ಭಾಜನರಾದ ಸಾಧಕರ ಸಾಲಿನಲ್ಲಿ ಬೀದರ ವಿಶ್ವ ವಿದ್ಯಾಲಯದ ಕುಲ ಸಚಿವರು ಆಡಳಿತ ಸು-ರೇಖಾ KAS ಅವರಿರುವುದು ನಮಗೆಲ್ಲರಿಗೂ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಅದು ಅವರ ವ್ಯಕ್ತಿತ್ವಕ್ಕೆ ಸಂದ ಗೌರವ ನಮ್ಮ ಮಹಿಳೆಯರ ಸಾಧನೆಗಳನ್ನು ಗುರುತಿಸಿ ಗೌರವಿಸುತ್ತಿರುವ ರಾಜ್ಯ ಸರಕಾರಿ ನೌಕರರ ಮಹಿಳಾ ಸಂಘಕ್ಕೆ ಬೀದರಿನ ಸಮಸ್ತ ಜನತೆಯ ಪರವಾಗಿ ಅನಂತ ಧನ್ಯವಾದಗಳು. ಮತ್ತು ಪ್ರಶಸ್ತಿಗೆ ಭಾಜನರಾದ ಸಾಧಕರಿಗೆ ಅಭಿನಂದನೆಗಳು ಎಂದು ಜಿಲ್ಲಾ ಸರಕಾರಿ ನೌಕರರ ಮಹಿಳಾ ಸಂಘದ ಅಧ್ಯಕ್ಷರಾದ ಶ್ರೀಮತಿ ಬಿಜೆ ಪಾರ್ವತಿ ವಿ ಸೋನಾರೆ, ಪ್ರಧಾನ ಕಾರ್ಯದರ್ಶಿಗಳಾದ ಗೀತಾ ಗಡ್ಡೆ, ಕೋಶಾಧ್ಯಕ್ಷರಾದ ಸಿಂಧು ರಘು ಎಚ್.ಎಸ್ ಮತ್ತು ಹಿರಿಯ ಉಪಾಧ್ಯಕ್ಷರಾದ ವೈಶಾಲಿ ದೇವಪ್ಪ, ಪದ್ಮಾವತಿ ಮಡಿವಾಳ, ವಿಜಯಶೀಲಾ ಕಆಔ, ಶಕುಂತಲಾ ದಂಡಿ, ಸುಜಾತಾ ಪೂಜಾರಿ, ಭಾನುಪ್ರೀಯಾ ಅರಳಿ, ಡಾ ಸುಧಾರಾಣಿ, ಉಮಾದೇವಿ, ಕಾವೇರಿ ಆರ್ ಫುಲೇಕಾರ, ನರಸಮ್ಮ ಪಾಟೀಲ್, ಶಾರದಾ ಕಮಲ್ಕರ್, ಮಸ್ತಾನ ಬಿ, ವಿಜಯಕುಮಾರಿ ಬಿರಾದರ, ರೇಣುಕಾ ಕೋಟೆ, ವಿದ್ಯಾವತಿ ಹಿರೇಮಠ, ಆರತಿ ಪಾಟೀಲ್, ಸುವರ್ಣಾ ಹೂಗಾರ, ಕ್ಲಾಮೆಂಟೀನಾ ಮುಂತಾದವರು ಹರ್ಷ ವ್ಯಕ್ತ ಪಡಿಸಿದ್ದಾರೆ.

## ಮಾ.22'ಕರ್ನಾಟಕ ಬಂದ್ ಅವಶ್ಯಕತೆ ಇಲ್ಲ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು.ಮಾ4:ಬೆಳಗಾವಿಯಲ್ಲಿ ಕಂಡಕ್ಟರ್ ಮೇಲೆ ಹಲ್ಲೆ ಖಂಡಿಸಿ ಇದೆ ಮಾರ್ಚ್ 22ರಂದು ಕನ್ನಡ ಪರ ಸಂಘಟನೆಗಳು ಅಖಂಡ ಕರ್ನಾಟಕ ಬಂದ್ ಗೆ ಕರೆ ನೀಡಿವೆ. ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಈ ಒಂದು ಕರ್ನಾಟಕ ಬಂದ್ ನಡೆಯುತ್ತೆ. ಇದೀಗ ಇದೆ ವಿಚಾರವಾಗಿ ಸಚಿವ ರಾಮಲಿಂಗ ರೆಡ್ಡಿ ಅವರು ಮಾರ್ಚ್ 22 ರಂದು ಕರ್ನಾಟಕ ಬಂದ್ ಮಾಡುವ ಅವಶ್ಯಕತೆ ಇಲ್ಲ ಎಂದು ತಿಳಿಸಿದ್ದಾರೆ.



ಸಚಿವ ರಾಮಲಿಂಗಾರೆಡ್ಡಿ ಅವರು, ಬೆಳಗಾವಿಯಲ್ಲಿ ಕಂಡಕ್ಟರ್ ಮೇಲೆ ಹಲ್ಲೆನಡೆದು 8-10 ದಿನಗಳಾಗಿವೆ. ನಮ್ಮ ಬಸ್ ಗಳಿಗೆ ಹಾಗೂ ಸಿಬ್ಬಂದಿಗೆ ಮಹಾರಾಷ್ಟ್ರದವರು ಮಸಿ ಬಳಿದರು. ಈಗ ಕರ್ನಾಟಕ ಬಂದ ಅವಶ್ಯಕತೆ ಇಲ್ಲ ಎಂದು ಮಾಧ್ಯಮಗಳಿಗೆ ಹೇಳಿದರು.

ಹೋರಾಟಗಾರರ ಕನ್ನಡದ ಮೇಲಿನ ಅಭಿಮಾನವನ್ನು ಸ್ವಾಗತಿಸುತ್ತೇವೆ. ಮಾರ್ಚ್ 22 ರಂದು ಬಂದ ಅವಶ್ಯಕತೆ ಇಲ್ಲ ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

## ಸಾರ್ವಜನಿಕರಿಗೆ ಶ್ರವಣ ಸೇವೆಗಳ ಸೌಲಭ್ಯವನ್ನು ಒದಗಿಸುವಲ್ಲಿ ನಾವೆಲ್ಲರೂ ಕೈಜೋಡಿಸೋಣ-ಡಾ.ಧ್ಯಾನೇಶ್ವರ ನಿರಗುಡೆ



ಮಲ್ಲಮ್ಮ ನುಡಿ ವಾರ್ತೆ

ಬೀದರ, ಮಾರ್ಚ.04: ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಶ್ರವಣ ಸೇವೆಗಳ ಸೌಲಭ್ಯವನ್ನು ಒದಗಿಸುವಲ್ಲಿ ನಾವೆಲ್ಲರು ಕೈಜೋಡಿಸೋಣ.ನಮ್ಮ ಜಿಲ್ಲೆಯಲ್ಲಿ ನವಜಾತ ಶಿಶುಗಳ ಉಚಿತ ಶ್ರವಣ ತಪಾಸಣೆ ಈಗಾಗಲೇ ಬ್ರೀಮ್ಸ್ ಬೋಧಕ ಆಸ್ಪತ್ರೆಯಲ್ಲಿ, ತಾಯಿ ಮತ್ತು ಮಕ್ಕಳ ಆಸ್ಪತ್ರೆ ಬೀದರ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆ ಔರಾದ ಇಲ್ಲಿ ಮಾಡಲಾಗುತ್ತಿದ್ದು, ಶ್ರವಣ ಪರಿಕ್ಷೆ ಮಾಡಿಸಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಧ್ಯಾನೇಶ್ವರ ನಿರಗುಡೆ ಮಾಹಿತಿ ನೀಡಿದರು.

ಅವರು ಮಂಗಳವಾರದಂದು ಜಿಲ್ಲಾ ನರ್ಸಿಂಗ್ ಕಾಲೇಜ ಬೀದರದಲ್ಲಿ ಹಮ್ಮಿಕೊಂಡಿದ್ದ "ಬದಲಾಗುತ್ತಿರುವ ಮನ-ಸ್ಥಿತಿ ಕಿವಿ ಮತ್ತು ಶ್ರವಣ ಆರೈಕೆಯನ್ನು ಎಲ್ಲರಿಗೂ ವಾಸ್ತವವಾಗಿಸಲು ನಿಮ್ಮನ್ನು ಸಶಕ್ತಗೊಳಿಸಿಕೊಳ್ಳಿ" ಎಂಬ ಘೋಷವಾಕ್ಯದೊಂದಿಗೆ ವಿಶ್ವ ಶ್ರವಣ ದಿನ ಆಚರಿಸಲಾಯಿತು.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾಗಳು ಎನ್.ಪಿ.ಪಿ.ಸಿ.ಡಿ ಕಾರ್ಯಕ್ರಮದ ನೋಡಲ್ ಅಧಿಕಾರಿ ಡಾ. ದಿಲೀಪ ಡೋಗ್ರೆ ಪ್ರಾಸ್ತಾವಿಕ ಮಾತನಾಡಿ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು.

ಡಾ॥ ನಿಶಾ ಕೌರ ಅವರು ಜಿಲ್ಲೆಯ ಸಮುದಾಯ ಆರೋಗ್ಯ ಅಧಿಕಾರಿಗಳಿಗೆ ಕಾರ್ಯಕ್ರಮದ ಬಗ್ಗೆ ಮಾತನಾಡಿ ಕಿವಿಯ ಸಮಸ್ಯೆಯಿಂದ ತಮ್ಮಲ್ಲಿ ಬರುವ ಮಕ್ಕಳಿಗೆ ಎನ್.ಪಿ.ಪಿ.ಸಿ.ಡಿ ಘಟಕಕ್ಕೆ ಕಳುಹಿಸುವಂತೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ॥ ಅಹೆಮದುದ್ದಿನ್, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ಡಾ. ಶಿವಶಂಕರ ಬಿ, ಜಿಲ್ಲಾ ಕುಷ್ಠರೋಗನಿಯಂತ್ರಣಾಧಿಕಾರಿಗಳು ಡಾ. ಕಿರಣ ಪಾಟೀಲ್, ಜಿಲ್ಲಾ ಸರ್ವೇಕಣಾಧಿಕಾರಿಗಳು ಡಾ. ಶಂಕರೆಪ್ಪಾ ಬೊಮ್ಮಾ, ಡಾ. ಜಿಲ್ಲಾ ಎನ್.ವಿ.ಬಿ.ಡಿ.ಸಿ.ಪಿ. ಅಧಿಕಾರಿಗಳು ಡಾ. ರಾಜಶೇಖರ ಪಾಟೀಲ್, ಪ್ರಾಂಶುಪಾಲರು ಜಿಲ್ಲಾ ತರಬೇತಿ ಕೇಂದ್ರ ಬೀದರ ಡಾ. ಸಂಜೀವ್ ಕುಮಾರ ಪಾಟೀಲ್, ತಾಲೂಕಾ ಆರೋಗ್ಯ ಅಧಿಕಾರಿಗಳು ಡಾ. ಸಂಗಾ-ರೆಡ್ಡಿ, ಡಾ. ಸುಮಂತ ಕಣ-ಜಿಕರ್ ಇ.ಎನ್.ಟಿ ವಿಭಾಗದ ಮುಖ್ಯಸ್ಥರು ಬ್ರೀಮ್ಸ್, ಡಾ. ನಿಶಾ ಕೌರ ಇ.ಎನ್.ಟಿ ತಜ್ಞರು ಬ್ರೀಮ್ಸ್, ವೆಂಕಟರಮಣ ಆಡಿಯೋಲಾಜಿಸ್ಟ್, ಡಾ. ಲಕ್ಷ್ಮಿಕಾಂತ ವಲ್ಲೆಪುರೆ ಜಿಲ್ಲಾ ಸಲಹೆಗಾರು ಕ್ಯೂ.ಎ, ಬಿಲಾಲ್, ಸೋಹೇಲ್, ಮುದ್ದಸ್ರ್, ಮಹೇಶರೆಡ್ಡಿ, ರೂಸ್ವೆಲ್ಟ್, ಶಿವಾನಂದ, ಶಾಲುಬಾಯಿ ಸೇರಿದಂತೆ ಇತರರು ಉಪಸ್ಥತರಿದ್ದರು.

## ಇಂದು ಮದ್ಯಪಾನ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ವಿಚಾರಣ ಸಂಕಿರಣ

ಮಲ್ಲಮ್ಮ ನುಡಿ ವಾರ್ತೆ

ಬೀದರ;ಮಾರ್ಚ.04:ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಬೀದರ ಹಾಗೂ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮ) ಔರಾದ ಬಾ ಇವರ ಸಂಯುಕ್ತಾಶ್ರಯದಲ್ಲಿ ಮದ್ಯಾಪನ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ವಿಚಾರ ಸಂಕಿರಣ ಕಾರ್ಯಕ್ರಮವನ್ನು ಮಾರ್ಚ.5 ರಂದು ಬೆಳಿಗ್ಗೆ 10.30ಕ್ಕೆ ಸರ್ಕಾಇರ ಕೈಗಾರಿಕಾ ತರಬೇತಿ ಸಂಸ್ಥೆ (ಮ) ಸಭಾಂಗಣ ಔರಾದ (ಬಾ)ದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಔರಾದ (ಬಾ) ಗ್ರೇಡ್-1 ತಹಸೀಲ್ದಾರರಾದ ಮಲ್ಲಶೆಟ್ಟಿ ಚಿದ್ರಿ ಅವರು ಮಾಡಲಿದ್ದಾರೆ. ಔರಾದ (ಬಾ) ಸ.ಕೈ.ತ.ಸಂ. (ಮ) ಪ್ರಾಚಾರ್ಯರರಾದ ನಾಗಭೂಷಣ ಮಠ ಇವರು ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಲಿದ್ದಾರೆ. ಹಾಗೂ ಮುಖ್ಯ ಅತಿಥಿಗಳಾಗಿ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕೋಶಾಧ್ಯಕ್ಷರಾದ ಶಿವಶಂಕರ ಟೋಕರೆ, ಔರಾದ(ಬಾ) ರೂರಲ್ ಐಟಿಐ ಪ್ರಾಚಾರ್ಯರರಾದ ರಾಜಕುಮಾರ ಮಾಳಗೆ, ಔರಾದ (ಬಾ) ಪಟ್ಟದ್ದೇವರು ಐಟಿಐ ಪ್ರಾಚಾರ್ಯರರಾದ ಸತೀಶ ಗಂದಿಗುಡಿ, ಔರಾದ (ಬಾ) ತಾಲ್ಲೂಕಾ ಕಸಾಪ ಅಧ್ಯಕ್ಷರಾದ ಬಾಲಾಜಿ ಅಮರವಾಡಿ, ಔರಾದ (ಬಾ) ಕ.ರಾ.ಸ.ನೌಕರರ ಸಂಘದ ಅಧ್ಯಕ್ಷರಾದ ಪಂಡರಿ ಆಡೆ, ಬೀದರ ಸ.ಕೈ.ತ.ಸಂ. ತರಬೇತಿ ಅಧಿಕಾರಿ ಬಾಬು ಪ್ರಭಾಜಿ ಅವರುಗಳು ಭಾಗವಹಿಸಲಿದ್ದಾರೆ. ಕಾಯ್ಕುಮದಲ್ಲಿ ವಿಶೇಷ ಉಪನ್ಯಾಸವನ್ನು ಮುಧೋಳ (ಬಿ) ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ.ಅನೀಲಕುಮಾರ ಗಡ್ಡೆ ನೀಡಲಿದ್ದಾರೆ.


## ಪೋಷಕರು ಮಕ್ಕಳಿಗೆ ಸಂಪತ್ತುಗಳಿಸುವ ಮೊದಲು ಸಂಸ್ಕಾರ ನೀಡಿ:-ರಾಜೇಶ್ವರ ಶಿವಾಚಾರ್ಯರು




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಗಡಿ ಭಾಗದಲ್ಲಿ ಕಲೆ ಸಂಗೀತ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಬಸವ ಮಹಾಮಠದ ಮಾತೆ ಮೈತ್ರಾದೇವಿ ತಾಯಿಯವರು ಪ್ರತಿವರ್ಷ ಬಸವ ಧರ್ಮ ಸಮಾವೇಶ, ಸಂಗೀತ ನಾಟಕೋತ್ಸವ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದು ಪ್ರಶಂಸನೀಯವಾಗಿದೆ ಎಂದು ಬೆಂಗಳೂರ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆವಿ ನಾಗರಾಜ ಮೂರ್ತಿ ಹೇಳಿದರು. ತಾಲೂಕಿನ ಮನ್ನಾಎಖ್ಖೇಳ್ಳಿ ಗ್ರಾಮದ ಬಸವ ಮಹಾಮಠದಲ್ಲಿ ನಡೆಯುತ್ತಿರುವ ಬಸವಧರ್ಮ ಸಮಾವೇಶ, ಸಂಗೀತ ನಾಟಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗಡಿಭಾಗದಲ್ಲಿ ಸಂಗೀತ, ನಾಟಕದ ಜತೆಗೆ ಬಸವಾದಿ ಪ್ರಮರ್ಥರು ಸಾರಿದ ತತ್ವಾದರ್ಶಗಳನ್ನು ಸಂದೇಶಗಳನ್ನು ಸಾರುತ್ತಾ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಅವರ ಈ ಸೇವೆ ಹೀಗೆಯೆ ಮುಂದುವರೆಯಲಿ ಎಂದರು. ತಡೋಳಾ ಮೆಹಕರ ಮಠದ ರಾಜೇಶ್ವರ ಶಿವಾಚಾರ್ಯರು ಆರ್ಶೀವಚನ ನೀಡುತ್ತಾ ಮಾತನಾಡಿ, ಪೋಷಕರು ಮಕ್ಕಳಿಗೆ ಸಂಪತ್ತುಗಳಿಸುವ ಮೊದಲು ಸಂಸ್ಕಾರವನ್ನು ನೀಡಿ. ಉತ್ತಮ ಸಂಸ್ಕಾರವನ್ನು ಪಡೆದ ಮಗು ಮುಂದೆ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ ಎಂದರು. ಗುರುಭದ್ರೇಶ್ವರ ಪ್ರಾಥಮಿಕ ಶಾಲೆ, ಎಸ್‌ಬಿ ಶೇರಿಕಾರ ಪ್ರೌಢಶಾಲೆ ಮಕ್ಕಳಿಂದ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಬಸವಕಲ್ಯಾಣ ಅನುಭವ ಮಂಟಪದ ನಾಡೋಜ ಡಾ. ಬಸವಲಿಂಗ ಪಟ್ಟದೇವರು ದಿವ್ಯ ಸಾನಿಧ್ಯ ವಹಿಸಿದರು. ಬಸವ ಮಹಾಮಠದ ಮಾತೆ ಮೈತ್ರಾದೇವಿ, ಭಾಲ್ಕಿ ಹಿರೇಮಠದ ಗುರುಬಸವ ಪಟ್ಟದೇವರು, ಸ್ವಾಗತ ಸಮಿತಿ ಅಧ್ಯಕ್ಷ, ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ರಾಜಕುಮಾರ ತರಿ, ಏಳಸಂಗಿ ಸಿದ್ಧಾರೂಢ ಮಠದ ಪರಮಾನಂದ ಮಹಾಸ್ವಾಮಿಗಳು, ಬಸವ ಸೇವಾ ಪ್ರತಿಷ್ಠಾನದ ಅಕ್ಕ ಗಂಗಾಬಿಕಾ ತಾಯಿ, ಸೋಮನಾಥ ಪಾಟೀಲ, ಬಸವರಾಜ ಧನ್ನೂರ, ಡಾ. ನಾಗರಾಜ ಶೇರಿಕಾರ, ಶಕುಂತಲಾ ಬೆಲ್ದಾಳೆ, ಉಮಾ ಬಸವರಾಜ ದೇಶಮುಖ, ಇರ್ಫಾನ ಅಲಿಶಾ ಖಾದ್ರಿ, ಧನರಾಜ ನೀಲಾ, ಐಆರ್ ಮಠಪತಿ, ರಾಜಶೇಖರ ಶೆಟಕಾರ, ಗುರುನಾಥ ರಾಜಗೀರಾ, ರಾಜಕುಮಾರ ಪಂಚಾಳ, ವಿಶ್ವನಾಥ ಪಾಟೀಲ ಮಾಡಗೂಳ, ಸಂತೋಷ ಹಳ್ಳಿಖೇಡ, ಸಂತೋಷ ಕಮಲಪೂರ, ಶಿವಪುತ್ರ ಸಾದಾ, ಶಂಕರರಾವ ಪಾಟೀಲ ಬನ್ನಳ್ಳಿ, ಶಿವರಾಜ ಮನ್ನಳ್ಳಿ, ನಾಗೇಂದ್ರಪ್ಪ ವರವಟ್ಟಿ, ಮಲ್ಲಪ್ಪ ಹಚ್ಚಿ, ಬಸವರಾಜ ನಾರಾ, ನವಲಿಂಗ ಪಾಟೀಲ, ಶಾರದಾ ಪಾಟೀಲ ಸೇರಿದಂತೆ ಪ್ರಮುಖರು ಹಾಜರಿದ್ದರು. ರೇವಣಸಿದ್ದಪ್ಪ ಡೊಂಗರಗಾಂವ ಸ್ವಾಗತಿಸಿದರು. ಹಾಸ್ಯ ಕಲಾವಿದ ವೈಜಿನಾಥ ಸಜ್ಜನಶೆಟ್ಟಿ ನಿರೂಪಿಸಿದರು. ಗುರುಲಿಂಗಪ್ಪ ಉಳ್ಳಾಗಡ್ಡಿ ವಂದಿಸಿದರು.



ಹುಮನಾಬಾದ: ನೂತನವಾಗಿ ಸಹಕಾರಿ ಕ್ಷೇತ್ರದ ಯುನಿಯನ್ ಬ್ಯಾಂಕ್ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಅಭಿಷೇಕ ರಾಜಶೇಖರ ಪಾಟೀಲ ರವರನ್ನು ಗೋಂಧಳ್ಳಿ ಸಮಾಜದ ಅಧ್ಯಕ್ಷರಾದ ಅಖಿಲ ಭಾರತೀಯ ಗೋಂಧಳ್ಳಿ ಸಮಾಜ ಸಂಘಟನೆಯ ರಾಜ್ಯಧ್ಯಾಕ್ಷ ಡಾ.ಸಿದ್ಧರಾಮ್ ಡಿ.ವಾಘಮಾರೆ ರವರು ಸನ್ಮಾನಿಸಿ ಅಭಿನಂದಿಸಿ, ಜನ್ಮದಿನದ ಶುಭಾಶಯ ಕೋರಿದರು. ನಿಸಾರ್ ಪಟೇಲ್, ಮಂಜು ಪಟೇಲ್, ರಾಜಪ್ಪಾ ದೇವಣಿ, ವೈಜಿನಾಥ ಕುಮಾರ ಚಿಂಚೋಳಿ, ಪಾಂಡುರಂಗ ಖಂಡಗೊಂಡ, ಧರ್ಮರಾಜ್ ಗೌಳಿ ಇತರರು ಇದ್ದರು. (ಮಲ್ಲಮ್ಮ ನುಡಿ ಚಿತ್ರ)

### ಏಪ್ರಿಲ್ 5 ಮತ್ತು 6 ರಂದು ತೃತೀಯ ಶರಣ ಸಮಾಗಮ

## (ಶರಣ ಜ್ಞಾನ ಶಿಬಿರ) ಹಾಗೂ ಶರಣೆ ದಾನಮ್ಮ ಉತ್ಸವ.

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:- ಫೆ 4 ತಾಲೂಕಿನ ಗುಣತೀರ್ಥವಾಡಿ ಕಲ್ಯಾಣ ಮಹಾಮನೆಯಲ್ಲಿ ಏಪ್ರಿಲ್ 5 ಮತ್ತು 6 ರಂದು ಎರಡು ದಿನ ಶರಣ ಸಮಾಗಮ ಹಾಗೂ ಶರಣೆ ದಾನಮ್ಮ ಉತ್ಸವ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಎರಡೂ ದಿನವೂ ಶರಣ ಜ್ಞಾನ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಕಲ್ಯಾಣ ಮಹಾಮನೆಯ ಪೂಜ್ಯ ಶ್ರೀ ಸದ್ಗುರು ಬಸವಪ್ರಭು ಸ್ವಾಮೀಜಿಯವರು ತಿಳಿಸಿದ್ದಾರೆ. ಸತತವಾಗಿ 13ವರ್ಷದಿಂದ ಗುಡ್ಡಾಪೂರ ಶರಣೆ ದಾನಮ್ಮ ಜ್ಯೋತಿ ಹೊತ್ತಿಸಿಕೊಂಡು ಬೀದರ, ಕಲಬುರಗಿ, ಬಿಜಾಪುರ, ಸೋಲಾಪೂರ, ಸಾಂಗ್ಲಿ, ಕೊಲ್ಲಾಪುರ ಭಾಗದಲ್ಲಿ ಬಸವ ಧರ್ಮ ಪ್ರಚಾರ ಮಾಡಲಾಗುತ್ತಿತ್ತು. ಕಳೆದ ಎರಡು ವರ್ಷದಿಂದ ಐದು ಜಿಲ್ಲೆಗಳಲ್ಲಿ ಪ್ರಚಾರ ಮಾಡುತ್ತ ಬಂದು ಕಲ್ಯಾಣ ಮಹಾಮನೆಯಲ್ಲಿ ಎರಡು ದಿನ ಶರಣ ಸಮಾಗಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಈಗ ಮೂರನೇ ವರ್ಷದ ಕಾರ್ಯಕ್ರಮ



ಇದಾಗಿದ್ದು 14ನೇ ಶರಣೆ ದಾನಮ್ಮ ಜ್ಯೋತಿಯಾತ್ರೆಯನ್ನು ಮಾರ್ಚ್ ದಿನಾಂಕ15ರಂದು ಗುಡ್ಡಾಪೂರುದಿಂದ ಹಮ್ಮಿಕೊಳ್ಳಲಾಗುತ್ತಿದೆ. ಭಕ್ತರು ಜ್ಯೋತಿ ತಮ್ಮ ಊರಿಗೆ ಬಂದಾಗ ಭಕ್ತಿ ಭಾವನೆಯಿಂದ ಸ್ವಾಗತಿಸಿ ತನು ಮನ ಧನದಿಂದ ಸೇವೆ ಸಲ್ಲಿಸಬೇಕೆಂದರಲ್ಲದೆ ಶರಣ ಸಮಾಗಮಕ್ಕೆ ನಾಡಿನ ಚಿಂತಕರು, ಸಾಹಿತಿಗಳು, ರಾಜಕೀಯ ಮುತ್ಸದ್ದಿಗಳು, ಅನುಭಾವಿಗಳು ಆಗಮಿಸಲಿದ್ದು ಬಸವ ಭಕ್ತರು, ದಾನಮ್ಮ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಪೂಜ್ಯ ಶ್ರೀ ಸದ್ಗುರು ಬಸವಪ್ರಭು ಸ್ವಾಮೀಜಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಕ್ಷಣದ ಉನ್ನತಿಗೆ ಸಮುದಾಯದ ಸಹಭಾಗಿತ್ವ ಅವಶ್ಯ-ಪಾಟೀಲ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.4- ಸಮೂದಾಯದ ಸಹಭಾಗಿತ್ವದಿಂದ ಮಾತ್ರ ಸರಕಾರಿ ಶಾಲೆಗಳ ಅಭಿವೃದ್ಧಿ ಸಾಧ್ಯ ಎಂದು ನಿವೃತ್ತ ಶಿಕ್ಷಕ ಗೂಳನಗೌಡ ಪಾಟೀಲ ಅಭಿಪ್ರಾಯ ಪಟ್ಟರು. ಅವರು

ಜಿಲ್ಲೆಯ ಹುನಗುಂದ ತಾಲೂಕಿನ ಹೊನ್ನರಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2024-25 ನೇ ಸಾಲಿನ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿ, ಸರಕಾರದ ಅನುದಾನವನ್ನು ನೆಚ್ಚಿಕೊಂಡು ಶಾಲೆಯ ಭೌತಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ ಮಾಡುವುದು ಕಷ್ಟಸಾಧ್ಯ. ಈ ನಿಟ್ಟಿನಲ್ಲಿ ಹೊನ್ನರಹಳ್ಳಿಯ ಜನ ಲಕ್ಷಾಂತರ ದೇಣಿಗೆ ನೀಡಿ ಮಕ್ಕಳಿಗೆ ಊಟದ ಹಾಲ್ ನಿರ್ಮಾಣ ಮಾಡಿದ್ದು ಶ್ಲಾಘನೀಯ ಎಂದರಲ್ಲದೇ, ಶಿಕ್ಷಣದ ಉನ್ನತಿಗೆ ಸಮುದಾಯದ ಸಹಭಾಗಿತ್ವ ಅವಶ್ಯ ಎಂದರು.

ನಾಗೂರ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಸಂಗಪ್ಪ ಸಂಗಮ ಮಾತನಾಡಿ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಸೃಜನಶೀಲ ಶಿಕ್ಷಕರು ಸದಾ ಶ್ರಮಿಸುತ್ತಿದ್ದು, ಸಮೃದ್ಧ ರಾಷ್ಟ್ರ ಕಟ್ಟಲು ಶಿಕ್ಷಣ ಅವಶ್ಯವಾಗಿದೆ ಎಂದರು. ರಕ್ಕಸಗಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಶೃತಿ ನೀಲಮ್ಮನವರ ಮಾತನಾಡಿದರು.

ಸನ್ಮಾನಿತರ ಪರವಾಗಿ ಅಧ್ಯಾಪಕ ಎನ್.ಸಿ.ಘಟ್ಟಿಗನೂರ ಮಾತನಾಡಿ, ಮಕ್ಕಳ ಪರವಾಗಿ ಅಮೃತ ಕೊಣ್ಣೂರ, ಗೋಲಪ್ಪ ಕೊಣ್ಣೂರ, ವಿದ್ಯಾಶ್ರೀ ಅಮಾತಿಗೌಡರ ಮಾತನಾಡಿದರು. ಇದೇ ಸಂದರ್ಭದಲ್ಲಿ ಶಾಲೆಗೆ ದೇಣಿಗೆ ನೀಡಿದ ಮಹನಿಯರನ್ನು ಸನ್ಮಾನಿಸಲಾಯಿತು.

ಎಸ್.ಡಿಎಂಸಿ ಅಧ್ಯಕ್ಷ ರಾಮನಗೌಡ ಪವಾಡಿಗೌಡ್ರ ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯತಿ ಸದಸ್ಯರಾದ ಈರಪ್ಪ ಮಾಗಿ, ಬಸಮ್ಮ ಪವಾಡಿಗೌಡ್ರ, ಉಮಾ ಬಲಕುಂದಿ, ಹಿರಿಯರಾದ ರುದ್ರಗೌಡ ಅಮಾತಿಗೌಡರ, ರಾಮನಗೌಡ ಮಾಗಿ, ಯಲಗುರದಪ್ಪ ಗುಡದನ್ನವರ, ಸಿದ್ದು ಶೀಲವಂತರ, ಸಂಗಪ್ಪ ಈರಣ್ಣವರ, ಅಂದಾನೆಪ್ಪ ಕೊಣ್ಣೂರ, ಸಂಗನಬಸಪ್ಪ ಸೂಳಿಬಾವಿ, ರತ್ನವ್ವ ಕಡಿವಾಲ, ಸಂಗನಬಸಯ್ಯ ಹಿರೇಮಠ, ಮಹಾಂತೇಶ ಅಳ್ಳೊಳ್ಳಿ, ವೀರಭದ್ರಪ್ಪ ಕೊಳ್ಳೊಳ್ಳಿ, ಮಲ್ಲೀಕಸಾಬ ನದಾಫ, ಮಹಾಂತೇಶ ಚಲವಾದಿ, ಲಕ್ಷ್ಮಪ್ಪ ಮಾದರ, ಮುಖ್ಯಗುರು ಪಿ.ಎಸ್. ಮಾಲಗಿತ್ತಿ ಉಪಸ್ಥಿತರಿದ್ದರು.

## ರೇಖಾ ನಾಗಶೆಟ್ಟಿ ಅವರಿಗೆ ಪಿಹೆಚ್.ಡಿ.

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಮಾ.4:ಗುಲಬರ್ಗಾ ವಿಶ್ವವಿದ್ಯಾಲಯವು ಮನೋವಿಜ್ಞಾನ ವಿಭಾಗದಲ್ಲಿ ಶ್ರೀಮತಿ ರೇಖಾ ನಾಗಶೆಟ್ಟಿ ಅವರಿಗೆ ಪಿಹೆಚ್.ಡಿ. ಪದವಿ ಪ್ರಕಟಿಸಿದೆ. ಡಾ. ಶಿವಕುಮಾರ ಎಸ್. ಚೆಂಗಟಿ ಅವರ ಮಾರ್ಗದರ್ಶನದಲ್ಲಿ "ಎಫೆಕ್ಟ್ ಆಫ್ ಸ್ಟ್ರೇಸ್ ಆಂಕ್ಸಿಎಟಿ ಆಂಡ್ ಡಿಪ್ರೇಶನ್ ಆನ್ ಮೆಂಟಲ್ ಹೆಲ್ತ್ ಆಫ್ ಸ್ಟುಡೆ-ಂಟ್ಸ್" (EFFECT OF STRESS,ANXIETY AND DEPRESSION ONMENTALHEALTH OF STUDENTS) ಕುರಿತು ರೇಖಾ ನಾಗಶೆಟ್ಟಿ ಪ್ರಬಂಧವನ್ನು ಮಂಡಿಸಿದ್ದರು.

## ದರ್ಶನಾಪುರ ಅಭಿಮಾನಿಗಳ ಬಳಗದ ವತಿಯಿಂದ ಸಚಿವರ ಹುಟ್ಟುಹಬ್ಬ ಆಚರಣೆ




ಮಲ್ಲಮ್ಮ ನುಡಿ ವಾರ್ತೆ

ಶಾಹಪೂರ:ಸಚಿವ ಶರಣಬಸಪ್ಪಗೌಡ ದರ್ಶನಾಪುರ್ ಅವರ 64ನೇ ವರ್ಷದ ಜನ್ಮದಿನಾಚರಣೆ ನಿಮಿತ್ತ ಕಾರ್ಯಕರ್ತರು, ಅಭಿಮಾನಿಗಳು, ಯುವಕರು ಸೇರಿ ಸೋಮವಾರ ಸಮಾಜ ಮುಖಿಯಾಗಿ ಜನ್ಮದಿನ ಆಚರಿಸಿದರು. ಸಚಿವ ದರ್ಶನಾಪುರ ಅಭಿಮಾನಿಗಳ ನಗರದ ಮಾರುತಿ ಬಳಗದಿಂದ ದೇವಸ್ಥಾನದಲ್ಲಿ ವಿಶೇಷ ಅಭಿಷೇಕ, ಪೂಜೆ ಸಲ್ಲಿಸಲಾಯಿತು. ನಂತರ ಸರಕಾರಿ ಆಸತ್ರೆಗಳಿಗೆ ತೆರಳಿ ಅಲ್ಲಿನ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ಬಳಿಕ ಗೋಶಾಲೆಯಲ್ಲಿ ಗೋವುಗಳಿಗೆ ಪೂಜೆ ಸಲ್ಲಿಸಿ ಅವುಗಳಿಗೆ ದವಸ ಧಾನ್ಯ ಹಾಗೂ ನಾನಾ ಶಾಲೆಯ ಮಕ್ಕಳಿಗೆ ನೋಟ್‌ಬುಕ್ವಿತರಿಸಲಾಯಿತು.

ಶಾಸಕರ ಆಪ್ತಸಹಾಯಕರಾದ ರಾಜುಗೌಡ ಮತ್ನಾಳ, ಬಸವರಾಜ ಚೆನ್ನೂರ್, ಮಹೇಶ ಮಡಿವಾಳಕರ್,

ತಳವಾರ, ಮಲ್ಲಪ್ಪ ಶಿವಶರಣ ಇಟಗಿ, ಮುನಿಯಪ್ಪ ವಾಲಿ, ಮುಖಂಡರಾದ ಲಿಯಾಖತ್ ಪಾಶಾ ಶಿವುಕುಮಾರ ಹಣಮಂತ್ರಾಯಗೌಡ ರಾ-ಕಂಗೇರ, ಸೈಯದ್ ಮುಸ್ತಫಾ ದರ್ಬಾನ್, ನಗರಸಭೆ, ಸದಸ್ಯರಾದ ಸಿದ್ದಣ್ಣ ಸಾಹು ಆರಬೋಳ,

ಮಲ್ಲಪ್ಪ ಉಂಡಗೇರಿ ಗೋಗಿ, ಮೌನೇಶ ನಾಟೇಕರ್, ಶರಣಪ್ಪ ಮುಂಡಾಸ್, ದೇವಪ್ಪ ತೆ-ೂಟಗೇರ, ಶಾಂತು ಪಾಟೀಲ್, ಪಾಶಾ ಪಟೇಲ್, ಮಲ್ಲನಗೌಡ, ಲಕ್ಷ್ಮಣ ಶೆಟ್ಟಿಗೇರ, ರಾಮಣ್ಣ ಸಾದ್ಯಾಮರ, ಅಲ್ಲಾ ಪಟೇಲ್ ಮಕ್ಕಾಪುರ, ಭೀಮರಾಯ ಜುನ್ನಾ, ಅಜೀಮ್ ಜಮಾದಾರ, ರಾಜು ಆನೇಗುಂದಿ, ಅದಮ್ ಪಟೇಲ್, ರಾಜು ರಸ್ತಾಪುರ, ಧರ್ಮಣ್ಣ, ಸಂಗಣಗೌಡ, ಅನಿಲ ಅಲಬನೂರ್, ಸಿದ್ದು ಮುಂಡಾಸ್, ಅರವಿಂದ ಉಪ್ಪಿನ್, ಶರಣು ಪಾಟೀಲ್,

ರಾಜು ಚಂದಾಮ, ವೀರೇಶ ಮದರಿ, ಬಸ್ಸು ಮದ್ರಿಕಿ, ನಾಗು ಗಜಕೋಶ, ಶರಣು, ಸುನೀಲ್, ಮಲ್ಲಿಕಾರ್ಜುನ ಕಟ್ಟಿಮನಿ, ಮಹೇಶ ಮದರಿ, ಬಂದೇನವಾಜ್ ಸಾಸನೂ, ದಯಾನಂದ ರೆಡ್ಡಿ, ಶರಣಪ್ಪ ಗುಂಡಳ್ಳಿ, ಬಸವರಾಜ್ ಕಾನಗೊಂಡ, ನಾಗು ಸೇರಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಇದ್ದರು.

## ಕಮಲಾಬಾಯಿ ಬೆಲ್ದಾರ್ ನಿಧನ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ.04 : ದಲಿತ ಮುಖಂಡರು ಹಾಗೂ ಸಂವಿಧಾನ ಸಂರಕ್ಷಣೆ ಸಮಿತಿಯ ಮಹಾ ಪ್ರಧಾನ ಕಾರ್ಯದರ್ಶಿಗಳಾದ ಅನಿಲ್ ಕುಮಾರ್ ಬೆಲ್ದಾರ್ ಇವರ ತಾಯಿ ಕಮಲಾಬಾಯಿ ಬೆಲ್ದಾರ್ (81) ಅವರು ಇಂದು ನಿಧನರಾಗಿದ್ದಾರೆ. ಇವರು ನಿವೃತ್ತ ಶಿಕ್ಷಕರಾಗಿದ್ದರು ಇವರಗೆ ನಾಲ್ಕು ಜನ ಗಂಡು ಮಕ್ಕಳು ಎರಡು ಜನ ಹೆಣ್ಣು ಮಕ್ಕಳು, 18 ಮೊಮ್ಮಕ್ಕಳು, ಆರು ಜನ ಮರಿ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಬಿಟ್ಟು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಇಂದು ಸಿದ್ದಾರ್ಥ್ ಕಾಲೇಜ್ ಹಿಂದುಗಡೆ ರುದ್ರ ಭೂಮಿಯಲ್ಲಿ ಇಂದು ನೆರವೇರಸಲಾಯಿತು.

## ಅರಶದ್ ಅಲಿ ನಿಧನಕ್ಕೆ ಫಾಳೆ ಸಂತಾಪ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 04 : ವಿಧಾನ ಪರಿಷತ್ ಮಾಜಿ ಸದಸ್ಯ ಕಾಜಿ ಅರಶದ್ ಅಲಿ ಅವರ ನಿಧನಕ್ಕೆ ಕಾಂಗ್ರೆಸ್ ಕಿಸಾನ್, ಖೇತ್ ಮಜ್ದೂರ್ ವಿಭಾಗದ ರಾಷ್ಟ್ರೀಯ ಸಂಯೋಜಕ ಪ್ರಕಾಶ್ ಫಾಳೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಅರಶದ್ ಅಲಿ ಅವರು ಪತ್ರಕರ್ತ, ಸಮಾಜ ಪರ ಚಿಂತಕ, ರಾಜಕೀಯ ಮುಖಂಡ, ಬಿಡಿಎ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯರಾಗಿ ಬೀದರ್ ಜಿಲ್ಲೆ ಹಾಗೂ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದರು ಎಂದು ಸ್ಮರಿಸಿದ್ದಾರೆ.

ಅರಶದ್ ಅಲಿ ಅವರು ಸದಾ ಸಾಮಾಜಿಕ ನ್ಯಾಯದ ಪರವಾಗಿರುತ್ತಿದ್ದರು. ಅನ್ಯಾಯದ ವಿರುದ್ಧ ಹೋರಾಟ ನಡೆಸುವವರನ್ನು ಬೆಂಬಲಿಸುತ್ತಿದ್ದರು. ಜಾತಿ, ಧರ್ಮ, ಹಿರಿಯರು, ಕಿರಿಯರು ಎನ್ನುವ ಭೇದ ಭಾವ ಅವರಲ್ಲಿ ಇರಲಿಲ್ಲ. ಅನೇಕರ ಸಾಮಾಜಿಕ ಹಾಗೂ ರಾಜಕೀಯ ಬೆಳವಣಿಗೆಗೆ ಕಾರಣರಾಗಿದ್ದರು ಎಂದು ಹೇಳಿದ್ದಾರೆ. ದೇವರು ಅವರ ಆತ್ಮಕ್ಕೆ ಶಾಂತಿ ಹಾಗೂ ಕುಟುಂಬ ವರ್ಗಕ್ಕೆ ದುಃಖ ಸಹಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

## ಆಯುರ್ವೇದ ವೈದ್ಯರು ಪಾರಂಪರಿಕ

### ರಾಯಭಾರಿಗಳು: ಡಾ.ಚನ್ನಬಸವಗೌಡ ಬಿರಾದಾರ




ಮಲ್ಲಮ್ಮ ನುಡಿ ವಾರ್ತೆ ಬೀದರ. ಮಾ. 04 : ಆಯುರ್ವೇದ ವೈದ್ಯರು ಪಾರಂಪರಿಕ ರಾಯಭಾರಿಗಳಾಗಿದ್ದಾರೆ. ಮನುಕುಲದ ಉಳಿವೆಗಾಗಿ ಆಯುರ್ವೇದ ಪದ್ಧತಿ ವೈಜ್ಞಾನಿಕ ನೆಲೆಗಟ್ಟಿನ ಮೇಲೆ ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕ ಡಾ. ಚೆನ್ನಪ್ಪಗೌಡ ಬಿರಾದಾರ ತಿಳಿಸಿದರು. ಕರ್ನಾಟಕ ಜೀವವೈವಿದ್ಯ ಮಂಡಳಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ರಾಜ್ಯ ವೈದ್ಯ ಪರಿಷತ್ತು ಹಾಗೂ ಜಿಲ್ಲಾಡಳಿತದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ 15ನೇ ಪಾರಂಪರಿಕ ವೈದ್ಯ ಸಮ್ಮೇಳನದ ಎಂಟನೆ ಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು. ಪಶುಗಳ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಆಯುರ್ವೇದ ಸಾಕಷ್ಟು ಮಹತ್ವ ಪಡೆದುಕೊಂಡಿದೆ. ಆಕಳು ಎಮ್ಮೆಗಳ ಕೆಚ್ಚಲು ಬಾವು ಕಡಿಮೆ ಮಾಡಬೇಕಾದರೆ ಬೇವಿನ ಕಡ್ಡಿ ಮತ್ತು ಅರಿಶೀಣ ಹಚ್ಚಬೇಕು. ನಂತರ ಕೆಚ್ಚಲು ತೆರೆದು ಹಾಲು ಕೂಡಾ ನೀಡುತ್ತವೆ. ಬಿಳಿಮೂಲಂಗಿ ಮತ್ತು ಬೆಂಡೆಕಾಯಿ ತಿನ್ನಿಸಿದರೆ ಮಾಸ ಬೀಳುತ್ತದೆ. ಜೀರಿಗೆ ಮೆಂತೆ ಕಡಿಮೆಣಸು ಮತ್ತು ಬೆಳ್ಳುಳ್ಳಿ ಪೇಸ್ಟ್ ಮಾಡಿ ತೆಂಗಿನ ನೀರಿನಲ್ಲಿ ಕಲಿಸಿ, ಬೆಲ್ಲದೊಂದಿಗೆ ಮಿಶ್ರಣ ಮಾಡಿ ತಿಕ್ಕಿದರೆ ಪ್ರಾಣಿಗಳ ಕಾಲುಬಾಯಿ ರೋಗ ಕಡಿಮೆಯಾಗುತ್ತದೆ ಎಂದು ಸಲಹೆ ನೀಡಿದರು. ಆಯುರ್ವೇದವನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಕಂಡು ಅದನ್ನು ನಂಬಿಕೆಯೊಂದಿಗೆ ನೀಡಿದರೆ ಶೇಖರಣೆಯಾಗುವುದರ ಜೊತೆಗೆ ಪೇಟೇಂಟ್ ಕೂಡಾ ಸಿಗುತ್ತದೆ ಎಂದು ಮಾಹಿತಿ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಶಿವಮೊಗ್ಗದ ಪಶುವೈದ್ಯಕೀಯ ಮಹಾವಿದ್ಯಾಲಯದ ಪ್ರಧಾನ ಸಂಶೋಧಕ ಪ್ರೊ.ಬಿ.ಜಿ.ರವೀಂದ್ರ ಮಾತನಾಡಿ ಪ್ರಾಣಿಗಳಿಗೆ ಕೊಡುವ ಆಹಾರದಲ್ಲಿ ಹೆಚ್ಚು ಪ್ರತಿ–ರೋಧಕ ಮತ್ತು ಕೀಟನಾಶಕ ಮಿಶ್ರಣ ಇರಬಾರದು. ಕಲಬೆರಕೆ ಆಹಾರದಿಂದ ಪ್ರಾಣಿಗಳು ಅನಾರೋಗ್ಯಕ್ಕೀಡಾಗುತ್ತವೆ. ಆದ್ದರಿಂದ ಪ್ರಾಣಿಗಳಿಗೆ ಔಷಧಗಳನ್ನು ನೀಡುವಾಗ ಸಸ್ಯಜನ್ಯ ಔಷಧಿ ನೀಡಬೇಕು. ಪ್ರಾಣಿಗಳನ್ನು ಕಟ್ಟುವ ಸ್ಥಳದಲ್ಲಿ ಸ್ವಚ್ಛತೆ ಕಾಪಾಡಬೇಕು. ಪ್ರತಿ–ರೋಧಕ ಮತ್ತು ಜಂತುನಾಶಕ ಔಷಧಿ ಕೊಡುವುದನ್ನು ನಿಲ್ಲಿಸಬೇಕೆಂದು ಪಶುರೋಗ ಚಿಕಿತ್ಸೆಯಲ್ಲಿ ಪಾರಂಪರಿಕ ವೈದ್ಯ ಪದ್ಧತಿ ಕುರಿತು ಮಾರ್ಮಿಕವಾಗಿ ವೈದ್ಯರಿಗೆ ಸಲಹೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬ್ರಿಮ್ಸ್ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಡಾ. ರಾಜಕುಮಾರ ಹೆಬ್ಬಾಳೆ "ಪಾರಂಪರಿಕ ವೈದ್ಯಪದ್ಧತಿಯ ಮೂಲ ಆಧಾರಗಳಾದ ಸಸ್ಯಗಳು, ಪ್ರಾಣಿಗಳನ್ನು ರಕ್ಷಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ. ಪ್ರಕೃತಿಯಿಂದ ಪ್ರಕೃತಿಯೆಡೆಗೆ ಎಂಬಂತೆ ಮಾನವ ಶರೀರ ಪ್ರಕೃತಿಯಿಂದ ಕೂಡಿದೆ. ಕೊನೆಗೆ ಪ್ರಕೃತಿಯಲ್ಲಿ ಸೇರುವುದಾಗಿದೆ. ಈ ಸಮಗ್ರ ವಿಷಯಗಳ ಚಿಂತನ ಮಂಥನ ಮಾಡುವುದೇ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ. ಎಲ್ಲರೂ ಇದರ ಸದುಪಯೋಗ ಪಡೆದುಕೊಂಡು ಜನಸೇವೆ ಮಾಡಬೇಕೆಂದರು. ವೇದಿಕೆ ಮೇಲೆ ಸಂವಾದಕ ವೈದ್ಯರಾದ ಹೊನ್ನಪ್ಪ ಶೆಟ್ಟಿ ಚಿಕ್ಕಮಗಳೂರು, ವಿಶ್ವನಾಥರೆಡ್ಡಿ ಚಿಕ್ಕಬಳ್ಳಾಪುರ, ವೆಂಕಟೇಶಪ್ಪ ಕೋಲಾರ, ಯೋಗೀಶ ಹಾಸನ, ಗಂಗಾಧರಗೌಡ ರಾಯಚೂರು, ಚನ್ನಬಸಯ್ಯ ಬಾಗಲಕೋಟೆ, ಸಿದ್ದಯ್ಯ ತುಮಕೂರು, ರಾಮ್ ಖಾನಾಪುರ ಸೇರಿದಂತೆ ಹಲವರಿದ್ದರು. ಪುಷ್ಪಲತಾ ದಾವಣಗೆರೆ ನಿರೂಪಿಸಿದರು. ಕಜಾಪ ಜಿಲ್ಲಾಧ್ಯಕ್ಷೆ ಮಲ್ಲಮ್ಮ ಸಂತಾಜಿ ಸ್ವಾಗತಿಸಿದರು. ಡಾ. ವಿದ್ಯಾ ಪಾಟೀಲ ವಂದಿಸಿದರು.

## ಸಾವಿರ ಬಡವರಿಗೆ ಮನೆ ಮಂಜೂರು ಮಾಡಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 04 : ಔರಾದ್ ಪಟ್ಟಣದ ಒಂದು ಸಾವಿರ ಬಡ ಫಲಾನುಭವಿಗಳಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಮನೆ ಮಂಜೂರು ಮಾಡಬೇಕು ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಜಾನ್ಸನ್ ಘೋಡೆ ಒತ್ತಾಯಿಸಿದ್ದಾರೆ.

ಬೆಂಗಳೂರಿನಲ್ಲಿ ಮಂಗಳವಾರ ಈ ಕುರಿತು ಅವರು ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಔರಾದ್ ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕು ಆಗಿದೆ. ಬಹಳಷ್ಟು ಬಡ ಜನರು ಈಗಲೂ ಗುಡಿಸಲುಗಳಲ್ಲಿ ವಾಸವಾಗಿದ್ದಾರೆ ಎಂದು ಹೇಳಿದ್ದಾರೆ.

ಪಟ್ಟಣ ಪಂಚಾಯಿತಿಗೆ 10 ಎಕರೆ ಜಮೀನು ಒದಗಿಸಿ, ಅದರ ಮೂಲಕ ಅರ್ಹ ಫಲಾನುಭವಿಗಳಿಗೆ ಮನೆ ಹಂಚಿಕೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

## ಪಾರ್ಶ್ವವಾಯು ರೋಗಕ್ಕೆ ಆಯುರ್ವೇದವೇ ಸೂಕ್ತ ಮದ್ದು: ಡಾ. ಶಶಾಂಕ ರೆಡ್ಡಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 03 : ನರಮಂಡಲಕ್ಕೆ ಆಗುವ ಹಾನಿ, ಸ್ನಾಯು ದೌರ್ಬಲ್ಯ ಪಾರ್ಶ್ವವಾಯುವಿಗೆ ಪ್ರಮುಖ ಕಾರಣವಾಗಿದೆ. ಅರ್ಧ ಶರೀರ, ಕೈ, ಮೆದುಳು ಅಥವಾ ಕಾಲಿಗೂ ಲಕವಾ ಹೊಡೆಯಬಹುದು. ಜನರು ಇದೊಂದು ಶಾಪ ಎಂದು ಹೆದರಿಕೊಳ್ಳದೇ ಆಯುರ್ವೇದದ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ಶ್ರೀ ಸಿದ್ಧರಾಮೇಶ್ವರ ಆಯುರ್ವೇದಿಕ ಮೆಡಿಕಲ್ ಕಾಲೇಜು ಬೀದರನ ಪ್ರಾಧ್ಯಾಪಕ ಡಾ. ಶಶಾಂಕರೆಡ್ಡಿ ತಿಳಿಸಿದರು.

ಕರ್ನಾಟಕ ಜೀವವೈವಿದ್ಯ ಮಂಡಳಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ರಾಜ್ಯ ವೈದ್ಯ ಪರಿಷತ್ತು ಹಾಗೂ ಜಿಲ್ಲಾಡಳಿತದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ 15ನೇ ಪಾರಂಪರಿಕ ವೈದ್ಯ ಸಮ್ಮೇಳನದ 9ನೇ ಗೋಷ್ಠಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು.

ಬೆನ್ನುಹುರಿಯ ಗಾಯ, ಮಲ್ಟಿಪಲ್ ಸ್ಕೆ ??ರೋಸಿಸ್, ಸೆರೆಬ್ರಲ್ ಪಾಲ್ಸಿ ಮತ್ತು ನರಮಂಡಲ ಮೇಲೆ ಪರಿಣಾಮ ಬೀರಿದಾಗ ಲಕವಾ ಉಂಟಾಗುತ್ತದೆ. ಪಾರ್ಶ್ವವಾಯು ಆದ ತಕ್ಷಣ ವ್ಯಕ್ತಿಯನ್ನು ಊರ ಹೊರಗಿನ ದೇವಾಲಯ, ಗುಹೆಗಳಲ್ಲಿ ಇಡಬಾರದು. ಇದರಿಂದ ರೋಗಿ ಮತ್ತಷ್ಟು ವೇದನೆಗೆ ಒಳಗಾಗಿ ಮರಣ ಹೊಂದುವ ಸಂಭವ ಜಾಸ್ತಿ ಇರುತ್ತದೆ. ರೋಗಿಗೆ ವಿವಿಧ ಸಸ್ಯಗಳ ಔಷಧಿಗಳು, ದೈಹಿಕ ಚಿಕಿತ್ಸೆ, ಫಿಜಿಯೋತೆರಪಿ, ಶಸ್ತ್ರಚಿಕಿತ್ಸೆ, ಚಲನಶೀಲ ಸಾಧನಗಳು ನೀಡಿ ಓಡಾಡುವಂತೆ ಮಾಡುವುದು, ಔದ್ಯೋಗಿಕ ಚಿಕಿತ್ಸೆ ನೀಡುವುದು, ರೋಗಿಗೆ ಧೈರ್ಯ ತುಂಬುವುದರ ಮುಖಾಂತರ ಗುಣಮುಖ ಮಾಡಬಹುದು ಎಂದು ಸಲಹೆ ನೀಡಿದರು. ನಂಬಿಕೆ ಮತ್ತು ಪ್ರಾಮಾಣಿಕ ಪ್ರಯತ್ನವೇ ಪಾರಂಪರಿಕ ವೈದ್ಯ ಕ್ಷೇತ್ರದ ಪ್ರಮುಖ ಗುಣಧರ್ಮವಾಗಬೇಕೆಂದು ಪ್ರತಿಪಾದಿಸಿದರು.

ಅಧ್ಯಕ್ಷತೆಯನ್ನು ಕೋಲಾರದ ವೈದ್ಯ ಹೆಚ್.ರಾಮಚಂದ್ರಪ್ಪ ವಹಿಸಿದ್ದರು. ಪ್ರಾಸ್ತಾವಿಕವಾಗಿ ಕಲಬುರಗಿಯ ವೈದ್ಯ ಈರಣ್ಣಾ ರಾಮಾಪುರ ಮಾತನಾಡಿದರು. ಗೌರವ ಉಪಸ್ಥಿತಿಯನ್ನು ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಡಾ. ಗೀತಾ ಖಂಡ್ರೆ, ನವದೆಹಲಿಯ ವೆಂಕಟೇಶ್ವರ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಯು.ಸಿ.ಪಾಟೀಲ ವಹಿಸಿದ್ದರು. ವೈದ್ಯ ಸಂವಾದರುಗಳಾದ ಭೀಮ್ ಆಚಾರ್ಯ, ರಮೇಶ ಗಂಜಿ ಕಲಬುರಗಿ, ರಾಜಾ ಚನ್ನಪ್ಪನಾಯಕ, ಮೊಯಿನ್ ಖಾನ್ ಚಿತ್ರದುರ್ಗ, ಶರಣಪ್ಪ ಚಿಟಮೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಡಾ. ಸಂಜೀವಕುಮಾರ ಜುಮ್ಮಾ ಸ್ವಾಗತಿಸಿದರು. ವೈದ್ಯ ಅಂಬರಿಶ ಚಿಕ್ಕಮಗಳೂರು ನಿರೂಪಿಸಿದರು.

ಡಾ. ಎಸ್.ಜೆ. ಹೆಬ್ಬಾಳೆ ವಂದಿಸಿದರು.

## ಸ್ತ್ರೀ ರೋಗ ಚಿಕಿತ್ಸೆಗೆ ಆಯುರ್ವೇದ ಜೀವರಕ್ಷಕ: ಕೆಳಮನಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 04 : ಮಹಿಳೆಯರಿಗೆ ಸಂಬಂಧಿಸಿದ ಎಲ್ಲಾ ರೀತಿಯ ರೋಗಗಳಿಗೆ ಪಾರಂಪರಿಕ ಆಯುರ್ವೇದ ಚಿಕಿತ್ಸೆ ಸಂಜೀವಿನಿಯಾಗಿದೆ ಎಂದು ಕಲಬುರಗಿಯ ಹಿಂಗುಲಾಂಬಿಕಾ ಆಯುರ್ವೇದ ಮೆಡಿಕಲ್ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕಿ ಪ್ರೊ. ನಿರ್ಮಲಾ ಕೆಳಮನಿ ತಿಳಿಸಿದರು.

ಸೋಮವಾರ ನಗರದ ಡಾ.ಚನ್ನಬಸವ ಪಟ್ಟದ್ದೇವರ ರಂಗಮಂದಿರದಲ್ಲಿ ಜಿಲ್ಲಾಡಳಿತ ಬೀದರ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಬೆಂಗಳೂರು, ಪಾರಂಪರಿಕ ವೈದ್ಯ ಪರಿಷತ್ತು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಪಾರಂಪರಿಕ ವೈದ್ಯ ಪರಿಷತ್ತು ಲಿಂಗಸುಗೂರು ಇವರ ಸಂಯುಕ್ತಾಶ್ರಯದಲ್ಲಿ ನಡೆದ 15ನೇ ಪಾರಂಪರಿಕ ವೈದ್ಯ ಸಮ್ಮೇಳನದ ಐದನೇ ಗೋಷ್ಠಿ ಉದ್ದೇಶಿಸಿ ಮಾತನಾಡಿದರು.

ಪಂಚವಲ್ಕಲಾ ವಸ್ತುಗಳಾದ ಹತ್ತಿ, ಆಲ, ಬಸರಿಗಿಡ, ಬಾಗೇಮರ ಮತ್ತು ಅರಳಿಗಿಡದ ತೊಗಟೆಗಳನ್ನು ರಸಮಾಡಿ ಕುಡಿದರೆ ಗರ್ಭಿಣಿ ಮಹಿಳೆಯರು ಹಾಗೂ ಸಾಮಾನ್ಯ ಮಹಿಳೆಯರಿಗೆ ಶರೀರದಲ್ಲಿ ಶಕ್ತಿ ಬರುತ್ತದೆ.

ನಮ್ಮ ಜನತೆಗೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಊರೆಲ್ಲಾ ಸುತ್ತಾಡಿ, ಚಿಕಿತ್ಸೆ ಪಡೆದು ಕಡಿಮೆಯಾಗದಿದ್ದಾಗ ಮಾತ್ರ ಆಯುರ್ವೇದ ಹುಡುಕಿಕೊಂಡು ಹೋಗಬಾರದು. ಆರಂಭದಲ್ಲಿಯೇ ಆಯುರ್ವೇದ ಚಿಕಿತ್ಸೆ ಪಡೆದು ಗುಣಮುಖರಾಗಿ ಎಂದು ಸಲಹೆ ನೀಡಿದರು.

ಶಿವಮೊಗ್ಗದ ಸೊರಬ ತಾಲೂಕಿನ ವೈದ್ಯೆ ಸುಮನ ಮಳಲಿಗದ್ದಿ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ವೈದ್ಯೆ ಶ್ರೀಮತಿ ಉಮಾದೇವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಾರಂಪರಿಕ ವೈದ್ಯರಾದ ಕೊಪ್ಪಳದ ಶಿವಲೀಲಾ ಹಾದಿಮನಿ, ವಿಜಯಪುರದ ಮಹ್ಮದ್ ಮಕಾನರ್, ಕೊಪ್ಪಳದ ಎಂ.ಕೆ.ಪೂಜಾರ, ದಾವಣಗೆರೆಯ ವಿಜಯಲಕ್ಷ್ಮಿ, ಬೀದರನ ಸಂಗೀತಾ, ಧಾರವಾಡದ ಶಿವನಗೌಡ, ಲಕ್ಷ್ಮೀ ಮಡಿವಾಳ ಹಾಗೂ ಶಾರದಮ್ಮ ತುಮಕೂರು ಸಂವಾದದಲ್ಲಿ ಪಾಲ್ಗೊಂಡಿದ್ದರು. ಡಾ. ಪೂಜಾ ಸೂರ್ಯವಂಶಿ ನಿರೂಪಿಸಿದರು. ಡಾ. ಸುನಿತಾ ಕೂಡ್ಲಿಕರ್ ಸ್ವಾಗತಿಸಿದರು. ಮಲ್ಲಮ್ಮ ಸಂತಾಜಿ ವಂದಿಸಿದರು.

## 6 ಸಾವಿರ ಗ್ರಾ.ಪಂಗಳಲ್ಲಿ ಜೀವ ವೈವಿಧ್ಯ ನಿರ್ವಹಣಾ ಸಮಿತಿ ರಚನೆ: ಜಗತ್‌ರಾಮ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 04 : ರಾಜ್ಯದ 6 ಸಾವಿರ ಗ್ರಾಮಪಂಚಾಯತಗಳಲ್ಲಿ ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಜೀವ ವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿ ಜಗತ್‌ರಾಮ ಹೇಳಿದರು.

ರವಿವಾರ ನಗರದ ಡಾ.ಚನ್ನಬಸವ ಪಟ್ಟದ್ದೇವರ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜೀವ ವೈವಿಧ್ಯ ಮಂಡಳಿ, ಪಾರಂಪರಿಕ ವೈದ್ಯ ಪರಿಷತ್ ರಾಜ್ಯ ಘಟಕ ಹಾಗೂ ಕಲ್ಯಾಣ ಕರ್ನಾಟಕ ವೈದ್ಯ ಪರಿಷತ್‌ಗಳ ಸಹಯೋಗದಲ್ಲಿ ಮೂರು ದಿನಗಳ ಕಾಲ ಜರುಗಿದ 15ನೇ ರಾಜ್ಯ ಮಟ್ಟದ ಪಾರಂಪರಿಕ ವೈದ್ಯ ಸಮ್ಮೇಳನದ ಅಂಗವಾಗಿ ಹಮ್ಮಿಕೊಂಡ 11 ಗೋಷ್ಠಿಗಳನ್ನು ಉದ್ಘಾಟಿಸಿ ಮಾತನಾಡಿದರು.

ಈ ಸಮಿತಿಯಲ್ಲಿ ಆಯಾ ಗ್ರಾ.ಪಂ ಅಧ್ಯಕ್ಷರು ಅಧ್ಯಕ್ಷರಾಗಿರುತ್ತಾರೆ. ಗ್ರಾ.ಪಂ ಕಾರ್ಯದರ್ಶಿ ಅಥವಾ ಪಿ.ಡಿ.ಓ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ನಾಲ್ಕು ಜನ ಗ್ರಾ.ಪಂ ಸದಸ್ಯರು ಹಾಗೂ ಮೂರು ಜನ ಆ ಭಾಗದ ಪಾರಂಪರಿಕ ವೈದ್ಯರು ಸಮಿತಿಯ ಸದಸ್ಯರಾಗಿರುತ್ತಾರೆ. ಪ್ರತಿ ಗ್ರಾ.ಪಂನಲ್ಲಿ ಆ ಭಾಗದ ಜೀವರಾಶಿ ಸಂರಕ್ಷಣೆ ಹಾಗೂ ಜೀವ ವೈವಿಧ್ಯಕ್ಕೆ ಸಂಬಂಧಿಸಿದ ದಾಖಲೆಗಳು ಸಂಗ್ರಹಿಸಲು ಜನತಾ ಜೀವ ವೈವಿಧ್ಯ ದಾಖಲಾತಿ ಪುಸ್ತಕ ಇಡಲಾಗಿದೆ. ಆಯಾ ಭಾಗದ ಪಾರಂಪರಿಕ ವೈದ್ಯರು ಇದರ ಸದುಪಯೊಗ ಪಡೆದುಕೊಂಡು ದಾಕಲಿಕರಿಸಿ ಮುಂದಿನ ಪಿಳಿಗೆಗೆ ಅದರ ಜ್ಞಾನ ಹಾಗೂ ಔಷಧೋಪಚಾರದ ಅರಿವು ಮೂಡಿಸಬೇಕಾಗಿದೆ ಎಂದು ಹೇಳಿದರು.

ಜೀವ ವೈವಿಧ್ಯ ಮಂಡಳಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಗೋವರ್ಧನಸಿಂಗ್ ಮಾತನಾಡಿ, ಜಗತ್ತಿನ 198 ರಾಷ್ಟ್ರಗಳಲ್ಲಿ ಜೀವ ವೈವಿಧ್ಯ ಕಾಯ್ದೆ ಜಾರಿಗೆ ತರಲಾಗಿದೆ. ಜೀವ ವೈವಿಧ್ಯ ದಾಖಲಿಕರಣ ಹಾಗೂ ಪಾರಂಪರಿಕ ಸಸ್ಯ ಸಂರಕ್ಷಣೆ ಮತ್ತು ನಾಡಿ ವೈದ್ಯರು, ನಾಟಿ ವೈದ್ಯರು, ಆಯುರ್ವೇದ ಪದ್ದತಿಯ ಗಿಡ ಮೂಲಕೆಗಳ ಸುಸ್ಥಿರ ಬಳಿಕೆ ಹಾಗೂ ಸಂರಕ್ಷಣೆ ಮಮಡಳಿಯ ಪ್ರಧಾನ ಉದ್ದೇಶವಾಗಿದೆ ಎಂದರು.

ಪ್ರೊ.ಎಸ್.ವಿ.ಕಲ್ಮಠ ಪ್ರಾಸ್ತಾವಿಕ ಮಾತನಾಡಿದರು. ಚಿತ್ರದುರ್ಗದ ಪೂಜ್ಯ ಬಸವನಾಗದೇವರು ಸಾನಿಧ್ಯವಹಿಸಿದ್ದರು. ಸಾಮಾಜಿಕ ಅರಣ್ಯ ಇಲಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಬಿ ಪಾಟೀಲ, ಕಾರ್ಯಕ್ರಮದ ಸಂಯೋಜಕ ಡಾ.ಜಗನ್ನಾಥ ಹೆಬ್ಬಾಳೆ, ಡಾ.ಉಮಾಕಾಂತ ಪಾಟೀಲ, ಪಾರಂಪರಿಕ ವೈದ್ಯ ಪರಿಷತ್ ರಾಜ್ಯಾಧ್ಯಕ್ಷ ಜಿ.ಮಹಾದೇವಯ್ಯ, ಕಾರ್ಯದರ್ಶಿ ಕೃಷ್ಣಮೂರ್ತಿ, ಕಲ್ಯಾಣ ಕರ್ನಾಟಕ ವೈದ್ಯ ಪರಿಷತ್ ಅಧ್ಯಕ್ಷ ಆನಂದ ಹೇರೂರ, ಕಾರ್ಯದರ್ಶಿ ಕುಮಾರಸ್ವಾಮಿ ಲಿಂಗಸೂರ, ಕಲಬುರಗಿಯ ಸಾಹಿತಿ ಪ್ರೊ. ಚಂದ್ರಕಲಾ ಬಿದರಿ ಹಾಗೂ ಇತರರು ಕಾರ್ಯಕ್ರಮದಲ್ಲಿದ್ದರು.

ಇದಕ್ಕೂ ಮೊದಲು ಧನ್ವಂತರಿ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ ಗೋಷ್ಠಿಗಳಿಗೆ ಚಾಲನೆ ನೀಡಲಾಯಿತು. ರಾಘವೇಂದ್ರ ಸುಗಂಧಿ ಗೋಗಿ ಕಾರ್ಯಕ್ರಮ ನಿರೂಪಿಸಿದರು.

## ಕನ್ನಡ ವ್ಯಾಕರಣ ಕೃತಿ ಲೋಕಾರ್ಪಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ:ಮಾ.4: ನಗರದ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಕರ್ನಾಟಕ ಪದವಿ ಮಹಾವಿದ್ಯಾಲಯದ ಎ/ವಿ ಸಭಾಂಗಣದಲ್ಲಿ ಹಮ್ಮಿಕೊಂಡಿರುವ ಶ್ರೀಮತಿ ಜೈಶ್ರೀ ರಾಜೇಂದ್ರ ಸ್ವಾಮಿ, ರಚಿಸಿರುವ ಕನ್ನಡ ವ್ಯಾಕರಣ ಕೃತಿ ಲೋಕಾರ್ಪಣೆ ಹಾಗು ಪ್ರಕಾಶನವನ್ನು ಶ್ರೀನಿಧಿ ಗ್ರಾಮೀಣ ಮತ್ತು ನಗರ, ಮಾನವ ಅಭಿವೃಧಿ ಶಿಕ್ಷಣ ಸಾಂಸ್ಕೃತಿಕ ಚಾರಿಟೇಬಲ್ ಟ್ರಸ್ಟ್ (ರಿ) ಬೀದರ ರವರ ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಪರಮ ಪೂಜ್ಯ ಷ.ಬ್ರ. ಶ್ರೀ ಹಾವಗಿ ಲಿಂಗೇಶ್ವರ ಸ್ವಾಮಿಗಳು ಹಲಬರ್ಗಾ, ಶಿವಣಿ ಹೈದ್ರಾಬಾದ ವಹಿಸಿದರು, ಉದ್ಘಾಟಕರಾಗಿ ಡಾ. ಬಸವರಾಜ ಜಿ. ಪಾಟೀಲ್ ಅಷ್ಟೂರಜಿ ಮಾನ್ಯ ಅಧ್ಯಕ್ಷರು ಕೆ.ಆರ.ಇ. ಟ್ರಸ್ಟ್ ವಹಿಸಿದರು ಸಮಾರಂಭದ ಮುಖ್ಯ ಅಥಿತಿಗಳಾಗಿ ಶ್ರೀ ಬಿ.ಜಿ. ಶೆಟಕಾರ ಮಾನ್ಯ ಉಪಾಧ್ಯಕ್ಷರು ಕೆ.ಆರ್.ಇ. ಸಂಸ್ಥೆ ಬೀದರ ವಹಿಸಿದರು. ಕನ್ನಡ ವ್ಯಾಕರಣ ಕೃತಿಯ ಪರಿಚಯವನ್ನು ಶ್ರೀ ವಿ.ಎಮ್. ಡಾಕುಳಗಿ ಹಿರಿಯ ಸಾಹಿತಿಗಳು ಬೀದರ ನೀಡಿದರು.

ಮಾನ್ಯ ಅಧ್ಯಕ್ಷರು ಕೆ.ಆರ್.ಇ. ಟ್ರಷ್ಟ ಬೀದರಿನ ಡಾ. ಬಸವರಾಜ ಜಿ. ಪಾಟೀಲ ಅಷ್ಟೂರಜಿ ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿ ಶ್ರೀ ವಿಜ್ಞಾನೇಶ್ವರ ರಚಿಸಿರುವ ಮಿತಾಕ್ಷರ ಸಂಹಿತೆ ಜಗತ್ತಿನ ಸರ್ವಶ್ರೇಷ್ಟ ಕಾನುನೂ ಗ್ರಂಥವಾಗಿದೆ. ಇದು ನಮ್ಮ ಬೀದರ ಜಿಲ್ಲೆಯ ವೈಶಿಷ್ಟ ಪೂರ್ಣ ಸಾಹಿತ್ಯವಾಗಿದೆ. ಇದು ಬೀದರ ಜಿಲ್ಲೆಗೆ ಹೆಮ್ಮೆಯ ವಿಷಯವೆಂದು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಾಯಿ ಮತ್ತು ತಾಯಿನಾಡಿನ ಸೇವೆಗೆ ಸಾರ್ಥಕವಾಗಬೇಕಾದರೆ ತಾಯಿಯ ಉಡಿಗೆ ಕನ್ನಡ ಅಕ್ಷರವನ್ನು ತುಂಬಬೇಕು ಇಂದು ಆಧುನಿಕತೆಯ ಭರಾಟೆಯಲ್ಲಿ ಕನ್ನಡ ನಶಿಸುತ್ತಿದೆ. ಇಂಗ್ಲಿಷ ವ್ಯಾಮೋಹದಂದ ಹೊರಬಂದು ಕನ್ನಡ ಉಳಿವಿಗಾಗಿ ನಾವೆಲ್ಲರು ಕಂಕಣ ಬದ್ದರಾಗಬೇಕು. ನಮ್ಮ ಉಸಿರು ಕೂಡ ಕನ್ನಡವೆನ್ನಬೇಕು. ಜಗತ್ತಿ ಸರ್ವಶ್ರೇಷ್ಟ ಹಾಗು ಸುಂದರ ಭಾಷೆಗಳಲ್ಲಿ ಕನ್ನಡ ಒಂದಾಗಿದೆ. ಪ್ರತಿಯೊಬ್ಬರು ಮಾತೃಭಷೆಯನ್ನು ಪ್ರಿತಿಸಬೇಕು. ನಮ್ಮ ನಡೆ ನುಡಿ ಆಚಾರ ವಿಚಾರಗಳಲ್ಲಿ ಕನ್ನಡವನು ಮಯಗೂಡಿಸಿಕೊಳ್ಳಬೇಕು ಕಲ್ಯಾಣ ನಾಡಿನಲ್ಲಿ ನಾವು ಹುಟ್ಟಿದ್ದು ನಮ್ಮ ಪೂಣ್ಯ. ಶರಣರ ತತ್ವ ಆದರ್ಶಗಳು ನಮ್ಮ ಜೀವನದಲ್ಲಿ ಆಳವಡಿಸಿಕೊಳ್ಳಬೇಕು ಪ್ರತಿಯೋಬ್ಬರು ಗುರು ಮತ್ತು ಗುರಿಯನ್ನು ಹೊಂದಿರಬೇಕು ಎಂದು ದಿವ್ಯ ಸಾನಿದ್ಯವಹಿಸಿ ಶ್ರೀ ಹಾವಲಿಂಗೇಶ್ವರ ಮಹಾ ಸ್ವಾಮಿಗಳು ಮಾತನಾಡಿದರು.

ಸ್ವಾಗತ ಮತ್ತು ಪ್ರಾಸ್ತವಿಕ ಮಾತನಾಡಿದ ಶ್ರೀ ನಾಗೇಶ ಸ್ವಾಮಿ ಮಸ್ಕಲ್ ಕನ್ನಡ ಭಾಷೆ ಸಾಂಸ್ಕೃತಿ ಉಳಿವಿಗೆ ಹಾಗು ಸಾಹಿತಿಗಳಿಗೆ ಶಿಕ್ಷಕರಿಗೆ ಹಾಗು ವಿದ್ಯಾರ್ಥಿಗಳಿಗೆ ರಚಿಸಿರುವ ಶ್ರೀಮತಿ ಜೈಶ್ರೀ ರಾಜೇಂದ್ರಸ್ವಾಮಿ ಬೆಳಕುಣಿ ರಚಿಸಿರುವ ಕನ್ನಡ ವ್ಯಾಕರಣ ಕೃತಿ ಸ್ಪರ್ಧಾತ್ಮಕ ವಿದ್ಯಾರ್ಥಿಗಳಿಗೂ ತುಂಬಾ ಉಪಯುಕ್ತವಾಗಿದೆ.

ಅಧ್ಯಕ್ಷತೆವಹಿಸಿ ಮಾತನಾಡಿರುವ ಪ್ರೋ. ಬಸವರಾಜ ಸ್ವಾಮಿ ಹೆಡಗಾಪುರಕರ ಮಾತನಾಡಿ ಈ ಕೃತಿಯು ಪ್ರೌಡ ಶಾಲಾ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಅತೀ ಉಪಯುಕ್ತವಾಗಿದೆ. ಈ ಕೃತಿಯನ್ನು ಜಿಲ್ಲೆಯ ಎಲ್ಲ ಶಾಲಾ ಕಾಲೇಜುಗಳು ಹಾಗು ಗ್ರಂಥಾಲಯಗಳಲ್ಲಿ ಓದುಗರಿಗೆ ಪೂರೈಸಲಾಗುವುದು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ರಾಜೇಂದ್ರಸ್ವಾಮಿಯ ಅಳಿಯ ಮಕ್ಕಳು ಅಣ್ಣತಂಮಂದಿರು ಕುಟುಂಬದವರು ಹಾಜರಿದ್ದರು. ಅಲ್ಲದೇ ನಗರದ ನೂರಾರು ಶಿಕ್ಷಕರು ಮೂಖ್ಯಗುರುಗಳು, ಉಪನ್ಯಾಸಕರುಗಳು ಶ್ರೀ ವಿಜಯಕುಮಾರ ಪಾಟೀಲ ಯರನಳ್ಳಿ, ಶ್ರೀ ಸಂತೋಷ ಮಂಗಳೂರೆ, ಶ್ರೀ ನವೀನ್ ಚಿಕಬಸೆ ಶ್ರೀ ರಾಚಯ್ಯ ಸ್ವಾಮಿ, ಶ್ರೀಕಾಂತ ಬಿರಾದಾರ, ಪ್ರೊ. ಶಶಿಧರ ಪಾಟೀಲ, ಪ್ರೊ. ಮದುಸುದನ್ ಕುಲಕರ್ಣಿ ಡಾ. ಮಹಾದೇವ ಮಠಪತಿ ಡಾ. ಮಲ್ಲಿಕಾರ್ಜುನ್ ಹಂಗರರ್ಗಿ ಪ್ರಾಂಶುಪಾಲರು, ಶ್ರೀ ಶ್ರೀಮಂತ ದದ್ದಾಪುರ, ಡಾ. ಸಾತನೂರ, ಶ್ರೀ ಭಾರತಿ ವಸ್ತರದ, ಶ್ರೀಮತಿ ವಿಸಾಜಿ, ವಿದ್ಯಾರ್ಥಿಗಳು ಹಾಜರಿದ್ದರು. ಶ್ರೀಮತಿ ಸ್ವರೂಪ ರಾಣಿ ನಾಗೂರೆ ಸಂಚಾಲನೆ ಹಾಗು ವಂದನಾರ್ಪಣೆ ಮಾಡಿದರು.

# ಗಂಗಪ್ಪ ಹೊಸಮನಿ ಅವರಿಗೆ ಪಿ.ಎಚ್.ಡಿ ಪದವಿ ಭೀಮರಾಯ ಪೂಜಾರಿ ಹರ್ಷ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ನಗರದ ಸರ್ಕಾರಿ ಪಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕರಾದ ಗಂಗಪ್ಪ ತಂದೆ ಸೋಪಣ್ಣ ಅವರು ಆಲ್ವಾರದ ರಾಜಸ್ತಾನ ಸನ್‌ರೈಸ್ ವಿಶ್ವವಿದ್ಯಾಲಯ ರಾಜ್ಯಶಾಸ್ತ್ರ ವಿಭಾಗದಲ್ಲಿ ರಾಜ್ಯಶಾಸ್ತ್ರ ಸಹ ಪ್ರಾಧ್ಯಾಪಕರಾದ ಡಾ. ಸುಷ್ಮಾ ಶರ್ಮಾ ಅವರ ರಸ ಮಾರ್ಗದರ್ಶನದಲ್ಲಿ ಎ ಪೊಲಿಟಿಕಲ್ ರಿವ್ಯೂ ಆಫ್ ಕೋಲೆಶನ್ ಪಾಲಿಟಿಕ್ಸ್ ಆ್ಯಂಡ್ ನ್ಯಾಷನಲ್ ಪಾರ್ಟಿ ಅಟಿಟ್ಯೂಡ್ಸ್" ಎಂಬ ವಿಷಯದ ಮೇಲೆ ಸಂಶೋಧನೆ ಆ ಕೈಗೊಂಡು ಸಲ್ಲಿಸಿದ ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ ನೀಡಿದೆ. ಗಂಗಪ್ಪ ಹೊಸಮನಿ ಅವರು ಪಿ.ಎಚ್.ಡಿ. ಪದವಿ ಪಡೆದಿದಕ್ಕೆ ಸಮಾಜದ ಹಿರಿಯ ಮುಖಂಡರಾದ ಭೀಮರಾಯ ಜಟ್ಟಪ್ಪ ಇಟ್ಟಗಿ. ಸಂಗಣ್ಣ ದಿಗ್ಗಿ. ಜಟ್ಟೆಪ್ಪ ಕೆಂಭಾವಿ. ಭೀಮಶಂಕರ ಕಟ್ಟಿಮನಿ. ಶಿವಕುಮಾರ್ ದೊಡ್ಮನಿ. ಹೀಗೆ ಹಲವು ಸಮಾಜದ ಮುಖಂಡರು ಹೃತ್ಪೂರ್ವಕ ಅಭಿನಂದನೆಗಳು ಸಲ್ಲಿಸಿದ್ದಾರೆ.

# ಅಕ್ರಮ ಸರಾಯಿ ಮಾರಾಟದ ಮೇಲೆ ಪೊಲೀಸರ ದಾಳಿ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ರವರ ನಿರ್ದೇಶನದಂತೆ, ಪಟ್ಟಣದ ಪ್ರವಾಸಿ ಮಂದಿರದ ಎದುರುಗಡೆ ಸಾರ್ವಜನಿಕ ಸ್ಥಳದಲ್ಲಿ ಅನಧಿಕೃತವಾಗಿ ಸರಾಯಿ ಮಾರಾಟ ಮಾಡುತ್ತಿರುವ ಮಾಹಿತಿ ಮೇರೆಗೆ ಚಿಟಗುಪ್ಪ ಎಸ್‌ಐ ಬಾಷುಮಿಯಾ ಕೊಂಚೂರ್ ಅವರು ಸಿಬ್ಬಂದಿಗಳೊಂದಿಗೆ ದಾಳಿ ಮಾಡಿ ಸುಮಾರು 28 ಸಾವಿರ ರೂಪಾಯಿ ಮೌಲ್ಯವುಳ್ಳಗಳ 90 ಎಮ್.ಎಲ್ ನ 70 ಸರಾಯಿ ಪಾಕೇಟಗಳು ಜಪ್ತಿ ಮಾಡಿಕೊಂಡು ಆರೋಪಿತರ ವಿರುದ್ಧ ಕಾನೂನಿನ ಕ್ರಮ ಕೈಕೊಳ್ಳಲಾಗಿದೆ. ಅಕ್ರಮ ಸರಾಯಿ ಮಾರಾಟದ ಮೇಲೆ ದಾಳಿಯಲ್ಲಿ ಶ್ರಮಿಸಿದ ಚಿಟಗುಪ್ಪ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಶ್ಲಾಘಿಸಿದ್ದಾರೆ.

## ಧರ್ಮ ಜಾಗೃತಿ ಸಮಾರಂಭದಲ್ಲಿ ಜಗದ್ಗುರು ರಂಭಾಪುರಿ ಶ್ರೀ ಅಭಿಮತ

# ಧರ್ಮವೇ ಬದುಕಿನ ಆಶಾಕಿರಣ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಇಂದು ಎಲ್ಲೆಡೆ ಅಶಾಂತಿಯ ವಾತಾವರಣ ನಿರ್ಮಾಣವಾಗಿದೆ. ನಮ್ಮ ಬಳಿ ಬದುಕಿಗೆ ಅಗತ್ಯವಿರುವ ಎಲ್ಲ ಸವಲತ್ತುಗಳು ಇದ್ದರೂ ನೆಮ್ಮದಿ ಮಾತ್ರ ಇಲ್ಲ ಇದಕ್ಕೆ ಕಾರಣ ನಾವು ಧರ್ಮದ ಮೌಲ್ಯಗಳಿಂದ ವಿಮುಖರಾಗಿರುವುದಾಗಿದೆ. ಧರ್ಮದಿಂದಲೇ ನಮ್ಮ ಬದುಕು, ಸಮಾಜ ಹಾಗೂ ವಿಶ್ವಕ್ಕೆ ಶಾಂತಿ ಸಿಗಲು ಸಾಧ್ಯ ಎಂದು ಬಾಳೆಹೊನ್ನೂರು ರಂಭಾಪುರಿ ಜಗದ್ಗುರು ಡಾ.ಪ್ರಸನ್ನವೀರ ಸೋಮೇಶ್ವರ ಭಗವತ್ಪಾದರು ಅಭಿಪ್ರಾಯ ಪಟ್ಟರು. ತಾಲೂಕಿನ ನಾವದಗಿ ಬ್ರಹನ್ಮಠದ ಪೂಜ್ಯಶ್ರೀ ರಾಜೇಂದ್ರ ಒಡೆಯರ್ ಶಿವಾಚಾರ್ಯರ ಗುರು ಪಟ್ಟಾಧಿಕಾರದ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಸೋಮವಾರ ಹಮ್ಮಿಕೊಂಡ ಜನ ಜಾಗೃತಿ ಧರ್ಮ ಸಮಾರಂಭದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಜನ್ಮ ಜನ್ಮಗಳ ಪುಣ್ಯ ಫಲದಿಂದ ಮಾನವ ಜೀವನ ಪ್ರಾಪ್ತವಾಗಿದೆ ಅರಿವು ಆದರ್ಶ ಮತ್ತು ಆಚರಣೆಗಳ ಮೂಲಕ ಬದುಕನ್ನು ಸಾರ್ಥಕ ಪಡಿಸಿಕೊಳ್ಳಬೇಕು, ಜೀವನದ ಉನ್ನತಿ ಮತ್ತು ಶ್ರೇಯಸ್ಸಿಗೆ ಧರ್ಮಾಚರಣೆ ಬಹಳಷ್ಟು ಅವಶ್ಯಕತೆಯಿದೆ. ಧರ್ಮದ ಆದರ್ಶ ಮೀರಿ ನಡೆದರೆ ಮನುಷ್ಯರಿಗೆ ಆತಂಕ ಕಾದಿದೆ ಎಂದರು. ಆಧುನಿಕ ಜಗತ್ತಿನಲ್ಲಿ ಮನುಷ್ಯನ ಮನಸ್ಸು ಬಹಳ ಚಂಚಲವಾಗಿದೆ, ಅವನ ಜೀವನದಲ್ಲಿ ಸಮಚಿತ್ತತೆ ಎಂಬುದಿಲ್ಲ, ಮನಸ್ಸಿನ ಸ್ಥಿರತೆ ಧರ್ಮದ ಶ್ರೇಷ್ಠ ಮೌಲ್ಯಗಳಿಂದ ಪ್ರಾಪ್ತವಾಗುತ್ತದೆ. ನಾವೆಲ್ಲರೂ ಧರ್ಮವನ್ನು ಬರಿ ಪಾಲಿಸುವುದರ ಜೊತೆಗೆ ಅದನ್ನು ರಕ್ಷಿಸುವ ಕಾರ್ಯವನ್ನೂ ಮಾಡಬೇಕು. ಗುರು ಋಣವನ್ನು ಎಂದೂ ಮರೆಯಬಾರದು, ಗುರು ಭಕ್ತಿ ಇಲ್ಲದೆ ಶಿವ ಭಕ್ತಿ ಇಲ್ಲ, ಗುರುವಿಗಿಂತ ತತ್ವ ತಪಸ್ಸವೂ ಶ್ರೇಷ್ಠವಿಲ್ಲ ಎಂದ ಅವರು ನಾವು ವಿಶ್ವ ಶಾಂತಿಗಾಗಿಯೇ ಡಿ.8 ರಿಂದ ವಿಶ್ವಶಾಂತಿ ಮಹಾಯಜ್ಞೆಯನ್ನು ಹಮ್ಮಿಕೊಂಡಿದ್ದೇವೆ ಎಂದರು. ವೀರಶೈವ ಲಿಂಗಾಯತ ಮಠ ಮಾನ್ಯರು ಸಮಾಜದಲ್ಲಿ ಶಾಂತಿ, ಸಾಮರಸ್ಯವನ್ನು ತರಲು ಹಗಲಿರುಳು ಶ್ರಮಿಸುತ್ತಿದ್ದಾರೆ ಈ ಕಾರ್ಯದಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿರುವ ನಾವದಗಿ ಬೃಹನ್ಮಠದ ಪೂಜ್ಯ ಶ್ರೀ ರಾಜೇಂದ್ರ ಒಡೆಯರ್ ಶಿವಾಚಾರ್ಯರ ಧರ್ಮಸೇವೆ ಶ್ಲಾಘನೀಯವಾದದ್ದು ಅವರಿಗೆ ನಿಮ್ಮೆಲ್ಲರ ಸಹಕಾರ ಇರಲಿ ಎಂದರು. ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಬಾಗೇವಾಡಿಯ ಶಿವಪ್ರಕಾಶ್ ಶಿವಾಚಾರ್ಯರು, ನಾವದಗಿ ಶ್ರೀಗಳು, ಹಾಗೂ ಜಿಪಂ ಮಾಜಿ ಸದಸ್ಯ ಬಸನಗೌಡ ವಣಿಕ್ಯಾಳ ಮಾತನಾಡಿದರು. ಇದೇ ಸಂದರ್ಭದಲ್ಲಿ 15 ದಿನಗಳ ಕಾಲ ಪ್ರವಚನವನ್ನು ನಡೆಸಿಕೊಟ್ಟ ಪುರಾಣಿಕ ಬಸಯ್ಯ ಶಾಸ್ತ್ರಿಗಳಿಗೆ, ಕಾರ್ಯಕ್ರಮದಲ್ಲಿ ವಿಶೇಷ ಸೇವೆ ಸಲ್ಲಿಸಿದ ಮಹನೀಯರಿಗೆ ಹಾಗೂ ಪತ್ರಕರ್ತರಿಗೆ ಉಭಯ ಜಗದ್ಗುರುಗಳು ಸನ್ಮಾನಿಸಿ ಆಶೀರ್ವದಿಸಿದರು. ಮಾಜಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಸಹೋದರ ಸೋಮನಗೌಡ ಪಾಟೀಲ ಸಮಾರಂಭವನ್ನು ಉದ್ಘಾಟಿಸಿದರು. ಸಮಾರಂಭದ ಪಾವನ ಸಾನಿಧ್ಯವನ್ನು ಕೇದಾರ ಪೀಠದ ಜಗದ್ಗುರುಗಳಾದ ರಾವಲ್ ಪದವಿ ವಿಭೂಷಿತ ಭೀಮಾಶಂಕರಲಿಂಗ ಶಿವಾಚಾರ್ಯ ಭಗವತ್ಪಾದಂಗಳವರು ವಹಿಸಿ ಆಶೀರ್ವಚನ ನೀಡಿದರು. ಬಸಯ್ಯ ಶಾಸ್ತ್ರಿಗಳು ಪ್ರಾರ್ಥಿಸಿದರು. ಶಿವಯೋಗಿ ಶಿವಾಚಾರ್ಯರು ಸ್ವಾಗತಿಸಿದರು. ಮನಗೂಳಿ ಹಿರೇಮಠದ ಪೂಜ್ಯ ಶ್ರೀ ಅಭಿನವ ಸಂಗನಬಸವ ಶಿವಾಚಾರ್ಯರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ವೀರೇಶ್ ಹಾಗು ಸಂಗಡಿಗರು ಸಂಗೀತ ಸೇವೆ ನೀಡಿದರು. ವೇದಿಕೆಯಲ್ಲಿ ಹಲವಾರು ಪರಮ ಪೂಜ್ಯರು, ರಾಜಕೀಯ ಧುರೀಣರು, ಗ್ರಾಮದ ಗಣ್ಯರು, ಹಿರಿಯರು ಇದ್ದರು. ಕಾರ್ಯಕ್ರಮದಲ್ಲಿ ಬೇರೆ ಬೇರೆ ಸ್ಥಳಗಳಿಂದ ಆಗಮಿಸಿದ ಶ್ರೀಮಠದ ಅಪಾರ ಭಕ್ತರು ಉಪಸ್ಥಿತರಿದ್ದರು.

# ಕುಟುಂಬದ ಸದಸ್ಯರಿಂದಲೇ ನಡೆಯುವ ದೌರ್ಜನ್ಯ ಹಿಂಸೆಗಳ ವಿರುದ್ಧ ಹೋರಾಡಲು ಮಹಿಳೆಯರಿಗೆ ಅಗತ್ಯ ಅರಿವು ಬೇಕು



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಮಾರ್ಚ್ 04: ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರಿಗೆ ರಕ್ಷಣೆ ಎಂಬ ಕಾನೂನು 2006 ರಿಂದ ಜಾರಿಗೆ ಬಂದಿದೆ. ಕುಟುಂಬದ ಸದಸ್ಯರಿಂದಲೇ ನಡೆಯುವ ದೌರ್ಜನ್ಯ ಹಾಗೂ ಹಿಂಸೆಗಳ ವಿರುದ್ಧ ಹೋರಾಡಲು ಮಹಿಳೆಯರಿಗೆ ಅಗತ್ಯ ಅರಿವು ಬೇಕು. ಮಹಿಳೆಯು ಮಹಿಳೆಯರಿಂದ ಹಿಂಸೆಯನ್ನು ಅನುಭವಿಸುತ್ತಿದ್ದಾಳೆ, ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಮರಿಯಪ್ಪ ಅವರು ಹೇಳಿದರು.

ಯಾದಗಿರಿ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರಿ ಯಾದಗಿರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006ರ ಅನುಷ್ಠಾನ ಕುರಿತು ಸಂರಕ್ಷಣಾಧಿಕಾರಿಗಳು ಹಾಗೂ ಭಾಗೀದಾರರ ಇಲಾಖೆಗಳಿಗೆ ಓರಿಂಟೇಶನ್ ತರಬೇತಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರಿಗೆ ರಕ್ಷಣೆ ಎಂಬ ಕಾನೂನು 2006 ರಿಂದ ಜಾರಿಗೆ ಬಂದಿದೆ. ಕುಟುಂಬದ ಸದಸ್ಯರಿಂದಲೇ ನಡೆಯುವ ದೌರ್ಜನ್ಯ ಹಾಗೂ ಹಿಂಸೆಗಳ ವಿರುದ್ಧ ಹೋರಾಡಲು ಮಹಿಳೆಯರಿಗೆ ಅಗತ್ಯ ಅರಿವು ಬೇಕು, ಮಹಿಳೆಯು ಹಿಂಸೆಯನ್ನು ಅನುಭವಿಸುತ್ತಿದ್ದಾಳೆ. ಮಹಿಳೆಯರ ಕಷ್ಟಕರ ಪರಿಸ್ಥಿಯಲ್ಲಿ ಮಹಿಳಾ ಸಹಾಯವಾಣಿ 181 ಕರೆ ಮಾಡಬಹುದು ಮತ್ತು ಜಿಲ್ಲೆಯಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಸಮಾನತೆಯನ್ನು ತರಬೇಕು ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರನ್ನು ಗೌರವಿಸಬೇಕು ಮತ್ತು ಸಮಾಜಿಕ ಸ್ಥಳಗಳಲ್ಲಿ ಮಹಿಳೆಯರನ್ನು ಸಮಾನತೆಯಿಂದ ನೋಡಬಹುದು ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗತಾರತಮ್ಯ ಮೂಲಕ ಭದ್ರಗೊಳಿಸುವುದು, ಮಹಿಳೆಯರು ಬದುಕುನಿಂದ ಸುಧಾರಣೆಯನ್ನು ತರಬಹುದಾಗಿದೆ. ಕೌಟುಂಬಿಕ ಹಿಂಸೆಯಿಂದ ಮಹಿಳೆಯರಿಗೆ ತೊಂದರೆಯಾದರೆ ಅವರಿಗೆ ಇರುವ ಪರಿಹಾರಗಳನ್ನು ನೀಡುವ ಕಾಯ್ದೆಗಳ ಬಗ್ಗೆ ತಿಳಿಸಬೇಕು ಎಂದು ಹೇಳಿದರು.

ಯಾದಗಿರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಶ್ರೀ ವೀರನಗೌಡ ಪಾಟೀಲ್ ಅವರು ಮಾತನಾಡಿದರು, ಮಹಿಳೆಯರು ಶಿಕ್ಷಣದಿಂದ ವಂಚಿತರಾದಲ್ಲಿ ದೌರ್ಜನ್ಯಕ್ಕೆ ಒಳಗಾಗಬಹುದು, ಈ ಹಿನ್ನಲೆಯಲ್ಲಿ ಉತ್ತಮ್ಮ ಶಿಕ್ಷಣ ಸಂಸ್ಕಾರ ಹಾಗೂ ಸ್ವ-ಯಂ ರಕ್ಷಣೆ, ಕುಟುಂಬದಲ್ಲಿ ಅನ್ಯೋನ್ಯತೆಯ ಜೀವನದ ಬಗ್ಗೆ ತಿಳಿ ಹೇಳಬೇಕು. ಮಹಿಳೆಯರು ಕೂಡ ಅವಿಭಕ್ತ ಕುಟುಂಬ ವ್ಯವಸ್ಥೆ ಮುಂಚೂಣಿಯಲ್ಲಿ ತರಬೇಕು ಇದರಿಂದ ಕೌಟುಂಬಿಕ ದೌರ್ಜನ್ಯ ನಿವಾರಿಸಲು ಸಾಧ್ಯಾವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಹಿಳಾ ಅಭಿವೃದ್ಧಿ ಅಧಿಕಾರಿಗಳು ಶ್ರೀ ಪ್ರಮ್ ಮೂರ್ತಿ, ವಕೀಲರು ಶ್ರೀಮತಿ ಸಾವಿತ್ರಿ ಪಾಟೀಲ್, ಯಾದಗಿರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ವನಜಾಕ್ಷೀ, ತರಬೇತಿ ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳು, ಪೋಲಿಸ್ ಇಲಾಖೆ ಸಿಬ್ಬಂದಿ ವರ್ಗದವರು, ಇತರೆ ಇಲಾಖೆಯ ಸಿಬ್ಬಂದಿವರ್ಗದವರು ತರಬೇತಿ ಕಾರ್ಯಗಾರದಲ್ಲಿ ಉಪಸ್ಥಿತರಿದ್ದರು.

# ಅದ್ದೂರಿಯಾಗಿ ಜರುಗಿದ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟೆ: ತಾಲೂಕಿನ ನಾವದಗಿ ಗ್ರಾಮದ ಶ್ರೀಮದ್ ಉಜ್ಜಯಿನಿ ಶಾಖಾ ರಾಜಗುರು ಪರ್ವತೇಶ್ವರ ಸಂಸ್ಥಾನ ಬ್ರಹನ್ ಮಠ ನಾವದಗಿಯ ಪೂಜ್ಯ ಶ್ರೀ ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರ ಪ್ರಥಮ ಗುರು ಪಟ್ಟಾಧಿಕಾರ ಮಹೋತ್ಸವದ ವಾರ್ಷಿಕೋತ್ಸವದ ಅಂಗವಾಗಿ ಸೋಮವಾರ ಹಮ್ಮಿಕೊಂಡ ರಂಭಾಪುರಿ ಹಾಗೂ ಕೇದಾರ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ನಾವದಗಿ ಗ್ರಾಮದ ಬ್ರಹನ್ಮಠದಿಂದ ಸಕಲ ವಾದ್ಯ ಮೇಳ ಗಳೊಂದಿಗೆ ಆರಂಭವಾದ ಉಭಯ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಂತರ ಶ್ರೀ ಮಠದ ಆವರಣಕ್ಕೆ ತಲುಪಿತು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಜನಜಾಗೃತಿ ಧರ್ಮಸಭೆ ಜರುಗಿತು. ಮೆರವಣಿಗೆಯಲ್ಲಿ ಪೂಜ್ಯರಾದ ಶ್ರೀ ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರು, ಶ್ರೀ ರಾಮಲಿಂಗಯ್ಯ ಮಹಾಸ್ವಾಮಿಗಳು, ಶ್ರೀ ಶಿವಕುಮಾರ ಮಹಾಸ್ವಾಮಿಗಳು, ಶ್ರೀ ಶಿವಯೋಗಿ ಶಿವಾಚಾರ್ಯರು, ಕಲಕೇರಿ ಸಿದ್ದರಾಮ ಶಿವಾಚಾರ್ಯರು, ಮನಗೂಳಿಯ ಶ್ರೀ ಸಂಗನಬಸವ ಶಿವಾಚಾರ್ಯರು ಹಾಗೂ ಹಲವಾರು ಪೂಜ್ಯರು, ಗ್ರಾಮದ ಗಣ್ಯರು ಹಿರಿಯರು ಇದ್ದರು.


# ಟ್ರಕ್ ಅನ್ನು ಓವರ್‌ಟೇಕ್ ಮಾಡುವ ಭರದಲ್ಲಿ ಆಟೋ ರಿಕ್ಷಾ ಪಲ್ಟಿ

ಮಲ್ಲಮ್ಮ ನುಡಿ ವಾರ್ತೆ

ಉಡುಪಿ-ಆಟೋರಿಕ್ಷಾವೊಂದು ಟ್ರಕ್ ಅನ್ನು ಓವರ್‌ಟೇಕ್ ಮಾಡಲು ಪ್ರಯತ್ನಿಸುವ ವೇಳೆ ಪಲ್ಟಿಯಾಗಿ ರಸ್ತೆ ಡಿವೈಡರ್ ಗೆ ಡಿಕ್ಕಿ ಹೊಡೆದ ಘಟನೆ ಉಡುಪಿಯ ಗುಂಡಿಬೈಲ್ ರಸ್ತೆಯ ಬಳಿ ಸಂಭವಿಸಿದೆ.

ಟ್ರಕ್ ಮಣಿಪಾಲದಿಂದ ಗುಂಡಿಬೈಲ್ ರಸ್ತೆಯ ಮೂಲಕ ಸಂತೆಕಟ್ಟೆಯ ಕಡೆಗೆ ಸಾಗುತ್ತಿತ್ತು. ಇದೇ ವೇಳೆ ಉಡುಪಿಯಿಂದ ಹಾಲಾಡಿಯ ಕಡೆಗೆ ಹೋಗುತ್ತಿದ್ದ ಆಟೋ ರಿಕ್ಷಾ ಟ್ರಕ್ ಅನ್ನು ಓವರ್‌ಟೇಕ್ ಮಾಡಲು ಪ್ರಯತ್ನಿಸಿತು. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿ ಆಟೋ ರಿಕ್ಷಾ ಪಲ್ಟಿಯಾಗಿ ರಸ್ತೆ ಡಿವೈಡರ್ ಗೆ ಡಿಕ್ಕಿ ಹೊಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಅದೃಷ್ಟವಶಾತ್, ಆಟೋ ರಿಕ್ಷಾ ಚಾಲಕನಿಗೆ ಯಾವುದೇ ಗಾಯಗಳಾಗದೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

# ವಿಷಗಾಳಿ ಹೊರತರುವ ಕಾರ್ಖಾನೆಗಳನ್ನು ಮುಚ್ಚಿಸಿ




ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿ ವಿಷಪೂರಿತ ಗಾಳಿಯನ್ನು ಸೂಸುತ್ತಿರುವ ಕಾರ್ಖಾನೆಗಳನ್ನು ಮುಚ್ಚಿಸಬೇಕು ಎಂದು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಜೆಡಿಎಸ್ ಜಿಲ್ಲಾ ಘಟಕದಿಂದ ಮನವಿ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧ್ಯಕ್ಷ ಸುಭಾಶ್ಚಂದ್ರ ಕಟಕಟಿ, ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದ ಕೆಲವು ಕಾರ್ಖಾನೆಗಳು ವಿಷಪೂರಿತ ಗಾಳಿಯನ್ನು ಸೂಸುತ್ತಿವೆ ಇದರಿಂದ ಜನಸಾಮಾನ್ಯರಿಗೆ ಉಸಿರಾಟದ ತೊಂದರೆಯಾಗಿ ಆರೋಗ್ಯ ಕೆಡುತ್ತಿದೆ ಎಂದು ಸಾರ್ವಜನಿಕರು ಹಾಗೂ ಜಿ.ಟಿ. & ಟಿ.ಸಿ * ವಿದ್ಯಾರ್ಥಿ/ವಿದ್ಯಾರ್ಥಿನಿಯರು ನಮ್ಮ ಶಾಸಕರಾದ ಶರಣಗೌಡ ಕಂದಕೂರರವರಿಗೆ ದೂರು ನೀಡಿದ್ದು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನಮ್ಮ ಶಾಸಕರಾದ ಶರ-ಣಗೌಡ ಕಂದಕೂರ ರವರು ಸದನದ ಒಳಗೆ ಮತ್ತು ಹೊರಗೆ ವಿಷಪೂರಿತ ಗಾಳಿ ಸೂಸುವ ಕಾರ್ಖಾನೆ ಮುಚ್ಚುವ ಬಗ್ಗೆ ಸರ್ಕಾರಕ್ಕೆ ತಿಳಿಸಿದರು ಯಾವುದೇ ಪ್ರಯೋಜನವಾಗಿಲ್ಲ. ತಾವುಗಳು ಮುತುವರ್ಜಿವಹಿಸಿ ಜನರ ಆರೋಗ್ಯ ಮತ್ತು ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಠಿಯಿಂದ ಈ ಕೂಡಲೇ ವಿಷಪೂರಿತ ಗಾಳಿಯನ್ನು ಸೂಸುತ್ತಿರುವ ಕಾರ್ಖಾನೆಗಳನ್ನು ಗುರುತಿಸಿ, ಅವುಗಳ ಉತ್ಪಾದನೆಗಳನ್ನು ತಡೆಹಿಡಿದು, ಹಾಗೂ ಅವುಗಳ ಪರವಾನಿಗೆ ರದ್ದುಗೊಳಿಸಿ ಜನಸಾಮಾನ್ಯರ ಆರೋಗ್ಯ-ಕ್ಕೆ ಹಿತವಾಗುವಂತೆ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ತಪ್ಪಿದ್ದಲ್ಲಿ ಜಿಲ್ಲಾ ಜೆ.ಡಿ.ಎಸ್. ಪಕ್ಷದ ವತಿಯಿಂದ ಕಡೇಚೂರು-ಬಾಡಿಯಾಳ ಕೈಗಾರಿಕಾ ಪ್ರದೇಶದ ರಾಷ್ಟ್ರೀಯ ಹೆದ್ದಾರಿಯ ಮೇಲೆ ಉಗ್ರವಾದ ಚಳುವಳಿ ಹಮ್ಮಿಕೊಂಡು, ರಸ್ತೆ ತಡೆಗಟ್ಟಲಾಗುವುದು ಹಾಗೂ ವಿಷಪೂರಿತ ಗಾಳಿ ಸೂಸುತ್ತಿರುವ ಕಾರ್ಖಾನೆಗಳಿಗೆ ಬೀಗ ಹಾಕಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಭೋಜನಗೌಡ ಯಡ್ಡಳ್ಳಿ, ಚನ್ನಪ್ಪಗೌಡ ಮೋಸಂಬಿ, ವಿಶ್ವನಾಥ ಶಿರವಾರ, ಬಸವರಾಜಪ್ಪಗೌಡ ಗೊಂದಡಗಿ, ಜಿ.ತಮ್ಮಣ್ಣ ಬಂದಪ್ಪ ಅರಳಿ, ಚಂದ್ರುಗೌಡ ಸೈದಾಪೂರ ಮಲ್ಲಿಕಾರ್ಜುನ ಅರುಣಿ, ಈಶ್ವರ ನಾಯಕ, ನರಸಪ್ಪ ಕವಡೆ, ತಾಯಪ್ಪ ಬದ್ದೇಪಲ್ಲಿ, ಸಿದ್ದಲಿಂಗರಡ್ಡಿಗೌಡ, ಬಸಣ್ಣ ದೇವರಹಳ್ಳಿ, ಬಸರಡ್ಡಿ ಹೆಗ್ಗಣಗೇರಾ, ರವಿ ಪೊಲೀಸ್ ಪಾಟೀಲ್, ಶಮಿ ಸಾಹುಕಾರ ಕಡೆಚೂರ್, ಗುರುನಾಥರಡ್ಡಿ ಸೈದಾಪುರ್, ಸಿದ್ದಲಿಂಗರಡ್ಡಿ ಮುನಗಲ್,

ಶಂಕರಲಿಂಗ ಕಡೆಚೂರ್, ಸಿದ್ದಲಿಂಗರಡ್ಡಿ ಅರಕೆರಾ ಬಿ, ಈಶ್ವರನಾಯಕ, ಮಹಿಪಾಲರಡ್ಡಿ ಮಲ್ಹಾರ್, ಮಲ್ಲಿಕಾರ್ಜುನ ಆರುಣಿ, ಬಾಪುಗೌಡ ರಾಮಸಮುದ್ರ, ರಾಜು ಉಡುಪಿ, ಸೋಮ್ಮಣ್ಣಗೌಡ ಬೆಳಗೇರಾ, ಯಾಂಕೋಬಾ ಕಾಂಚಗಾರಹಳ್ಳಿ, ಶರಣಪ್ಪಗೌಡ ಹೊಸಳ್ಳಿ, ಶ್ರೀಧರ ಶೆಟ್ಟಹಳ್ಳಿ, ದೇವುಫಂಟಿ ಬಾಡಿಯಾಳ. ಲಕ್ಷಣ ನಾಯಕ ಕೂಡ್ಲುರ್, ಸೇರಿದಂತೆ ಇತರರಿದ್ದರು.

# ಕಾಲುವೆಗೆ ಏ.15ರವರೆಗೆ ನೀರು ಹರಿಸಲು ರೈತ ಸಂಘ ಮುಖಂಡರು ಒತ್ತಾಯ



ಮಲ್ಲಮ್ಮ ನುಡಿ ವಾರ್ತೆ

ನಾರಾಯಣಪುರ: ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಸಿಇ ಮಂಜುನಾಥ ಆರ್. ಅವರಿಗೆ ಮನವಿ ಸಲ್ಲಿಸಿದರು.

ನಾರಾಯಣಪುರ: ಕರ್ನಾಟಕ ರಾಜ್ಯ ರೈತ ಸಂಘ ಹುಣಸಗಿ ತಾಲೂಕು ಘಟಕದ ಪದಾಧಿಕಾರಿಗಳು ಶನಿವಾರ ಕೆಬಿಜೆಎನ್‌ಎಲ್ ಮುಖ್ಯ ಎಂಜಿನಿಯರ ಕಚೇರಿಗೆ ತೆರಳಿ ಹಿಂಗಾರು ಹಂಗಾಮಿನ ಬೆಳೆಗಳಿಗೆ ಏ.15ರವರೆಗೆ ಕಾಲುವೆಗಳಿಗೆ ನೀರು ಹರಿಸುವಂತೆ ಆಗ್ರಹಿಸಿ ಸಿಇ ಆರ್. ಮಂಜುನಾಥ ಅವರಿಗೆ ಮನವಿ ಸಲ್ಲಿಸಿದರು.

ರೈತ ಮುಖಂಡ ಹನುಮಗೌಡ ನಾರಾಯಣಪುರ, ಸಂಘಟನೆ ತಾಲೂಕು ಉಪಾಧ್ಯಕ್ಷ ಗದ್ದೆಪ್ಪ ನಾಗಬೇನಾಳ ಮಾತನಾಡಿ, ಕೃಷ್ಣಾ ಅಚ್ಚುಕಟ್ಟು ಭಾಗದ ರೈತರು ಕಾಲುವೆ ನೀರನ್ನೇ ನಂಬಿ ವಿವಿಧ ಬೆಳೆ ಬೆಳೆದಿದ್ದಾರೆ. ಪ್ರಸ್ತುತ ಬೆಳೆಗಳು ಸಮೃದ್ಧವಾಗಿ ಬೆಳೆಯಲು ಮುಂದಿನ ಎರಡು ತಿಂಗಳವರೆಗೆ ನೀರಿನ ಅವಶ್ಯಕತೆ ಇದೆ. ಆಗ ಮಾತ್ರ ಬೆಳೆಗಳು ರೈತರ ಕೈಸೇರುತ್ತವೆ. ಇದನ್ನು ನೀರಾವರಿ ಅಧಿಕಾರಿಗಳು ಮನಗಂಡು ಏ.15ರವರೆಗೆ ಎಡ ಹಾಗೂ ಬಲದಂಡೆ ಮುಖ್ಯ ಕಾಲುವೆಗಳಿಗೆ ನೀರು ಹರಿಸಬೇಕು ಎಂದರು.

ನಿಗಮದ ಅಡಿಯಲ್ಲಿ ಈ ಹಿಂದೆ ಬಾಕಿ ಉಳಿದ ಕಾಮಗಾರಿ ಶೀಘ್ರವೇ ಕೈಗೆತ್ತಿಕೊಂಡು ಪೂರ್ಣಗೊಳಿಸುವಂತೆ ಮನವಿಯಲ್ಲಿ ವಿವರಿಸಲಾಗಿದೆ ಎಂದರು.

ಸಿಇ ಆರ್. ಮಂಜುನಾಥ ಮನವಿ ಸ್ವೀಕರಿಸಿ ಮಾತನಾಡಿ, ಮನವಿಯನ್ನು ಸರ್ಕಾರ, ಎಂಡಿ ಹಾಗೂ ಐಸಿಸಿ ಸಭೆಗೆ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಅಧೀಕ್ಷಕ ಅಭಿಯಂತರ ಆರ್.ಜಿ. ರಾಠೋಡ, ಸಂಘಟನೆ ಜಿಲ್ಲಾ ಉಪಾಧ್ಯಕ್ಷ ತಿಪ್ಪಣ್ಣ ಜಂಪಾ, ನಿಂಗನಗೌಡ ಗುಳಬಾಳ, ಮೈಬೂಬ ಅಂಗಡಿ ಸೇರಿದಂತೆ ಗುಳಬಾಳ, ಕಕ್ಕೇರಾ, ನಾರಾಯಣಪುರ, ಮೇಲಿನಗಡ್ಡಿ, ದೇವರಗಡ್ಡಿ ಗ್ರಾಮಗಳ ರೈತರು, ರೈತ ಸಂಘದ ಪದಾಧಿಕಾರಿಗಳು ಇದ್ದರು.

## ಬಳ್ಳಾರಿ: ಕಪ್ಪಗಲ್ಲು ಗ್ರಾಮಕ್ಕೆ ಜಿಪಂ ಸಿಇಓ ಭೇಟಿ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.04–ತಾಲ್ಲೂಕಿನ ಕಪ್ಪಗಲ್ಲುಗ್ರಾಮದಲ್ಲಿ ಇತ್ತೀಚೆಗೆ ಕೋಳಿ ಸಾಕಾಣಿಕೆ ಮಾಡುವ ಕೇಂದ್ರದಲ್ಲಿ ಅಸಹಜವಾಗಿ ಕೋಳಿಗಳು ಸಾವನ್ನಪ್ಪಿದ್ದ ಹಿನ್ನಲೆಯಲ್ಲಿ ಮಂಗಳವಾರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಕೋಳಿ ಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಾಕಾಣಿಕೆ ಕೇಂದ್ರ(ಕೋಳಿ ಫಾರಂ)ದ ಸುತ್ತಲೂ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಅಗತ್ಯ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ಮಾಲೀಕರಿಗೆ ನಿರ್ದೇಶನ ನೀಡಿದರು.

ಇದೇವೇಳೆ ಮಾತನಾಡಿದ ಅವರು, ಕೋಳಿ ಶೀತ(ಹಕ್ಕಿ ಜ್ವರ) ಜ್ವರವು ಸಾಂಕ್ರಾಮಿಕ ರೋಗವಲ್ಲ. ಜನರು ಯಾವುದೇ ರೀತಿಯಲ್ಲಿ ಆತಂಕ ಪಡುವ ಅಗತ್ಯವಿಲ್ಲ. ಸಾರ್ವಜನಿಕರು ಕೋಳಿ ಮಾಂಸ ಮತ್ತು ಮೊಟ್ಟೆಯನ್ನು ಚೆನ್ನಾಗಿ ಬೇಯಿಸಿ ಸೇವಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಹನುಮಂತ ನಾಯ್ಕ ಕಾರಬಾರಿ, ಬಳ್ಳಾರಿ ತಾಲ್ಲೂಕು ಪಂಚಾಯಿತಿಯ ಇಒ ಮಡಗಿನ ಬಸಪ್ಪ, ಕಪ್ಪಗಲ್ಲು ಗ್ರಾಮದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಂಜುಳಾ ಹಾಗೂ ಸಾರ್ವಜನಿಕರು ಸ್ಥಳದಲ್ಲಿದ್ದರು.



ಬಸವಕಲ್ಯಾಣ :– ತಾಲೂಕಿನ ಸುಕ್ಷೇತ್ರ ಹಾರಕೂಡ ಗ್ರಾಮದ ಯಲದಗುಂಡಿ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಹಾದಿ ಬಸವಣ್ಣನ ದೇವಸ್ಥಾನದಲ್ಲಿ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ತಮ್ಮ ಅಮೃತ ಹಸ್ತದಿಂದ ನಂದಿ ಬಸವಣ್ಣನ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಮಾಡಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ, ಮೇಘರಾಜ ನಾಗರಾಳೆ, ಜಗನ್ನಾಥ ಕುಂಬಾರ ಮುಂತಾದವರು ಉಪಸ್ಥಿತರಿದ್ದರು.

## ಇಪಿಎಫ್‌ಓ: ಮಾ.13 ರಂದು ಪಿಂಚಣಿ ಅದಾಲತ್

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.04–ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಮಾ.13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇ–ರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ–ಮೇಲ್ ಮೂಲಕ ಪಿ.ಪಿ.ಒ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪವ ಹಾಗೂ ಇತ್ಯಾದಿಗಳನ್ನು ಮಾ.10 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.08392–268943 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಾರಸುದಾರರ ಪತ್ತೆಗೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.04–ನಗರದ ರೈಲ್ವೇ ನಿಲ್ದಾಣದ ಮುಂದಿನ ಆಟೋ ನಿಲ್ದಾಣ ಹತ್ತಿರ ಅಂದಾಜು 25 ರಿಂದ 30 ವರ್ಷದ ಅನಾಮಧೇಯ ವ್ಯಕ್ತಿಯು ಯಾವುದೋ ಖಾಯಿಲೆಯಿಂದ ಮಲಗಿದ್ದ ವ್ಯಕ್ತಿಯನ್ನು ವಿಮ್ಸ್ ಆಸ್ಪತ್ರೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೇ ಫೆ.24 ರಂದು ಮೃತಪಟ್ಟಿದ್ದು, ಈ ಕುರಿತು ಬಳ್ಳಾರಿ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಅವರು ಮನವಿ ಮಾಡಿದ್ದಾರೆ.

ಮೃತನ ಚಹರೆ: ಎತ್ತರ 5.5 ಅಡಿ, ಕೋಲು ಮುಖ, ಕಪ್ಪು ಮೈಬಣ್ಣ, ತೆಳ್ಳನೆಯ ಮೈಕಟ್ಟು ಹೊಂದಿದ್ದು, ಬಿಳಿ ಕೂದಲು, ಕಪ್ಪು ಮತ್ತು ಬಿಳಿ ಮೀಸೆ ಗಡ್ಡ ಇರುತ್ತದೆ. ಮೃತ ದೇಹದ ಮೈಮೇಲೆ ಒಂದು ಗ್ರೇ ಕಲರ್ ತುಂಬು ತೋಳಿನ ಶರ್ಟ್ ಮತ್ತು ನೀಲಿ ಬಣ್ಣದ ಜೀನ್ಸ್‌ಪ್ಯಾಂಟ್ ಧರಿಸಿರುತ್ತಾನೆ.

ಮೃತನ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಗಾಂಧಿನಗರ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ;08392–272192, 9480803046 ಅಥವಾ ಪೊಲೀಸ್ ಕಂಟ್ರೋಲ್ ರೂಂ, ಬಳ್ಳಾರಿ ದೂರವಾಣಿ ಸಂಖ್ಯೆ; 08392258100 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಹೆಚ್‌ಒ ಡಾ.ಯಲ್ಲಾ ರಮೇಶ್ ಬಾಬು ಸಲಹೆ ಗರ್ಭಿಣಿ ಅವಧಿಯಲ್ಲಿ ಒತ್ತಡಕ್ಕೊಳಗಾಗಬಾರದು



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.04–ಗರ್ಭಿಣಿ ಮಹಿಳೆಯರು ಗರ್ಭಿಣಿ ಅವಧಿಯಲ್ಲಿ ಯಾವುದೇ ರೀತಿಯ ಒತ್ತಡಕ್ಕೆ ಒಳಗಾಗಬಾರದು. ಗಂಡಾಂತರಕಾರಿ ಚಿಹ್ನೆಗಳಿದ್ದಲ್ಲಿ ಹೆರಿಗೆಯ 3 ದಿನ ಮೊದಲು ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾಗುವ ಮೂಲಕ ವೈದ್ಯರ ನಿಗಾವಣೆಯಲ್ಲಿದ್ದುಕೊಂಡು ಸರಳ ಹೆರಿಗೆಗೆ ಸಹಕರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಬಳ್ಳಾರಿ ತಾಲ್ಲೂಕಿನ ಹಡ್ಲಿಗಿ ಗ್ರಾಮದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕುಟುಂಬಗಳು ಹೆಚ್ಚು ವಾಸಿಸುವ ಸ್ಥಳಗಳಿಗೆ ತೆರಳಿ ಕಾಲುಬಾವು ಕಂಡುಬಂದ ತೊಡಕಿನ ಗರ್ಭಿಣಿಯನ್ನು ಗುರ್ತಿಸಿ ತಾಯಿ ಕಾರ್ಡ್ ಇತರೆ ದಾಖಲಾತಿ ಪರಿಶೀಲಿಸಿ ಕುಟುಂಬದ ಸದಸ್ಯರೊಂದಿಗೆ ಅವರು ಮಾತನಾಡಿದರು. ಗರ್ಭಿಣಿ ಮಹಿಳೆಯರು ತನ್ನ ಕುಟುಂಬದ ಆಗುಹೋಗುಗಳನ್ನು ಶಾಂತಚಿತ್ತದಿಂದ ನಿಭಾಯಿಸುವ ಜೊತೆ ಜೊತೆಗೆ ಕುಟುಂಬದ ಸದಸ್ಯರು ದಿನತುಂಬುವ ಹಂತದಲ್ಲಿರುವ ಗರ್ಭಿಣಿಯರಿಗೆ ಯಾವುದೇ ಒತ್ತಡ ಅಥವಾ ಒತ್ತಡದ ಪರಿಸ್ಥಿತಿ ತರದಂತೆ ಸರಳ ಹೆರಿಗೆಗೆ ಕೈಜೋಡಿಸಬೇಕು ಎಂದು ತಿಳಿಸಿದರು. ಗರ್ಭಿಣಿಯಲ್ಲಿ ಅಪಾಯಕಾರಿ ಚಿಹ್ನೆಗಳು ಕಂಡುಬಂದಲ್ಲಿ ಹೆರಿಗೆಯ 3 ದಿನ ಪೂರ್ವದಲ್ಲಿ ಆಸ್ಪತ್ರೆಗೆ ದಾಖಲಿಸುವ ಜೊತೆಗೆ ತಮ್ಮ ಮನೆ ಮಗಳು ಅಥವಾ ತಮ್ಮ ಮನೆಯ ಸೊಸೆ ಸಂತಸದಿಂದ ನವಜಾತ ಶಿಶುವಿನೊಂದಿಗೆ ಮನೆಗೆ ತೆರಳುವ ಅವಕಾಶಕ್ಕೆ ಕೈಗೂಡಿಸಬೇಕು ಎಂದು ವಿನಂತಿಸಿದರು. ಚೊಚ್ಚಲು ಗರ್ಭಿಣಿ, ಎತ್ತರ ಕಡಿಮೆ, ಅಧಿಕ ರಕ್ತದೊತ್ತಡ, ರಕ್ತದಲ್ಲಿ ಕಬ್ಬಿಣಾಂಶ ಕೊರತೆ, ಅವಳಿ–ಜವಳಿ ಗರ್ಭಿಣಿ, ವಿವಾಹವಾಗಿ ಐದಕ್ಕಿಂತ ಹೆಚ್ಚು ವರ್ಷಗಳ ನಂತರ ಗರ್ಭಿಣಿಯಾಗಿರುವುದು, ಮೊದಲ ಹೆರಿಗೆ ಸಿಸೇರಿಯನ್ ಮುಂತಾದ ಕಾರಣಗಳಿದ್ದರೆ ಆಯಾ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕ ಸಾರ್ವಜನಿಕ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಬೇಕು ಎಂದರು. ಹೆರಿಗೆ ಅವಧಿಯಲ್ಲಿ ಕಂಡು ಬರಬಹುದಾದ ಸಂಭವನಿಯ ತೊಂದರೆಗಳನ್ನು ವೈದ್ಯರ ನಿಗಾವಣೆ ಮೂಲಕ ಗುರ್ತಿಸಿ ಸುರಕ್ಷಿತ ಹೆರಿಗೆ ಕೈಗೊಳ್ಳಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಗರ್ಭಿಣಿ ಅವಧಿಯಲ್ಲಿ ಮಹಿಳೆಗೆ ಪೌಷ್ಟಿಕ ಆಹಾರ ಒದಗಿಸುವ ವ್ಯವಸ್ಥೆ ಸಹ ಕಲ್ಪಿಸಲಾಗುವುದು. ಗರ್ಭಿಣಿಯ ಪಾಲಕರು ಇದರ ಸದುಪಯೋಗ ಪಡೆದು ತಾಯಿ ಮಗುವಿನ ಆರೈಕೆಗೆ ಪೂರಕವಾಗಬೇಕು ಎಂದರು.

ತೀವ್ರ ರಕ್ತಹೀನತೆಯಂತಹ ಸನ್ನಿವೇಶದಲ್ಲಿ ಕ್ಷೇತ್ರ ಮಟ್ಟದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆ (ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ) ಪಡೆಯಬೇಕು. ಸುಧಾರಣೆಯಾಗದಿದ್ದಲ್ಲಿ ತಪ್ಪದೇ ತಜ್ಞರ ಬಳಿ ಹೋಗಬೇಕು. ಅಗತ್ಯವಿದ್ದಲ್ಲಿ ಸ್ಕ್ಯಾನ್ ಮಾಡಿಸುವುದು. ಮೊದಲ ಹೆರಿಗೆ ಶಸ್ತ್ರಚಿಕಿತ್ಸೆ ಮೂಲಕವಾದಲ್ಲಿ ಪುನಃ ಗರ್ಭಿಣಿಯಾಗುವ ಅವಧಿಯನ್ನು ಕನಿಷ್ಠ 3 ವರ್ಷಕ್ಕೆ ಕಡ್ಡಾಯವಾಗಿ ಮುಂದೂಡಬೇಕು. ಗಾಳಿ ಸುದ್ದಿಗಳಿಗೆ ಕಿವಿಗೊಟ್ಟು ಕಬ್ಬಿಣಾಂಶ ಮಾತ್ರೆ ನುಂಗಿದರೆ, ಭ್ರೂಣ ದಪ್ಪವಾಗುತ್ತದೆ, ಕಪ್ಪು ಬಣ್ಣದ ಮಗು ಹುಟ್ಟುತ್ತದೆ ಎಂಬ ತಪ್ಪು ನಂಬಿಕೆ ನಂಬಬಾರದು ಎಂದು ತಿಳಿಸಿದರು.

ವೈದ್ಯರ ಸಲಹೆಯಂತೆ ಉಚಿತವಾಗಿ ನೀಡುವ ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಠ 180 ಮಾತ್ರೆ ಮತ್ತು ಒಂದು ವೇಳೆ ರಕ್ತಹೀನತೆಯ ಪ್ರಮಾಣ ತೀವ್ರವಾಗಿದ್ದಲ್ಲಿ ದಿನಕ್ಕೆ 2 ರಂತೆ 360 ಮಾತ್ರೆಗಳನ್ನು 6 ತಿಂಗಳ ಅವಧಿಯಲ್ಲಿ ಸೇವಿಸುವಂತೆ ಇದರ ಜೊತೆಯಲ್ಲಿ ದೈಹಿಕವಾಗಿ ಸದೃಢವಾಗಿರಲು ಕ್ಯಾಲ್ಸಿಯಮ್ ಮಾತ್ರೆಗಳನ್ನು ಸಹ ನುಂಗುವಂತೆ ವಿನಂತಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಆಶಾಕಾರ್ಯಕರ್ತೆಯರಾದ ಗಂಗಮ್ಮ, ಶಶಿಕಲಾ, ರತ್ನಮ್ಮ ಸೇರಿದಂತೆ ಸಿಬ್ಬಂದಿಯವರು ತಾಯಂದಿರು ಹಾಜರಿದ್ದರು.

## ಹಿರಿಯರನ್ನು ಪ್ರತಿಯೊಬ್ಬರೂ ಗೌರವದಿಂದ ಕಾಣಬೇಕು: ಪಾಟೀಲ




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ: ನಿರಂತರ ಸರ್ಕಾರದ ಕೆಲಸ ನಿರ್ವಹಿಸಿ ನಿವೃತ್ತರಾದವರಿಗಾಗಿ ಪುರಸಭೆಯ ಸಿಎ ನಿವೇಶನದಲ್ಲಿ ಪ್ರತ್ಯೇಕ ಅತಿಥಿಗೃಹ ನಿರ್ಮಾಣಕ್ಕೆ ಅನುದಾನ ನೀಡುವುದಾಗಿ ಶಾಸಕ ಡಾ. ಸಿದ್ದು ಪಾಟೀಲ ಭರವಸೆ ನೀಡಿದರು.

ಪಟ್ಟಣದ ಸರ್ಕಾರಿ ನೌಕರರ ಭವನದಲ್ಲಿ ಕರ್ನಾಟಕ ರಾಜ್ಯ ನಿವೃತ್ತ ಸರಕಾರಿ ನೌಕರರ ಸಂಘದಿಂದ 80 ವರ್ಷ ಪೂರೈಸಿದ ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಜೀವನದಲ್ಲಿ ಮುಂದುವರಿಯ ಬೇಕಾದರೆ ಹಿರಿಯರ ಆಶೀರ್ವಾದ ಬಹುಮುಖ್ಯವಾಗಿದೆ. 80 ವರ್ಷ ಪೂರೈಸಿದ ನೌಕರರಿಗೆ ಸನ್ಮಾನ ಮಾಡುತ್ತಿರುವ ಕಾರ್ಯಕ್ರಮ ತುಂಬಾ ಮೆಚ್ಚುಗೆಯಾಗಿದ್ದು, ಮುಂದಿನ ದಿನಗ ಳಲ್ಲಿ ಇಂತಹ ಕಾಯ ರ್ಕ್ರಮವೊಂದನ್ನು ದೊಡ್ಡ ಪ್ರಮಾಣದಲ್ಲಿ ಮಾಡೋಣ. ಹಿರಿಯರನ್ನು ಪ್ರತಿಯೊಬ್ಬರೂ ಗೌರವದಿಂದ ಕಾಣಬೇಕು. ಹಿರಿಯರು ಕಿರಿಯರಿಗೆ ಸೂಕ್ತ ಮಾರ್ಗದರ್ಶನ ಮಾಡಿದಲ್ಲಿ, ಸಮಾಜದಲ್ಲಿ ಎಲ್ಲರೂ ಸಂತೋಷದಿಂದ ಬದುಕಲು ಸಾಧ್ಯವಾಗುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯ. ಚಂದ್ರಶೇಖರ ಪಾಟೀಲ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ಜತೆಗೆ ಸಂಸ್ಕಾರವನ್ನೂ ನೀಡಬೇಕು. ಇಂದು 80 ಗಡಿ ದಾಟಿದರೂ ನಿವೃತ್ತ ನೌಕರರು ಅತ್ಯಂತ ಆನಂದದಿಂದ ಜೀವನ ಕಳೆಯುತ್ತಿದ್ದಾರೆ ಎಂದರೇ ಅದರ ಹಿಂದೆ ಗುರು–ಹಿರಿಯರ ಎಂ.ಎಲ್.ಸಿಯಾಗಿ ಆಯ್ಕೆಯಾಗಿರುವುದರ ಆಶೀರ್ವಾದವಿದೆ. ನಾನೇ ಹಿಂದೆ ನಾನು ನನ್ನ ತಂದೆ ದಿ. ಬಸವರಾಜ ಪಾಟೀಲ್ ಅವರ ಜೀವಿತಾವಧಿಯಲ್ಲಿ ಸೇವೆ ಸಲ್ಲಿಸಿರುವುದೇ ಕಾರಣ ಎಂದರು. ವಿದ್ಯಾರ್ಥಿಗಳು ಶ್ರದ್ಧೆಯಿಂದ ಅಧ್ಯಯನ ಮಾಡಿದಾಗ ಜೀವನದಲ್ಲಿ ಉತ್ತಮ ಸ್ಥಾನಮಾನ ಪಡೆದು ಮನ್ನಣೆ ಪಡೆಯಬಹುದು. ಹಾಗೂ ಬೇರೆ ಕಡೆ ಗಮನಹರಿಸವುದನ್ನು ಬಿಟ್ಟು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ಕೊಡಬೇಕು. ವಿದ್ಯಾರ್ಥಿಯ ಜೀವನ ಬಹಳ ಅತ್ಯಮೂಲ್ಯವಾಗಿದ್ದು, ಆರ್ಥಿಕವಾಗಿ ಸಬಲರಾದ ನಂತರ ನೀವು ನಿಮ್ಮ ಅಕ್ಕಪಕ್ಕದ, ಜತೆಯಲ್ಲಿರುವವರ ಕಷ್ಟಕ್ಕೆ ಸಹಾಯಹಸ್ತ ಚಾಚುವಂತೆ ತಿಳಿಸಿದರು. ವಿದ್ಯಾರ್ಥಿಗಳಾದವರು ಪರೀಕ್ಷೆ ಮುಗಿಯುವವರೆಗೆ ಮೊಬೈಲ್ ಮತ್ತು ಟಿವಿಗಳಿಂದ ದೂರವಿದ್ದು, ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನ ಹರಿಸಿ, ಕಾಲೇಜಿಗೆ ಮತ್ತು ತಂದೆ–ತಾಯಿಗೆ ಉತ್ತಮ ಹೆಸರನ್ನು ತರಬೇಕು ಎಂದು ಪಾಟೀಲ ತಿಳಿಸಿದರು. ಸಂಘದ ಜಿಲ್ಲಾಧ್ಯಕ್ಷ ನಾಗಪ್ಪ ಜಂಬಗಿ ಉದ್ಘಾಟಿಸಿದರು. ಸಂಘದ ತಾಲ್ಲೂಕು ಅಧ್ಯಕ್ಷ ರಾಜಣ್ಣ ಹುಡಗೀಕರ್ ಅಧ್ಯಕ್ಷತೆ ವಹಿಸಿದ್ದರು.

ಸಂಘದ ಜಿಲ್ಲಾ ಕಾರ್ಯದರ್ಶಿ ಎಸ್.ಬಿ.ಕುಚಬಾಳ, ತಾಲ್ಲೂಕು ಧರ್ಮಪಾಲ್ ಪೊದ್ದಾರ, ಉಪಾಧ್ಯಕ್ಷ ಭೀಮಣ್ಣ ಮರಪಳ್ಳಿ, ಕಾಶಿನಾಥರೆಡ್ಡಿ, ಪ್ರಧಾನ ಕಾರ್ಯದರ್ಶಿ ಲಕ್ಷ್ಮಣಸಿಂಗ್ ರಜಪುತ್. ಕೋಶಾಧ್ಯಕ್ಷ ವಿಠಲ್ ದೌಲಪ್ಪ, ತಾಲೂಕು ಅಧ್ಯಕ್ಷರು ಉಪಸ್ಥಿತರಿದ್ದರು. ಪ್ರೌಢಶಾಲಾ ಸಹಶಿಕ್ಷಕರ ಸಂಘದ ಹಿರಿಯ ಉಪಾಧ್ಯಕ್ಷ ವೀರಂತರೆಡ್ಡಿ ಜಂಪಾ, ಕರಾವಿಪ ಜಿಲ್ಲಾಧ್ಯಕ್ಷ 'ಸುರೇಂದ್ರನಾಥ ಹುಡಗೀಕರ್ ಅಚ್ಚುಕಟ್ಟಾಗಿ ನಿರೂಪಿಸಿದರು.

## ಕುಡಿಯುವ ನೀರಿನ ಸಮಸ್ಯೆ ಕೊಪ್ಪಳ ಜಿಲ್ಲಾ ಪಂಚಾಯತ್ ಸಿ.ಇ. ಓ ಸೋಂಪುರ ಗ್ರಾಮಕ್ಕೆ ದಿಡೀರ ಬೇಟಿ



ಮಲ್ಲಮ ನುಡಿ ವಾರ್ತೆ

ಕೊಪ್ಪಳ : ಕುಕನೂರ ತಾಲೂಕಿನ ಮಂಡಲಗೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸೋಂಪೂರ ಗ್ರಾಮದಲ್ಲಿ ಕಳೆದ 1 ವಾರದಿಂದ ತಲೆದೋರಿದ ಕುಡಿಯೋ ನೀರಿನ ಸಮಸ್ಯೆ ನಿಮಿತ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಕೊಪ್ಪಳ ರಾಹುಲ್ ರತ್ನಂ ಪಾಂಡೆ ಭೇಟಿ ನೀಡಿ ಸಮಸ್ಯೆ ಕುರಿತು ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿದರು, ಜಲ್ ಜೀವನ್ ಮಿಷನ್ ಅಡಿಯಲ್ಲಿ ಪ್ರತಿ ಮನೆಗೂ ನೀರು ನೀಡಲಾಗುತ್ತಿದ್ದು, ಕೆಲವು ಕಡೆ ಗ್ರಾಮದ ಕೊನೆಯ ಮನೆಗಳಿಗೆ ನೀರು ತಲುಪ್ಪುವುದಿಲ್ಲ ಅಂಥ ಸಮಸ್ಯೆಗಳನ್ನು ಒಂದು ವಾರದ ಓಳಗಾಗಿ ಪೈಪ್ ಲೈನ್ ದುರಸ್ತಿ ಮಾಡಿ ನೀರು ಸರಬರಾಜು ಮಾಡಲಾಗುತ್ತದೆ ಎಂದರು. ನಂತರ ಗ್ರಾಮದ ಏಕೈಕ ಕುಡಿಯೋ ನೀರಿನ ಮೂಲವಾದ ಕೆರೆಗೆ ಭೇಟಿ ನೀಡಿದರು. ಮುಕ್ತಾಯಗೊಂಡಿರುವ ಅಂಗನವಾಡಿ ಕಟ್ಟಡ ಹಣ ಪಾವತಿಸುವಂತೆ ಹುಚ್ಚೀರಪ್ಪ ಹೈದ್ರಿ ಗುತ್ತಿಗೆದಾರರು ಮಾನ್ಯರನ್ನು ಕೇಳಿದರು, ಸದರಿ ಸಮಸ್ಯೆಯನ್ನು ಒಂದು ವಾರದಲ್ಲಿ ಪರಿಹರಿಸುವುದಾಗಿ ಹೇಳಿದರು.

ಸ್ಥಳದಲ್ಲಿ ಕುಕನೂರ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ ಬಿರಾದರ್ , ಗ್ರಾ.ಪಂ ಕಾರ್ಯದರ್ಶಿ ಸರಿತಾ ರಾಠೋಡ್, ಗ್ರಾಮದ ಮುಖಂಡರಾದ ಸೋಮಶೇಖರಗೌಡ್ರ, ಬಸವರಾಜ ಹಳ್ಳಿಕೇರಿ, ಕೆ.ಬಿ ನಾಯಕರ್ ಹಾಗೂ ಸ್ಥಳಿಯರು ಹಾಜರಿದ್ದರು.

## ವಿಜೃಂಭಣೆಯಿಂದ ಜರುಗಿದ ಗುರುಬಸವೇಶ್ವರ ಪಂಚಕಳಸ ಮಹಾ ರಥೋತ್ಸವ

ಮಲ್ಲಮ ನುಡಿ ವಾರ್ತೆ

ಕೊಪ್ಪಳ: ಜಿಲ್ಲೆಯ ಕುಕನೂರ ತಾಲೂಕಿನ ಮುತ್ತಾಳ ಗ್ರಾಮದ ಶ್ರೀ ಗುರುಬಸವೇಶ್ವರ ಪಂಚ ಕಳಸ ಮಹಾರಥೋತ್ಸವ ಶನಿವಾರ ಸಂಜೆ ನೆರೆದ ಸಹಸ್ರಾರು ಭಕ್ತರ ಜಯ ಘೋಷದೊಂದಿಗೆ ಅದ್ದೂರಿಯಾಗಿ ಜರುಗಿತು

ರಥೋತ್ಸವಕ್ಕೆ ಗ್ರಾಮದ ಸುತ್ತಮುತ್ತಲಿನ ಸಹಸ್ರಾರು ಭಕ್ತಾದಿಗಳು ಆಗಮಿಸಿ ಗುರು ಬಸವೇಶ್ವರರ ಮಹಾರಥೋತ್ಸವಕ್ಕೆ ಭಕ್ತರು ಉತ್ತತ್ತಿ ಸಮರ್ಪಿಸಿ ಭಕ್ತಿ ಮೆರೆದರು.



ಈ ಜಾತ್ರೋತ್ಸವದ ಸಾನಿಧ್ಯವನ್ನು ಡಾ: ಮಹದೇವ ಮಹಾಸ್ವಾಮಿಗಳು ಕುಕನೂರ ಅನ್ನದಾನೇಶ್ವರ ಶಾಖಾ ಮಠ, ಶ್ರೀ ಹಿರೇ ಶಾಂತವೀರ ಮಹಾಸ್ವಾಮಿಗಳು ಹಡಗಲಿ, ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಅರಳಲೆ ಹಿರೇಮಠ ಮಂಗಳೂರು, ಶ್ರೀ ವೇದಮೂರ್ತಿ ಶೇಖರಯ್ಯ ಹಿರೇಮಠ ಗುರುಗಳು ಸಾನಿಧ್ಯ ವಹಿಸಿದ್ದರು.

ಗ್ರಾಮದ ಗುರುಹಿರಿಯರು, ಯುವಕ ಮಿತ್ರರು, ಸುತ್ತಲಿನ ಗ್ರಾಮದ ಸದ್ಭಕ್ತರು ಪಾಲ್ಗೊಂಡಿದ್ದರು.

## ಹಂಪಿ ಉತ್ಸವದಲ್ಲಿ ಗಮನ ಸೆಳೆದ ಬಿ. ಎನ್. ಹೊರಪೇಟೆ ಅವರ ನಿರೂಪಣೆ



ಮಲ್ಲಮ ನುಡಿ ವಾರ್ತೆ

ಕೊಪ್ಪಳ : ಇತ್ತಿಚಿಗೆ ನಡೆದ ವಿಜಯನಗರ ಗತವೈಭವದ ಸಂಭ್ರಮಾಚರಣೆಗೆ ಸಾಕ್ಷಿಯಾದ ಹಂಪಿ ಉತ್ಸವದಲ್ಲಿ ಯುವ ಸಾಹಿತಿ, ಪತ್ರಕರ್ತ ಬಿ.ಎನ್. ಹೊರಪೇಟಿ ಅವರು ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖ್ಯ ವೇದಿಕೆಯಾದ ಎದುರು ಬಸವಣ್ಣ ವೇದಿಕೆಯಲ್ಲಿ ಮೂರನೇ ದಿನ ಕಾರ್ಯಕ್ರಮ ನಿರೂಪಿಸಿದ ಶೈಲಿ ಎಲ್ಲರ ಗಮನ ಸೆಳೆಯಿತು.

ಬಿ.ಎನ್.ಹೊರಪೇಟಿ ಮೂಲತಃ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಮೋರನಹಳ್ಳಿ ಗ್ರಾಮದವರಾಗಿದ್ದು ವಿವಿಧ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ. ಸಕಲಕಲಾ ವಲ್ಲಭರಾಗಿ ಸಾಹಿತ್ಯ, ಸಿನೆಮಾ, ಸಂಘಟನೆ ಹಾಗೂ ನಿರೂಪಣೆಗೂ ಸೈ ಎನಿಸಿಕೊಂಡಿದ್ದಾರೆ. ರಾಷ್ಟ್ರೀಯ ಅಂತರರಾಷ್ಟ್ರೀಯ ಕಾರ್ಯಕ್ರಮಗಳಲ್ಲೂ ಭಾಗಿಯಾಗಿ ಕನ್ನಡ ಪ್ರೇಮಕ್ಕೆ ಸಾಕ್ಷಿಯಾಗಿದ್ದಾರೆ. ಕಲೆ, ಕಲಾವಿದರ ಏಳ್ಗೆಗಾಗಿ ಶ್ರಮಿಸುತ್ತಿರುವ ಇವರು ಹಂಪಿ ಉತ್ಸವದ ಮೂರನೇ ದಿನದ ಕಾರ್ಯಕ್ರಮದ ನಿರೂಪಣೆಗೆ ಆಯ್ಕೆ ಮಾಡಿ ಜವಾಬ್ದಾರಿಯನ್ನು ವಹಿಸಿತ್ತು ಜಿಲ್ಲಾಡಳಿತ ದ ಹಾಗೂ ಅಧಿಕಾರಿಗಳ ಮೆಚ್ಚುಗೆ ಪಡೆಯುವ ಮೂಲಕ ಇಲಾಖೆಯ ಗೌರವಕ್ಕೆ ಪಾತ್ರರಾದರು. ಗ್ರಾಮೀಣ ಭಾಗದಲ್ಲಿ ಬೆಳೆದ ಇವರ ಬೆಳವಣಿಗೆ ಜಿಲ್ಲೆಯ ಕೀರ್ತಿ ಹೆಚ್ಚಿಸಿದೆ.

## ಮಂಜೇಶ್ವರ: ಭೀಕರ ರಸ್ತೆ ಅಪಘಾತ; ಮೂವರು ದುರ್ಮರಣ



ಮಲ್ಲಮ ನುಡಿ ವಾರ್ತೆ

ಕಾಸರಗೋಡು–ತಲಪಾಡಿ ರಸ್ತೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿದ್ದು ಇಲ್ಲಿ ತಾತ್ಕಲಿಕ ಅಲ್ಲಲ್ಲಿ ತಡೆಗೋಡೆ ಹಾಗೂ ಡಿವೈಡರ್ ನಿರ್ಮಿಸುವುದರಿಂದ ವಾಹನ ಚಾಲಕರಿಗೆ ಗೊಂದಲ ಉಂಟಾಗಿ ಹಲವು ಅಪಘಾತ ಸಂಭವಿಸಿದೆ.

ಇಂದು ಮಂಜೇಶ್ವರ ಬಳಿಯ ಉಪ್ಪಳ ಬ್ರಿಡ್ಜ್ ಸಮೀಪ ಭೀಕರ ರಸ್ತೆ ಅಪಘಾತ ಸಂಭವಿಸಿದ್ದು ಡಿವೈಡರ್ ಗೆ ಕಾರು ಡಿಕ್ಕಿ ಯಾದ ರಭಸಕ್ಕೆ ಕಾರು ತುಂಡು ತುಂಡಾಗಿ ರಸ್ತೆಗೆಸೆಯಲ್ಪಟ್ಟ ಘಟನೆ ವರದಿಯಾಗಿದೆ.

ಬಿಜೆಪಿ ಕಾಂಗ್ರೆಸ್ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಆ ಪಕ್ಷಗಳಿಗೆ ಎಚ್ಚರಿಸೋಣ ಬಿ ವೆಂಕಟ್

# ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘ ಜಿಲ್ಲಾ ಸಮಿತಿ ಯಾದಗಿರಿ ವತಿಯಿಂದ ವಿಭಾಗಿಯ ಸಮಾವೇಶ.



ಮಲ್ಲಮ್ಮ ನುಡಿ ವಾರ್ತೆ

ಬಿ ವೆಂಕಟ ಅಖಿಲ ಭಾರತ ಕೃಷಿ ಕೂಲಿಕಾರ್ಮಿಕ ಸಂಘಟನೆಂಖಂಘಗ ನವ ದೆಹಲಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಗರದ ಗೋಗಿ ಫಂಕ್ಷನ್ ಹಾಲ್ ಮೇ ತಿಂಗಳಲ್ಲಿ ನಡೆಯುವ ಸಮಾವೇಶ ಕೇಂದ್ರ ಹಾಗೂ ರಾಜ್ಯ ಸರ್ಕಾರ ಗಳ ಬಗ್ಗೆ ಜನರಿಗೆನೀಡಿರುವ ಭರವಸೆಗಳನ್ನು ಪೊಳ್ಳುಮಾಡಿರುವ ಕೇಂದ್ರ ಬಿಜೆಪಿ ಸರ್ಕಾರ ಹಾಗೂ ರಾಜ್ಯ ಸರ್ಕಾರ ವಿರುದ್ಧ ಪ್ರತಿಭಟನೆ ಮಾಡುವುದಾಗಿ ಭಾರತ ಅತ್ಯಂತ ಸಮಾವೇಶ ಮಾಡುವುದಾಗಿ ತಿಳಿಸಿದರು. ಬೀದರ್ ಕಲಬುರ್ಗಿ ರೈಚೂರ್ ಯಾದಗಿರಿ ವಿಜಯಪುರ ಎಲ್ಲ ಕೃಷಿ ಹುಲಿಗಾರ್ ಸಂಘದ ವತಿಯಿಂದ ವಿಭಾಗಿ ಮಟ್ಟದ ಸಮಾವೇಶ ಎಲ್ಲಾ ಜಿಲ್ಲೆಗಳಿಂದ ಆಗಮಿಸಿದ ಕೃಷಿ ಕೂಲಿ ಕಾರ್ಮಿಕರು. ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರವು ಬರೀ ಜನರಿಗೆ ಆಶ್ವಾಸನೆಗಳನ್ನು ಕೊಟ್ಟು ಜನರಿಗೆ ಕೆಲಸ ಮಾಡಿದೆ ಇಲ್ಲಿವರೆಗೂ ಸರಕಾರದಿಂದ ಕಾರ್ಮಿಕರಿಗೆ ರೈತರಿಗೆ ಬಡ ಕುಟುಂಬಗಳಿಗೆ ದುಡಿಯುವ ವರ್ಗಗಳಿಗೆ ಏನಾದರೂ ಯೋಜನೆಗಳು ನಿಮಗೆ ದೊರಕಿದೆಯಾ? ಕ್ಯಾಬಿನೆಟ್ ನಲ್ಲಿ ಬರೀ ಕಾರ್ಪೆಂಟರ್ ಓಲೈಕೆ ಕೆಲಸ ಮಾಡಿದೆ. ದಿನನಿತ್ಯ ದುಡಿಯುವ ಕೂಲಿಕಾರ್ಮಿಕರಿಗೆ ಕೃಷಿಕರಿಗೆ ರೈತರಿಗೆ ಯಾವುದೇ ರೀತಿಯಿಂದ ಅನುಕೂಲ ಮಾಡಿಲ್ಲ ಮೋದಿ ಬರಿ ಮೋಡಿ ಮಾತುಗಳನ್ನ ಆ ದುತ್ತ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇಂಥ ಆಧುನಿಕ ಜಗತ್ತಿನಲ್ಲಿ ಕುಂಭಮೇಳಕ್ಕೆ ಯಶಸ್ವಿಯಾಗಿದೆ ಹೇಳುವ ಮೋದಿ ರೈತರಿಗೆ ಕೃಷಿ ಕಾರ್ಮಿಕರಿಗೆ ಬಜೆಟಿನಲ್ಲಿ ಇಷ್ಟು ಅನುಕೂಲ ಮಾಡಿದ್ದೇನೆ ಅಂತ ಯಾವತ್ತಾದರೂ ಹೇಳಿದ್ದಾರ ಎಂಬುವ ಯೋಚನೆ ಪ್ರಶ್ನೆ ನಮ್ಮೆಲ್ಲರಲ್ಲಿ ಕಾಡುತ್ತಿದೆ. ಮೋದಿ ಸರ್ಕಾರ ಎಲ್ಲ ಬಡ ಕುಟುಂಬಗಳಿಗೆ ಮನೆ ನಿರ್ಮಾಣ ಮಾಡಿಕೊಡುತ್ತೇವೆ ಎಂದು ಹೇಳಿದರು ಯಾವತ್ತೂ ಸಹ ಆಗದೇ ಇಲ್ಲ ಇಂಥ ಪಳ್ಳು ಸರ್ಕಾರಗಳನ್ನು ಪ್ರತಿಯೊಬ್ಬ ಕೃಷಿ ಕಾರ್ಮಿಕರು ಅಲ್ಲಿನ ಶಾಸಕರುಗಳಿಗೆ ಸಂಸದರಿಗೆ ಎಚ್ಚರಿಕೆಯ ಸಂದೇಶವನ್ನು ನಾವೆಲ್ಲರೂ ಸೇರಿ ಮಾಡೋಣ ಎಂದು ಹೇಳಿದರು. ಜೊತೆಗೆ ರಾಜ್ಯ ಸರ್ಕಾರದಲ್ಲಿ ಇಲ್ಲಿವರೆಗೂ ಬಿಜೆಪಿ ಕಾಂಗ್ರೆಸ್ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಇಂಥ ಸರ್ಕಾರಗಳನ್ನು ಕೆಲಸ ನಾವೆಲ್ಲರೂ ಮಾಡಬೇಕಾಗಿದೆ. ರಾಜ್ಯದಲ್ಲಿ ಭೂಮಿ ಇಲ್ಲದ ಫಲಾನುಭವಿಗಳಿಗೆ ಎರಡು ಎಕರೆ ಭೂಮಿ ಹಂಚಿಕೆ ಮಾಡಬೇಕು. ಪ್ರತಿಯೊಂದು ಕುಟುಂಬಕ್ಕೆ 10 ಕೆಜಿ ಅಕ್ಕಿ ರಾಜ್ಯದಂತಹ ಹಲವು ಯೋಜನೆಗಳು ಬಡವರಿಗೆ ತಲುಪುವ ಯೋಜನೆಗಳಾಗಬೇಕು. ಈ ಪಂಚ ಗ್ಯಾರಂಟಿಗಳು ರಾಜ್ಯದಲ್ಲಿ ಜಾರಿಗೆ ತಂದು ದಿವಾಳಿ ಬರುವ ಪರಿಸ್ಥಿತಿ ಎದುರಾಗಿದೆ ಬಿಜೆಪಿ ಸರ್ಕಾರ 40 ಪರ್ಸೆಂಟ್ ಕಮಿಷನ್ ತಿನ್ನುತ್ತಿದ್ದೆ ಎಂದು ಆರೋಪ ಮಾಡಿದ ಕಾಂಗ್ರೆಸ್ ಸರ್ಕಾರ ಇವರು 50 ಪರ್ಸೆಂಟ್ ತಿನ್ನುತ್ತಿದ್ದಾರೆ ಹಾಗಾಗಿ ಬಿಜೆಪಿ ಸರ್ಕಾರವು ಜನರಿಗೆ ಮೋಸ ಮಾಡುತ್ತಲೇ ಬಂದಿದೆ ಕಾಂಗ್ರೆಸ್ ಸರ್ಕಾರವು ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಹಾಗೂ ಬಡ ರೈತರಿಗೆ ಕೃಷಿಕಾರ್ಮಿಕರಿಗೆ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಇಂತಹ ರಾಜಕೀಯ ವ್ಯಕ್ತಿಗಳಿಗೆ ತಕ್ಕ ಪಾಠ ಕಲಿಸುವ ಕಾಲ ಬಂದಿದೆ ನಾವೆಲ್ಲರೂ ಸೇರಿ ಜಾಗೃತರಾಗಿ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ನಿಜವಾದ ಫಲಾನುಭವಿಗಳು. ಹಾಗೂ ಯಾರಿಗೆ ನಿವೇಶನ ವಂಚಿತರಾಗಿದ್ದಾರೆ ಅಂತವರಿಗೆ ಮನೆ ಮಾಡಿಸಿಕೊಡುವ ಕೆಲಸ ಕೃಷಿ ಕಾರ್ಮಿಕ ಸಂಘಟನೆ ಮಾಡುತ್ತದೆ ಎಂದು ಸುದೀರ್ಘವಾಗಿ ಹಲವಾರು ವಿಚಾರಗಳ ಕುರಿತು ಮಾತನಾಡಿದರು. ಚಂದಪ್ಪ ಹೊಸಕೇರಿ ರಾಜ್ಯ ಕಾರ್ಯದರ್ಶಿಗಳು. ಮಲ್ಲಮ್ಮ ಕೊಡ್ಲಿ ಮಹಿಳಾ ಸಂಚಾಲಕರು. ಎಂಪಿ ಮುನಿ ವೆಂಕಟಪ್ಪ ರಾಜ ಉಪಾಧ್ಯಕ್ಷರು. ಭೀಮರಾಯ ಪೂಜಾರಿ ತಾಲೂಕ ಅಧ್ಯಕ್ಷರು ಹಾಗೂ ವಿಭಾಗೀಯ ಎಲ್ಲ ಮಹಿಳಾ ಘಟಕ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಬೆನಕನಹಳ್ಳಿ ಗ್ರಾಮಕ್ಕೆ ಬಸ್ ವ್ಯವಸ್ಥೆ ಮಾಡಿಕೊಡಿ ರೇವಣಸಿದ್ದ ಸಿಂಧೆ



ಮಲ್ಲಮ್ಮ ನುಡಿ ವಾರ್ತೆ

ಸೇಡಂ : ಮಾ, 04: ವಿಧಾನಸಬಾ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಚಿಂಚೋಳಿ ತಾಲೂಕಿನ ಬೇನಕನಹಳ್ಳಿ ಗ್ರಾಮಕ್ಕೆ ಬಸ ವ್ಯವಸ್ಥೆ ಮಾಡಿಕೊಡಬೇಕು ಪ್ರಸ್ತುತ ವಾಗಿ ವಿದ್ಯಾರ್ಥಿಗಳಿಗೆ ಪರೀಕ್ಷೆಗಳು ನಡೆದಿದ್ದು ಮತ್ತು ಹಿರಿಯರಿಗೆ ರೈತರಿಗೆ ನಗರಕ್ಕೆ ಬರಲು ಅನುಕೂಲವಾಗುವ ದೃಷ್ಟಿಕೋನದಿಂದ ಗ್ರಾಮಸ್ಥ ಪರವಾಗಿ ಬಹುಜನ ಸಮಾಜ ಪಕ್ಷ ಸೇಡಂ ಘಟಕದ ವತಿಯಿಂದ ಸಾರಿಗೆ ವ್ಯವಸ್ಥಾಪಕರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸೇಡಂ ಬಹುಜನ ಸಮಾಜ ಪಕ್ಷದ ಅಧ್ಯಕ್ಷ ರೇವಣಸಿದ್ದಪ್ಪ. ಎಸ್. ಸಿಂಧೆ. ಸುಲೇಪೆಟ್ ಹೋಬಳಿ ಅಧ್ಯಕ್ಷ ರಾಹುಲ್ ಯಾಕಪುರ. ಲಾಲಪ್ಪಾ ಬೆನಕನಹಳ್ಳಿ ಹಾಜಪ್ಪ ಜಾಬಿನ. ಮಾರುತಿ. ರಮೇಶ ಇನ್ನಿತರರು ಇದ್ದರು.

ಸ್ಥಳೀಯರಿಗೆ ಉದ್ಯೋಗ ನಿಡದ್ದಿದ್ದಲ್ಲಿ ಅನಿರ್ದಿಷ್ಟ ಧರಣಿ

# ಜಯಕರ್ನಾಟಕ ಜನಪರ ವೇದಿಕೆ




ಮಲ್ಲಮ್ಮ ನುಡಿ ವಾರ್ತೆ

ಸೇಡಂ :ಮಾ, 03 ಜಯ ಕರ್ನಾಟಕ ಜನಪರ ವೇದಿಕೆ ಸಂಘಟನೆ ಸೇಡಂ ಘಟಕದ ವತಿಯಿಂದ ಪತ್ರಿಕಾಗೋಷ್ಠಿ ನಡೆಸಲಾಯಿತು.

ಸಂಘಟನೆ ವತಿಯಿಂದ ಸುಮಾರು ವರ್ಷಗಳಿಂದ ಮಾನ್ಯ ಸಹಾಯಕ ಆಯುಕ್ತರು ಸೇಡಂ ರವರಿಗೆ ನಗರದಲ್ಲಿರುವ ವಾಸವದತ್ತಾ ಸಿಮೆಂಟ (ರಾಜಶ್ರೀ ಅಲ್ಟಾಟೆಕ್) ಕಾರ್ಖಾನೆ ಇಂದ ಮಲತಾಯಿ ದೋರಣೆ ಆಗುತ್ತಿದೆ.

ಸ್ಥಳೀಯರಿಗೆ ಉದ್ಯೋಗದಲ್ಲಿ ಅವಕಾಶ ವಿಲ್ಲ, ಅತೀ ಸಿಮೆಂಟ್ ತಯ್ಯಾರಿಕೆ ಇಂದ ಸುಮಾರು 20 ಕಿಲೋಮೀಟರ ವರೆಗೆ ದೂಳು ಆವರಿಸಿದೆ, ಸೇಡಂ ಹೃದಯಬಾಗದ ಮದ್ಯೆ ಇರುವ ರೈಲು ಹಳಿ ತೆಗೆಯಲು ಹಲವಾರು ಬಾರಿ ಮನವಿ ಕೊಟ್ಟರು ಯಾವುದೆ ಬದಲಾವಣೆ ಆಗದಿರುವುದು ಹೀಗೆ ಇನ್ನು ಹತ್ತು ಹಲವಾರು ಸಮಸ್ಸೆಗಳಿಂದ ನಗರವಾಸಿಗಳು ಸಿಮೆಂಟ್ ಕಂಪನಿಯ ಸುತ್ತ ಮುತ್ತಲಿನ ರೈತರು ರೋಸೆಹೋಗಿದ್ದು.

ವಿವಿಧ ಸಮಸ್ಯೆಗಳು ವಿರುದ್ಧ ಸುಮಾರು ಬಾರಿ ಮನವಿ ಪತ್ರ ನೀಡಿದರು ಯಾವುದೇ ಕಾರ್ಯಗಳು ಆಗಿರುವುದಿಲ್ಲ ಇದರ ನಿಮಿತ್ಯವಾಗಿ 10.03.2025 ರಂದು ಸಹಾಯಕ ಆಯುಕ್ತರ ಕಾರ್ಯಾಲಯದ ಮುಂದೆ ಅನಿರ್ದಿಷ್ಟ ಧರಣಿ ಹಮ್ಮಿಕೊಳ್ಳುವುದ್ದಾಗಿ ಪತ್ರಿಕಾಗೋಷ್ಠಿ ನಡೆಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಬಸವರಾಜ ಕೊರಳ್ಳಿ ಜಿಲ್ಲಾಧ್ಯಕ್ಷರು ಶ್ರೀ ವರದಾ ಸ್ವಾಮೀ ಬಿ ಹಿರೇಮಠ ಬಟಗೇರಾ ಜಿಲ್ಲಾ ಉಪಾಧ್ಯಕ್ಷರು ದಯಾನಂದ ಪಾಟೀಲ. ಅಶೋಕ ಮಡಿವಾಳ ಕೋತ್ತಾಪಲ್ಲಿ. ತಾಲೂಕು ಅಧ್ಯಕ್ಷರು ಮರೇಪ್ಪ ದೊರೆ ಸಂಘಟನೆ ಮುಖಂಡರು ಶೆಟ್ಟಿಹೂಡ ರಾಜು ಯಾದವ ಕದ್ಲಾಪುರ. ನಾಗೇಂದ್ರ ಬೋವಿ ಮಳಖೇಡ. ವೆಂಕಟ ರೆಡ್ಡಿ ಸಂತೋಷ ಬೂತಪೂರ ರವಿಕುಮಾರ್ ದ್ಯಾವನೂರ್ ಇನ್ನಿತರರು ಇದ್ದರು.

# ಬಾಗೇಪಲ್ಲಿ ತಾಲ್ಲೂಕು ಕ್ರೀಡಾಂಗಣದ ಸೌಲಭ್ಯಗಳ ಉನ್ನತೀಕರಣ- ಸಚಿವ ಬೈರೇಗೌಡ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಮಾರ್ಚ್ 04– ಬಾಗೇಪಲ್ಲಿ ತಾಲ್ಲೂಕಿನ ಕ್ರೀಡಾಂಗಣದ ಸೌಲಭ್ಯಗಳ ಉನ್ನತೀಕರಣಕ್ಕಾಗಿ 2024–25ನೇ ಸಾಲಿಲ್ಲಿ ರೂ. 300.00ಲಕ್ಷ ವೆಚ್ಚದಲಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ ಎಂದು ತಿಳಿಸಿದರು.

ಇಂದು ವಿಧಾನಸಭೆಯಲ್ಲಿ ಬಾಗೇಪಲ್ಲಿ ಶಾಸಕರಾದ ಸುಬ್ಬಾರೆಡಡಿ ಎಸ್. ಎನ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬಾಗೇಪಲ್ಲಿ ತಾಲ್ಲೂಕು ಕ್ರೀಡಾಂಗಣದ ಸೌಲಭ್ಯಗಳ ಉನ್ನತೀಕರಣಕ್ಕಾಗಿ ಈಗಾಗಲೇ ಇರುವ ಸೌಲಭ್ಯಗಳ ಜೊತೆಗೆ ಬೋರ್ ವೆಲ್ ಕೊರೆದು, ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವುದು, ಕಾಂಪೌಂಡ್ ಗೋಡೆ ನಿರ್ಮಾಣ, ಮಳೆನೀರು ಚರಂಡಿ ನಿರ್ಮಿಸುವುದರ ಜೊತೆಗೆ ಗುಡಿಬಂಡೆ ತಾಲ್ಲೂಕಿನ ಅಮಾನಿಬೈರ ಸಾಗರ ಗ್ರಾಮದಲ್ಲಿ 6.00 ಎಕರೆ ನಿವೇಶವನ್ನು ಗುರುತಿಸಿದ್ದು, ತಾಲ್ಲೂಕು ಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರ ಮಾಡಾಗಿದ್ದು ಇದನ್ನು ಇಲಾಖೆಯ ವಶಕ್ಕೆ ಪಡೆಯಲಾಗಿದೆ ಎಂದು ಮುಖ್ಯಮಂತ್ರಿಗಳ ಪರವಾಗಿ ಕಂದಾಯ ಸಚಿವರು ವಿಧಾನಸಭೆಯಲ್ಲಿ ಉತ್ತರಿಸಿದರು.

# ಅಕ್ರಮ ಮರಳು ಮಾರಾಟ ಕಡಿವಾಣ ಯಾವಾಗ ? ಶ್ರೀಮಂತ ಅವಂಟಿ ಆಕ್ರೋಶ



ಮಲ್ಲಮ್ಮ ನುಡಿ ವಾರ್ತೆ

ಸೇಡಂ, ಮಾ, 04. ತಾಲೂಕಿನ ಜೀವನದಿಯಾಗಿರುವ ಕಮಲಾವತಿ ನದಿಯಿಂದ ಬಟಗೇರಾ, ಮಾದ್ವಾರ್, ರಂಜೋಳ್, ಸಿಂಧನಮಡು. ಮದರಿ, ಗುಂಡಳ್ಳಿ, ತುರನೂರ್, ವಿವಿಧ ಕಡೆಗಳಲ್ಲಿ ಸೇರಿದ್ದಂತೆ ಅಕ್ರಮ ವಾಗಿ ಹಾಡು ಹಗಲೇ ಮರಳು ದಂದೆ ಬಿರುಸಾಗಿ ನಡೆಯುತ್ತಿದೆ.

ಟ್ರ್ಯಾಕ್ಟರ್, ಎತ್ತಿನ ಬಂಡಿ, ವಿವಿಧ ವಾಹನಗಳ ಮುಖಾಂತರ ಮರಳನ್ನು ರಾಜಾರೋಷವಾಗಿ ಸಾಗಿಸುತ್ತಿದ್ದಾರೆ.

ಇದರಿಂದಾಗಿ ನದಿಯಲ್ಲಿ ಹೋಂಡಗಳು ಬಿದ್ದು. ಜೆಕು ಜಾಲಿಗಿಡಗಳು ಬೆಳೆಯುತ್ತಿವೆ. ಇದರಿಂದಾಗಿ ನದಿ ಕಲುಷಿತವಾಗಲೂ ಪ್ರಮುಖ ಕಾರಣವೆಂದು ಶ್ರೀಮಂತ ಅವಂಟಿ ಬಿಜೆಪಿ ಮುಖಂಡರು ಆಕ್ರೋಶ ವ್ಯಕ್ತವಡಿಸಿದ್ದಾರೆ.

# ರೈತರು ಮತ್ತು ಅಮಾಲದಾರರ ಸಂಧಾನ ವಿಫಲ



ಮಲ್ಲಮ್ಮ ನುಡಿ ವಾರ್ತೆ

ಸೇಡಂ:ಮಾ. 04. ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ವರ್ಷಗಳಿಂದ ರೈತರು ಮತ್ತು ಅಮಲದಾರರ ನಡುವೆ ಇರುವ ಸಮಸ್ಸೆಯನ್ನು ಬಗೆಹರಿಸುವ ಸಲುವಾಗಿ

ರೈತರು ಬೆಳೆದ ಫಸಲಿನಲ್ಲಿ ಮಾರುಕಟ್ಟೆಗೆ ತಂದಾಗ ರೈತರ ಎದುರೆ ತೊಗರಿ ಬಾದ ತೆಗೆಯುವ ರೂಢಿ ಮುಂದುವರಿದಿದೆ.

ಇದನ್ನು ಖಂಡಿಸಿ ಭಾರತೀಯ ಕಿಸಾನ್ ಸಂಘ ಎ.ಪಿ.ಎಂ.ಸಿ ಕಾರ್ಯದರ್ಶಿಯವರಿಗೆ ಮನವಿ ಪತ್ರ ನೀಡಿದಾಗ ಸಭೆ ಕರೆದು ಆಗುವ ಅನ್ಯಾಯವನ್ನು ಸರಿಪಡಿಸುವುದಾಗಿ ಹೇಳಿದರು ಇದರ ಪ್ರಕಾರ ಸೋಮವಾರ ಮಧ್ಯಾಹ್ನ 3 ಗಂಟೆಗೆ ರೈತರು ಮತ್ತು ಅಮಲದಾರರಿಗೆ ಕಿಸಾನ್ ಸಂಘದ ಮನವಿಯನ್ನು ಪರಿಗಣಿಸಿ ರಾಜಕುಮಾರ ಎ. ಪಿ. ಎಮ್. ಸಿ. ಕಾರ್ಯದರ್ಶಿಗಳು ಸಭೆಯನ್ನು ಆಯೋಜನೆ ಮಾಡಿದರು ರೈತರು ತಂದ ತೊಗರಿ ದಾನ್ಯದ ಬಾದ

ತೆಗೆಯುವ ವಿಷಯದಲ್ಲಿ ರೈತರ ಮತ್ತು ಅಮಾಲದಾರರ ಮಧ್ಯೆ ತಕರಾರು ಇರುವುದರಿಂದ ಸಭೆ ಕರೆಯಲಾಗಿತ್ತು. ಈ ಸಭೆಯಲ್ಲಿ ರೈತರು ಪ್ರತಿ ಕುಂಟಲಿಗೆ 8 ರೂ. ಹೇಳಿದರೆ ಅಮಲ್ದಾರರು ಪ್ರತಿ ಕುಂಟೆಲಿಗೆ 20 ರೂಪಾಯಿ ನೀಡುವಂತೆ ಒತ್ತಾಯ ಮಾಡಿದರು ಸುಮಾರು ಮೂರುವರೆ ತಾಸು ನಡೆದ ಮಾತುಕತೆ ಸಭೆ ವಿಫಲವಾಗಿದೆ ಸೇಡಂ ಭಾರತೀಯ ಕಿಸಾನ್ ಸಂಘ ಮತ್ತು ಅನೇಕ ರೈತರು ಗಂಜಿನ ಅಂಗಡಿಯ ಮಾಲೀಕರು ಸಭೆಯಲ್ಲಿ ತಮ್ಮೆಲ್ಲಾ ಅಭಿಪ್ರಾಯಗಳು ರೈತರಿಗೆ ಆಗುವ ತೊಂದರೆಗಳನ್ನು ಹೇಳಿದರು ಅಮಾಲುದಾರರು ತಮ್ಮ ಪಟ್ಟನ್ನು ಬಿಡದ ಕಾರಣ ರೈತರು ಸಭೆಯಿಂದ ಹೊರ ನಡೆದರು ಎಂಪಿಎಂಸಿ ಕಾರ್ಯದರ್ಶಿಗಳು ಮತ್ತೆ ಎರಡು ದಿನಗಳ ನಂತರ ಸಭೆ ಕರೆಯದಾಗಿ ತಿಳಿಸಿದರು.

ಎಪಿಎಂಸಿ ಕಚೇರಿಯಲ್ಲಿ ನಡೆದ ಸಂಧಾನ ಸಭೆ ವಿಫಲವಾಗಿದೆ. ಈ ಸಭೆಯಲ್ಲಿ. ಶಿವಪುತ್ರಪ್ಪ ಊಡಿಗಿ. ಅನಂತರೆಡ್ಡಿ ಬಟಗೇರ ಭಾರತೀಯ ಕಿಸಾನ್ ಸಂಘ ಅಧ್ಯಕ್ಷ ಮೋಹನಕಟ್ಟಿಮನಿ. ಮಲ್ಲಿಕಾರ್ಜುನಬಿ. ಭೀಮನಳ್ಳಿ. ಶರಣಬಸಪ್ಪ ಕಿರಣಗಿ. ಮಹೇಶ ಎನ್. ಪೂಜಾರಿಹಾಬಳ.

(ಟಿ) ಬಸವರಾಜ ಬಡಿಗೇರ. ಭಗವಂತ ಕಟ್ಟಿಮನಿ. ಶರಣಪ್ಪ ಬಾಲನೂರ. ಅಶೋಕ ಊಡಿಗಿ. ಶಿವಕುಮಾರ ಬೋಳಶೆಟ್ಟಿ. ನಾಗರಾಜ ಪಾಟೀಲ್ ತೊಟ್ನಳ್ಳಿ. ಜಗದೇವಪ್ಪ ಹಾಗೂ ಹಿರಿಯ ರೈತ ಮುಖಂಡರು ಇನ್ನಿತರರು ಇದ್ದರು.

# ಮೋತಕಪಲ್ಲಿ ಗ್ರಾಮದಲ್ಲಿ ಉಚಿತ ವೈದ್ಯಕೀಯ ತಪಾಸಣೆ ಶಿಬಿರ.



ಮಲ್ಲಮ್ಮ ನುಡಿ ವಾರ್ತೆ

ಸೇಡಂ:ಮಾ,03. ತಾಲೂಕಿನ ಮೋತಕಪಲ್ಲಿ ಗ್ರಾಮದಲ್ಲಿ ಪೂಜಾರ ಫ್ಯಾಮಿಲಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಉಚಿತ ವೈದ್ಯಕೀಯ ತಪಾಸಣೆ ಶಿಬಿರವನ್ನು

ಡಾ.ಶರಣಪ್ರಕಾಶ ಪಾಟೀಲ ಊಡಗಿ, ವೈದ್ಯಕೀಯ ಶಿಕ್ಷಣ ಹಾಗೂ ಜೀವನೋಪಾಯ, ಕೌಶಲ್ಯಾಭಿವೃದ್ಧಿ ಸಚಿವರು ಉದ್ಘಾಟನೆ ಮಾಡಿದರು

ಈ ಸಂದರ್ಭದಲ್ಲಿ

ಶ್ರೀಸಂಜೀವ ಆಚಾರ್ಯ ಪೂಜಾರಿ ದಿವ್ಯ ಸಾನಿಧ್ಯ ವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೋವಿಂದಾಚಾರ್ಯ ಪೂಜಾರ ವಹಿಸಿದ್ದು ಹಾಗೂ ಡಾ, ಭಾಗ್ಯಶ್ರೀ ಡಾ, ಶರಣಪ್ರಕಾಶ ಪಾಟೀಲ – ಸ್ತ್ರೀ ರೋಗ ತಜ್ಞರು. ಡಾ, ಸುರೇಶ ಪಿ.ವಿ. – ಹೃದಯ ರೋಗ ತಜ್ಞರು. ಡಾ, ಸಾಗರ ಸೌರಭ – ಮಧುಮೇಹ ತಜ್ಞರು. ಡಾ, ಪ್ರಮೋಮ ಬಿಚ್ಚಾಲ ಕಣ್ಣಿನ ತಜ್ಞರು. ಡಾ, ವೆಂಕಟರಾಮ ರೆಡ್ಡಿ– ಮಕ್ಕಳ ತಜ್ಞರು. ಡಾ, ವೆಂಕಟೇಶ – ಮೆಡಿಸಿನ್ ಹಾಗೂ ಗ್ರಾಮದ ಹಿರಿಯ ಮುಖಂಡರಾದ ಮಹಿಪಾಲ ರೆಡ್ಡಿ. ಜೈಪಾಲ ರೆಡ್ಡಿ. ಮೋತಕಪಲ್ಲಿ ಫ್ಯಾಮಿಲಿ ಟ್ರಸ್ಟ್ ಸರ್ವ ಸದಸ್ಯರು ಉಪಸ್ಥಿತರಿದ್ದರು.

# ಸ್ವಾಭಿಮಾನಿ ಸರ್ವ ಧರ್ಮ ಸಮನ್ವಯ ಸಮೀತಿ ವತಿಯಿಂದ ಸಭೆ




ಮಲ್ಲಮ್ಮ ನುಡಿ ವಾರ್ತೆ

ಸೇಡಂ: ಮಾ, 03. ತಾಲೂಕಿನ ಸರಕ್ಯೂಟ ಹೌಸನಲ್ಲಿ ಸ್ವಾಭಿಮಾನ ಸರ್ವ ಧರ್ಮ ಸಮನ್ವಯ ಸಮಿತಿ ಸೇಡಂ ವತಿಯಿಂದ ವಿಶ್ವ ಜ್ಞಾನಿ ಬಾಬಾ ಸಾಹೇಬ್ ಅಂಬೇಡ್ಕರ್ ರವರ 133ನೆಯ ಜಯಂತಿಯ ಹಿಂದಿನ ಜಯಂತಿಯ ಖರ್ಚು ವೆಚ್ಚದ ವಿವರಣೇ ಬಗ್ಗೆ ಸಮಿತಿಯ ಸಧಸ್ಯರ್ ನೇತೃತ್ವದಲ್ಲಿ ಸಭೆ ಸೇರಿ ಮಾಹಿತಿ ನೀಡಲಾಯಿತು. ಕಾರ್ಯಕ್ರಮಕ್ಕೆ ಖರ್ಚು ಮಾಡಿದ ನಂತರ ಉಳಿದ ಹಣವನ್ನು ಸಂಘದ ಅಧ್ಯಕ್ಷ ಹತ್ತಿರ ಇರುತ್ತವೆ.

ಇಂದು ಮತ್ತೊಮ್ಮೆ ಹಿಂದಿನ ಜಯಂತಿಯ ಖರ್ಚು ವೆಚ್ಚದ ಬಗ್ಗೆ ಸಭೆಯನ್ನು ಕರೆದು ಎಲ್ಲರ ಸಮ್ಮುಖದಲ್ಲಿ ಪತ್ರಿಕೆ ಪ್ರಕಟಣೆ ಮಾಡಲಾಗಿದೆ ಅದೆ ಮುಂದಿನ 134ನೆಯ ಜಯಂತಿಯ ಪೂರ್ವ ಬಾವಿ ಸಭೆಯನ್ನು ದಿ. ಮಾ. 09 ರಂದು ರವಿವಾರ ಎಲ್ಲಾ ಸಮುದಾಯದ ಹಿರಿಯರು ಕಿರಿಯರು ಹಾಗೂ ಎಲ್ಲಾ ಸಂಘಟನೆಯ ಅಧ್ಯಕ್ಷ ಸಭೆ ಕರೆದು ಅಧ್ಯಕ್ಷರನ್ನು ನೆಮಕ ಮಾಡಲಾಗುವುದು. ಎಂದು ರೇವಣಸಿದ್ದಪ್ಪ. ಎಸ್. ಸಿಂಧೆ 133 ನೆಯ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಜಯಂತಿಯ ಅಧ್ಯಕ್ಷರು ಸೇಡಂ ರವರು ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಜಯಂತೋತ್ಸವ ಸಮಿತಿಯ ಉಸ್ತುವಾರಿ ಸುನೀಲ ಹಳ್ಳಿ. ಉಪಾಧ್ಯಕ್ಷರಾದ ವಿಶ್ವಾರಾಧ್ಯ. ಖಜಾಂಜಿ ಅಶೋಕ ರಂಜೋಳ. ರಾಮು ಇಂಜೆಳ್ಳಿ. ಗೌತಮ್ ಹಳ್ಳಿ. ರವಿ ನಾಯಕ. ಜೈಭಿಮ್ ಚಿಂತಪಳ್ಳಿ ಇನ್ನಿತರರು ಇದ್ದರು.

# ಪ್ರಿಯದರ್ಶಿನಿ ಮಹಿಳಾ ಸಬಲೀಕರಣ ಕಾರ್ಯಕ್ಕೆ 'ವೀರವನಿತೆ' ಪ್ರಶಸ್ತಿಯ ಗರಿ



ಮಲ್ಲಮ ನುಡಿ ವಾರ್ತೆ


ಕೊಪ್ಪಳ: ಬೆಂಗಳೂರಿನ ಪ್ರತಿಷ್ಠಿತ ಹೊಟೆಲ್ ನಲ್ಲಿ ನಡೆದ ಚಿತ್ರಸಂತೆಯ ಕಾರ್ಯಕ್ರಮದಲ್ಲಿ ಕೊಪ್ಪಳದ ಮಹಿಳಾಧ್ವನಿ ಸಂಸ್ಥೆಯ ಸಂಸ್ಥಾಪಕಿ ಪ್ರಿಯದರ್ಶಿನಿ ಮುಂಡರಗಿಮಠ ಅವರಿಗೆ 2025 ನೇ ಸಾಲಿನ ವೀರವನಿತೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಕಾರ್ಯಕ್ರಮದಲ್ಲಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಮಹಿಳಾ ಸಾಧಕಿಯರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಿಯದರ್ಶಿನಿಯವರು ಕೊಪ್ಪಳ ಜಿಲ್ಲೆಯಾದ್ಯಂತ ಮಹಿಳೆ ಮತ್ತು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಗ್ರಾಮೀಣ ಭಾಗದ ಮಹಿಳೆಯ ಸ್ವಾವಲಂಬಿ ಬದುಕಿಗೆ ಉತ್ತೇಜಿಸುತ್ತಾ ಶಿಕ್ಷಣ, ಆರೋಗ್ಯ, ಜಾಗೃತಿ ಮತ್ತು ಸ್ತ್ರೀ ನ್ಯಾಯ ಪರ ಅನೇಕ ಕಾರ್ಯಕ್ರಮಗಳ ಮೂಲಕ ಜಿಲ್ಲೆಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರಿಗೆ ಬೆಂಗಳೂರಿನ ಪ್ರತಿಷ್ಠಿತ ಚಿತ್ರಸಂತೆಯ 50 ನೇ ಸಂಭ್ರಮದಲ್ಲಿ ಮಹಿಳಾ ಸಬಲಿಕರಣದ ವಿಭಾಗದಲ್ಲಿ ವೀರ ವನಿತೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕಾರ್ಯಕ್ರಮದಲ್ಲಿ ಅಶ್ವಿನಿ ಪುನೀತ್ ರಾಜಕುಮಾರ, ಸತೀಶ್ ಗೌಡ, ಅರ್ಚನಾ ಹಾಗೂ ಚಲನಚಿತ್ರ ನಟಿಯರು ಗಣ್ಯರು ಉಪಸ್ಥಿತರಿದ್ದರು.

# ಪುಟ್ಟರಾಜ ಗವಾಯಿಗಳು ಅಂಧರ ಬಾಳಿನ ಬೆಳಕು




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.4–ಅಂಧತ್ವವನ್ನು ಮೆಟ್ಟಿನಿಂತು ಅಸಾಧ್ಯವಾದುದನ್ನು ಸಾಧ್ಯವಾಗಿಸಿದ ಪುಟ್ಟರಾಜ ಕವಿ ಗವಾಯಿಗಳು ಅಂಧರು, ಅನಾಥರು, ದೀನ ದಲಿತರಿಗೆ ಸಂಗೀತ ವಿದ್ಯೆ ಕಲಿಸಿ ಅವರಿಗೆ ಸ್ವತಂತ್ರವಾಗಿ ಬದುಕಲು ಕಲಿಸಿಕೊಟ್ಟ ಮಹಾಪುರುಷರು ಎಂದು ಬಸವೇಶ್ವರ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಆರ್.ಮೂಗನೂರಮಠ ಹೇಳಿದರು.

ನಗರದ ಬಿ.ವಿ.ವಿ. ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಪುಟ್ಟರಾಜ್ ಗವಾಯಿಗಳವರ 111 ನೇ ಜಯಂತಿಯ ಆಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸಿ ಮಾತನಾಡಿದ ಅವರು, ಗವಾಯಿಗಳ ವ್ಯಕಿತ್ವ ಅಸಾಧಾರಣವಾದದ್ದು, ಅವರು ಹಿಂದಿ ಭಾಷೆಯಲ್ಲಿ ರಚಿಸಿದ ಬಸವ ಪುರಾಣಕ್ಕೆ ಮಾಜಿ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಪ್ರಭಾವಿತರಾಗಿ ಗವಾಯಿಗಳನ್ನು ನವದೆಹಲಿಗೆ ಕರೆಸಿ ಸನ್ಮಾನಿಸಿದ್ದರು ಎಂದು ನೆನೆಪಿಸಿದರು.

ಸಂಗೀತ ವಿಭಾಗದ ಮುಖ್ಯಸ್ಥ ಡಾ.ಕೆ.ವಿ.ಮಠ ಮಾತನಾಡಿ, ಮಹಾನ್ ಸಂಗೀತ ಕಲಾವಿದರಾಗಿ ಹೊರಹೊಮ್ಮಿರುವ ಅನೇಕ ಸಂಗೀತಗಾರರು ಗದಗ ಆಶ್ರಮದಲ್ಲಿ ಕಲಿತಿದ್ದಾರೆ. ನಮ್ಮ ಕಣ್ಣೆದುರಿಗೆ ಕಾಣುವ ಪವಾಡ ಪುರುಷರೆಂದರೆ ಪುಟ್ಟರಾಜ ಗವಾಯಿಗಳು ಎಂದು ಹೇಳಿದರು.

ಪ್ರಾಧ್ಯಾಪಕರಾದ ಡಾ. ಆರ್. ಎಂ.ಬೆಣ್ಣೂರ, ಶ್ರೇಯಾ ಜೋರಾಪುರ, ಡಾ. ಅಪ್ಪು ರಾಠೋಡ, ಐಕ್ಯೂಎಸಿ ಸಂಯೋಜಕ ಡಾ.ಎ.ಯು.ರಾಠೋಡ, ಮಹಾವಿದ್ಯಾಲಯ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದೇ ಸಂಧರ್ಭದಲ್ಲಿ ಪುಟ್ಟರಾಜ ಕವಿಗವಾಯಿಗಳು ವಿರಚಿತ ಗೀತೆಗಳನ್ನು ಹಾಡುವ ಮೂಲಕ ಸಂಗೀತ ವಿಭಾಗದಿಂದ ಪೂಜ್ಯರಿಗೆ ಶೃತಿ ನಮನ ಸಲ್ಲಿಸಲಾಯಿತು.

# ಮಹಿಳೆಯರಿಗೆ ಆದ್ಯತೆ ನೀಡಿದ 'ಟಗರು ಸರ್ಕಾರ'

## 21 ತಿಂಗಳಲ್ಲಿ 400 ಕೋಟಿ ಮಹಿಳಾ ಪ್ರಯಾಣಿಕರ ಸಂಚಾರ..!

ಎಂ.ವಿ.ಜೋಷಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ: ರಾಜ್ಯದಲ್ಲಿ ಬಿಜೆಪಿಯ ಹವಾ ಕಡಿಮೆ ಮಾಡಲೆಂದೇ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ವಿಪಕ್ಷ ನಾಯಕರನ್ನು ಹಲ್ಲು ಕಿತ್ತ ಹಾವಿನಂತೆ ಮಾಡಿದ ಟಗರು ಸರ್ಕಾರ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡಿ, ಯಾವುದೇ ಅಡ್ಡಿ ಆತಂಕಗಳಿಲ್ಲದೇ 21 ತಿಂಗಳು ಪೂರೈಸಿದೆ.

ಆರಂಭದಲ್ಲಿ ವಿಪಕ್ಷ ನಾಯಕರು ಅದೆಷ್ಟೇ ಬೊಬ್ಬೆ ಹೊಡೆದು ಈಗ ಬೀಳುತ್ತೆ ಸರ್ಕಾರ, ಆಗ ಬೀಳುತ್ತೆ ಸರ್ಕಾರ, ಸಿಎಂ ರಾಜೀನಾಮೆ ಕೊಟ್ಟೇ ಬಿಟ್ರು. ಡಿಕೆಶಿ ಬಿಜೆಪಿಗೆ ಸೇರ್ಪಡೆಯಾಗೇ ಬಿಟ್ರು. ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ಬಿಜೆಪಿ ನಾಯಕರು ಜನರ ಮುಂದೆ ಪೇಚು ಮುಖ ಇಟ್ಟುಕೊಂಡು ಓಡಾಡುತ್ತಿರುವುದನ್ನು ನೋಡಿದರೆ ಸಿದ್ದು ಸರ್ಕಾರ ಪಕ್ಕಾ ಪ್ಲಾನ್ ಮಾಡಿಕೊಂಡೇ ಸುಸೂತ್ರವಾದ ಆಡಳಿತ ನಡೆಸುತ್ತಿದೆ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ದಕ್ಷ ಆಡಳಿತದ ರೂವಾರಿ 'ಸಿದ್ದು' ಸಲಹೆಗಳಂತೆ 21 ತಿಂಗಳ ಅವಧಿಯಲ್ಲಿ ನಾಡಿನ ಎಲ್ಲ ವರ್ಗದ ಮಹಿಳೆಯರಿಗೆ ಉಚಿತವಾಗಿ ಸಂಚರಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. 'ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ದೇವತಾಃ' ಎನ್ನುಂತೆ ಟಗರು ಸರ್ಕಾರ ಎಲ್ಲ ಯೋಜನೆಗಳನ್ನು ಬಹುತೇಕ ಮಹಿಳೆಯರನ್ನೇ ಗುರಿಯಾಗಿಸಿಕೊಂಡಿದ್ದಾರೆ. ಆ ಮೂಲಕ 'ಟಗರು ಸರ್ಕಾರ' ಎದುರಾಳಿಗಳಿಗೆ ಗುಟುರು ಹಾಕುತ್ತಾ ಮುನ್ನಡೆದಿದೆ.




ವಿಪಕ್ಷಗಳ ಏನೇ ಆರೋಪಗಳಿರಲಿ ರಾಜ್ಯದಲ್ಲಿ 'ಶಕ್ತಿ ಗ್ಯಾರಂಟಿ' ಸಫಲತೆ ಕಂಡಿದೆ. ಮಹಿಳಾ ಸಬಲೀಕರಣದ ಪಯಣದಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿರುವ 'ಟಗರು ಸರ್ಕಾರ' ಬರೋಬ್ಬರಿ 400 ಕೋಟಿ ಮಹಿಳಾ ಪ್ರಯಾಣಿಕರನ್ನು ನಾಡಿನಾದ್ಯಂತ ಸುತ್ತಾಡಿಸಿದೆ. ರೂ.9803 ಕೋಟಿ ಉಚಿತ ಟಿಕೆಟ್ ಮೌಲ್ಯದೊಂದಿಗೆ ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಕಳೆದ 21 ತಿಂಗಳುಗಳೊಳಗೆ ನಿರೀಕ್ಷೆಗೂ ಮೀರಿ ಸಾಧನೆ ಮಾಡಿದೆ.




### ಎಲ್ಲಿಗೆ ಪಯಣ? ಯಾವುದು ದಾರಿ..?

2023ರ ಜೂನ್ 11ರಿಂದ 2025ರ ಫೆ.24ರ ಅಂಕಿ ಅಂಶಗಳ ಪ್ರಕಾರ ಶಕ್ತಿ ಗ್ಯಾರಂಟಿ ಯೋಜನೆಯಡಿ ನಾಲ್ಕೂ ವಿಭಾಗಗಳಲ್ಲಿ ಒಟ್ಟು 681.66 ಪ್ರಯಾಣಿಕರು ಪ್ರಯಾಣಿಸಿದ್ದು 400 ಕೋಟಿ ಮಹಿಳಾ ಪ್ರಯಾಣಿಕರು ರಾಜ್ಯದಾದ್ಯಂತ ಸಂಚರಿಸಿದ್ದಾರೆ. ಇದಕ್ಕಾಗಿ 9803 ಕೋಟಿ ಮಹಿಳಾ ಪ್ರಯಾಣಿಕರ ಟಿಕೆಟ್ ಮೌಲ್ಯ ಭರಿಸಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿಗಮದಲ್ಲಿ ಒಟ್ಟು 207.86 ಪ್ರಯಾಣಿಕರು ಸಂಚರಿಸಿದ್ದು, ಈ ಪೈಕಿ 121.17 ಮಹಿಳಾ ಪ್ರಯಾಣಿಕರಿದ್ದಾರೆ. 3708.51 ಕೋಟಿ ರೂ.ಮಹಿಳಾ ಟಿಕೆಟ್ ಮೌಲ್ಯವಾಗಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವ್ಯಾಪ್ತಿಯಲ್ಲಿ ಒಟ್ಟು 216.58 ಪ್ರಯಾಣಿಕರ ಪೈಕಿ 127.42 ಪ್ರಯಾಣಿಕರು ಸಂಚರಿಸಿದ್ದು, 1695.84 ಮಹಿಳೆಯರು ಪಯಣಿಸಿದ್ದಾರೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯಲ್ಲಿ ಒಟ್ಟು 151.25 ಪ್ರಯಾಣಿಕರಲ್ಲಿ ಒಟ್ಟು 93.06 ಮಹಿಳಾ ಪ್ರಯಾಣಿಕರಿಗೆ ರೂ.2419.99 ಕೋಟಿ ಮೌಲ್ಯವಾಗಿದೆ. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ವ್ಯಾಪ್ತಿಯಲ್ಲಿ ಒಟ್ಟು 681.66 ಪ್ರಯಾಣಿಕರ ಪೈಕಿ ಒಟ್ಟು 400 ಕೋಟಿ ಮಹಿಳಾ ಪ್ರಯಾಣಿಕರು ಸಂಚರಿಸಿದ್ದಾರೆ. ಒಟ್ಟಿನಲ್ಲಿ ನಾಲ್ಕೂ ನಿಗಮ ವ್ಯಾಪ್ತಿಯಲ್ಲಿ 9803.87 ಕೋಟಿ ಮೌಲ್ಯದ ಟಿಕೆಟ್‌ಗಳನ್ನು ನೀಡಲಾಗಿದೆ.


### ಮೌಲ್ಯವರ್ಧಿತ ಸೇವೆಗಳ ಅನುಷ್ಠಾನ:

ಶಕ್ತಿ ಯೋಜನೆ ಜಾರಿಗೆ ಮುನ್ನ ದಿನಂಪ್ರತಿ ಚಲಿಸುತ್ತಿದ್ದ 154955 ಟ್ರಿಪ್ ಗಳ ಪ್ರಯಾಣವು 178787ಗೆ ಹೆಚ್ಚಳವಾಗಿದ್ದು, ದಿನಂಪ್ರತಿ 21832 ಹೆಚ್ಚುವರಿ ಟ್ರಿಪ್ ಗಳು ಕಾರ್ಯಾಚರಿಸುತ್ತಿವೆ. ಬಸ್ಸುಗಳಲ್ಲಿ ಯುಪಿಐ ಡಿಜಿಟಲ್ ಪಾವತಿ ಜಾರಿ ಹಾಗೂ ಅವತಾರ್ 4.0 ಮತ್ತು ಇತರೆ ಮೌಲ್ಯವರ್ಧಿತ ಸೇವೆಗಳನ್ನು ಅನುಷ್ಠಾನಗೊಳಿಸಿದೆ. ಮೃತ 1 ಸಾವಿರ ಸಿಬ್ಬಂದಿಗಳ ಅವಲಂಬಿತರಿಗೆ ಅನುಕಂಪ ಆಧಾರದ ಮೇರೆಗೆ ನೌಕರಿ ನೀಡಲಾಗಿದೆ. ಅಪಘಾತದಲ್ಲಿ (ಆನ್ ಡ್ಯೂಟಿ, ಆಫ್ ಡ್ಯೂಟಿ) ಮೃತಪಟ್ಟ ಸಾರಿಗೆ ನಿಗಮದ ಸಿಬ್ಬಂದಿಗಳ ಅವಲಂಬಿತರಿಗೆ ರೂ.1 ಕೋಟಿ ಚೆಕ್ ವಿತರಿಸಲಾಗಿದೆ. ಬಸ್ಸಿನಲ್ಲಿ ಪಯಣಿಸುವ ಪ್ರಯಾಣಿಕರು ಬಸ್ ಅಪಘಾತಕ್ಕೆ ಬಲಿಯಾಗಿ ಮೃತರಾದಲ್ಲಿ ಈ ಹಿಂದೆ ನೀಡುತ್ತಿದ್ದ ರೂ.3 ಲಕ್ಷ ಪರಿಹಾರ ಹಣವನ್ನು ರೂ.10 ಲಕ್ಷಕ್ಕೆ ಏರಿಸಿದೆ. ನಮ್ಮ ಕಾರ್ಗೋ –20 ಸರಕು ಸಾಗಣೆ ವಾಹನಗಳ ಮೂಲಕ ಲಾಜಿಸ್ಟಿಕ್ ಸೇವೆ ಆರಂಭಿಸಲಾಗಿದೆ.

### ಆಸ್ಪತ್ರೆಗಳೊಂದಿಗೆ ಒಡಂಬಡಿಕೆ:

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯೊಂದಿಗೆ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಮತ್ತು ಈಕರಸಾ ನಿಗಮದ ಸಿಬ್ಬಂದಿಗಳಿಗಾಗಿ ಹೃದ್ರೋಗ ತಪಾಸಣೆ ಒಡಂಬಡಿಕೆ ಮಾಡಿಕೊಳ್ಳಾಗಿದೆ. ಕೆಎಸ್‌ಆರ್‌ಟಿಸಿ ಆರೋಗ್ಯ ಯೋಜನೆಯು 2025ರ ಜನವರಿ 6 ರಿಂದ ಜಾರಿಯಾಗಿದ್ದು, ರಾಜ್ಯದಾದ್ಯಂತ 340 ಆಸ್ಪತ್ರೆಗಳೊಂದಿಗೆ ಒಡಂಬಡಿಕೆ, 34000 ನೌಕರರು ಹಾಗೂ ಅವರ ಅವಲಂಬಿತರು ಸೇರಿ 1.17 ಲಕ್ಷ ಫಲಾನುಭವಿಗಳಿಗೆ ನಗದು ರಹಿತ ಮಿತಿ ಇಲ್ಲದ ವೈದ್ಯಕೀಯ ಸೌಲಭ್ಯ ಒದಗಿಸಲು ಅನುಕೂಲ ಕಲ್ಪಿಸಲಾಗಿದೆ. ಅಪಘಾತ ಹೊರತುಪಡಿಸಿ, ಇತರೆ ಕಾರಣಗಳಿಂದ ಮೃತರಾದ ಸಿಬ್ಬಂದಿಗಳ ಕುಟುಂಬಕ್ಕೆ ನೀಡಲಾಗುತ್ತಿದ್ದ ಕುಟುಂಬ ಕಲ್ಯಾಣ ವಿಮಾ ಯೋಜನೆ ಮೊತ್ತ ರೂ.3 ಲಕ್ಷದಿಂದ ರೂ.10 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿಗಳಿಗೆ ಕಿಮ್ಸ್ ಮತ್ತು ಇತರೆ ಆಸ್ಪತ್ರೆಗಳಲ್ಲಿ ನಗದು ರಹಿತ ವೈದ್ಯಕೀಯ ಸೌಲಭ್ಯ ಒದಗಿಸಲಾಗಿದೆ.

### ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪ್ರಶಸ್ತಿ:



ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ನಿರ್ವಾಹಕರು ಹಾಗೂ ಚಾಲಕರುಗಳ ಸೇವಾ ಕೈಂಕರ್ಯ ಮೆಚ್ಚುಗೆ ಗಳಿಸಿದೆ. ಕಳೆದ 21 ತಿಂಗಳುಗಳಲ್ಲಿ 153 ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ. ಬದ್ಧತೆಯಿಂದ ಕೂಡಿದ ಸಿಬ್ಬಂದಿಗಳ ಕಾರ್ಯತತ್ಪರ ಗುಣಗಳಿಗೆ ಮತ್ತು ಸಾರ್ವಜನಿಕ ಪ್ರಯಾಣಿಕರಿಗೆ ಇದನ್ನು ಸಮರ್ಪಿಸಲಾಗಿದೆ.

–ರಾಮಲಿಂಗಾರೆಡ್ಡಿ
ಸಾರಿಗೆ ಮತ್ತು ಮುಜರಾಯಿ ಸಚಿವರು,
ಕರ್ನಾಟಕ ಸರ್ಕಾರ.

### ಶೀಘ್ರದಲ್ಲೇ ಹುದ್ದೆಗಳ ನೇಮಕಾತಿ:

ಈಗಾಗಲೇ ಹಳೆಯ 1452 ಬಸ್ಸುಗಳ ಪುನಶ್ಚೇತನ ಕಾರ್ಯ ಮುಂದುವರಿದಿದ್ದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 2 ಸಾವಿರ ಚಾಲಕ–ಕಂ–ನಿರ್ವಾಹಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ 2500 ನಿರ್ವಾಹಕರು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ 1 ಸಾವಿರ ಚಾಲಕರು ಮತ್ತು 1 ಸಾವಿರ ನಿರ್ವಾಹಕರು ಒಳಗೊಂಡಂತೆ 6500 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರದಲ್ಲೇ ಪೂರ್ಣಗೊಳಿಸುವುದೆಂದು ಸರ್ಕಾರ ಹೇಳಿದೆ. 9 ಸಾವಿರ ಹುದ್ದೆಗಳ ನೇಮಕಾತಿಗೆ ಅನುಮತಿ ದೊರೆತಿದ್ದು, 2 ಸಾವಿರ ಚಾಲಕ–ಕಂ–ನಿರ್ವಾಹಕರು ಹಾಗೂ 200 ತಾಂತ್ರಿಕ ಸಿಬ್ಬಂದಿಗಳ ನೇಮಕಾತಿ ಆದೇಶ ನೀಡಲಾಗುತ್ತದೆ. ಪಲ್ಲಕ್ಕಿ, ಅಶ್ವಮೇಧ, ಕ್ಲಾಸಿಕ್, ಐರಾವತ ಕ್ಲಬ್ ಕ್ಲಾಸ್ 2.0, ಕಲ್ಯಾಣ ರಥ, ಅಂಬಾರಿ ಉತ್ಸವ, ಅಮೋಘ ವರ್ಷ ಹೊಸ ಬಸ್ಸುಗಳು ಇದರಲ್ಲಿ ಸೇರ್ಪಡೆ ಮಾಡಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 1165, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ 1854, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 856 ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 1016 ಸೇರಿದಂತೆ ಒಟ್ಟು 4891 ಬಸ್ಸುಗಳ ಸೇರ್ಪಡೆಯಾಗಿದೆ. ಒಟ್ಟು 5899 ಹೊಸ ಬಸ್ಸುಗಳ ಸೇರ್ಪಡೆಗೆ ಅನುಮೋದನೆ ನೀಡಲಾಗಿದೆ.

# ಗಡಿಯಲ್ಲಿ ದೇವರ ಸ್ವರೂಪಿ ಕೆಲಸ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಮಾ.4:ಗಡಿಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೆತ್ತವರಿಗೆ ಬೇಡದ ಮಕ್ಕಳನ್ನು ಪಾಲನೆ, ಪೋಷಣೆ ಮಾಡುವ ಮೂಲಕ ದೇವರ ಸ್ವರೂಪಿ ಕೆಲಸ ಮಾಡುತ್ತಿರುವುದು ಹೆಮ್ಮೆ ತರಿಸಿದೆ ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ ಮೂರ್ತಿ ಹೇಳಿದರು.

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲ ಅನುಭವಮಂಟಪದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ವತಿಯಿಂದ ಸೋಮವಾರ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ದೇಶ ವಿದೇಶಗಳಲ್ಲಿ ಸಾಕಷ್ಟು ಸುತ್ತಾಟ ನಡೆಸಿದ್ದೇನೆ ಆದರೆ ಅಷ್ಟೊಂದು ಖುಷಿ ತಂದು ಕೊಟ್ಟಿಲ್ಲ. ಆದರೆ ಗಡಿಭಾಗದಲ್ಲಿ ಪೂಜ್ಯರು ಮಾನವೀಯ ಮೌಲ್ಯಗಳನ್ನು ಉಳಿಸಿ, ಬೆಳೆಸುವ ಕೆಲಸ ಕಣ್ಣಾರೆ ಕಂಡಿದ್ದು ಹೆಚ್ಚು ಖುಷಿ ತಂದು ಕೊಟ್ಟಿದೆ.

ಶೈಕ್ಷಣಿಕ ಸೇವೆ ಜತೆಗೆ ಬಸವತತ್ವ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಜನಪರ, ಜೀವಪರ ಕೆಲಸ ಮಾಡುತ್ತಿರುವುದು ಸಂತಸ ತರಿಸಿದೆ. ಪೂಜ್ಯರ ಸೇವೆ ಹೀಗೆ ಮುಂದು ವರೆಯಲಿ ಅವರ ಆಶೀರ್ವಾದ ದಿಂದ ಈ ಭಾಗ ಸದಾಕಾಲ ಸಮೃದ್ಧಿ ಕಾಣಲಿ ಎಂದು ಹಾರೈಸಿದರು.

ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮಾತನಾಡಿ, ರಾಜ್ಯದಲ್ಲಿ ಕನ್ನಡದ ಕೆಲಸಗಳಿಗೆ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಅವರು ಸದಾ ಮುಂದಿರುತ್ತಾರೆ. ಕಲಾವಿದರ ಕಷ್ಟಗಳಿಗೆ ಅವರು ಸದಾ ಸ್ಪಂದಿಸುತ್ತ ಬರುತ್ತಿದ್ದಾರೆ.

ಕಲೆ ಮತ್ತು ಸಾಹಿತ್ಯದ ಬಗ್ಗೆ ಹೆಚ್ಚು ಒಲವು ಹೊಂದಿರುವ ನಾಗರಾಜಮೂರ್ತಿ ಅವರು ನಾಟಕ ಅಕಾಡೆಮಿ ಅಧ್ಯಕ್ಷರಾಗಿ ನೇಮಕ ಆಗಿರುವುದು ಸಂತಸದ ಸಂಗತಿ.

ಅವರ ಅವಧಿಯಲ್ಲಿ ನಾಟಕ ಅಕಾಡೆಮಿ ಸಮಗ್ರ ಬೆಳವಣಿಗೆ ಸಾಧಿಸಲಿ ಎಂದು ಹಾರೈಸಿದರು.

ಚಲನಚಿತ್ರ ನಿರ್ಮಾಪಕ ವಿಷ್ಣುಕಾಂತ ಬಸವ ಗುರುವಿನ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಬಸವದಳದ ಔರಾದ್ ತಾಲೂಕು ಅಧ್ಯಕ್ಷ ಶಿವಶರಣಪ್ಪ ವಲ್ಲೇಪುರೆ ದಂಪತಿ ಇದ್ದರು.

ಭಾರತೀಯ ಬಸವ ಬಳಗದ ಜಿಲ್ಲಾಧ್ಯಕ್ಷ ಡಾ.ಸಂಜೀವಕುಮಾರ ಜುಮ್ಮಾ ಸ್ವಾಗತಿಸಿದರು. ಮಧುಕರ ಗಾಂವಕರ್ ನಿರೂಪಿಸಿ, ವಂದಿಸಿದರು.

# ರೇವಗ್ಗಿ (ರಟಕಲ್) ಶ್ರೀ ರೇಣುಕಾಚಾರ್ಯರ ಜಯಂತಿ ಮಹೋತ್ಸವ ಅಂಗವಾಗಿ ಭವ್ಯ ರಥೋತ್ಸವ

ಕಲಬುರಗಿ,ಮಾ.04:ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಕಾಳಗಿ ತಾಲೂಕಿನ ರೇವಗ್ಗಿ (ರಟಕಲ್) ಗ್ರಾಮದ ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದ ಜಗದ್ಗುರು ರೇಣುಕಾಚಾರ್ಯರ ಜಯಂತ್ಯೋತ್ಸವ

ಅಂಗವಾಗಿ ಭವ್ಯ ರಥೋತ್ಸವ ಕಾರ್ಯಕ್ರಮವು ಮಾರ್ಚ್ 12 ರಂದು ಬುಧವಾರ ಸಂಜೆ 5 ಗಂಟೆಗೆ ಜರುಗಲಿದೆ ಎಂದು ಕಾಳಗಿ (ರಟಕಲ್) ಶ್ರೀ ರೇವಣಸಿದ್ದೇಶ್ವರ ದೇವಸ್ಥಾನದ ಆಡಳಿತಾಧಿಕಾರಿಗಳು ಹಾಗೂ ಸೇಡಂ ಸಹಾಯಕ ಆಯುಕ್ತರು ತಿಳಿಸಿದ್ದಾರೆ.

ಮಾರ್ಚ್ 11ರಂದು ಮಂಗಳವಾರ ರಾತ್ರಿ 9 ಗಂಟೆಯಿಂದ ಬೆಳಗಿನ ಜಾವದವರಿಗೆ ಆಕಾಶವಾಣಿ ಕಲಾವಿದರಿಂದ ಸಂಗೀತ ಭಜನೆ ಹಾಗೂ ಮಾರ್ಚ್ 12 ರಂದು ಸಂಜೆ 5 ಗಂಟೆಗೆ ಭವ್ಯ ನಂದಿಕೋಲ ಮತ್ತು ಸಕಲ ವಾದ್ಯವೃಂದದೊಂದಿಗೆ ಭವ್ಯ ರಥೋತ್ಸವ ಜರುಗಲಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು

ಕೋರಲಾಗಿದೆ.

# ವಕೀಲರ ಸಂಘದ ಕಟ್ಟಡ: ಲಿಫ್ಟ್ ಕಾಮಗಾರಿಗೆ ಚಾಲನೆ



ಮಲ್ಲಮ್ಮನುಡಿ ವಾರ್ತೆ ಬೀದರ. ಮಾ. 04 : ಇಲ್ಲಿಯ ಜಿಲ್ಲಾ ವಕೀಲರ ಸಂಘದ ಕಟ್ಟಡದಲ್ಲಿ ಲಿಫ್ಟ್ ಅಳವಡಿಕೆ ಕಾಮಗಾರಿಗೆ ಸಂಸದ ಸಾಗರ್ ಖಂಡ್ರೆ ಮಂಗಳವಾರ ಚಾಲನೆ ನೀಡಿದರು. ನಾನೂ ವಕೀಲನಾಗಿದ್ದು, ವಕೀಲರ ಸಂಘದ ಸದಸ್ಯನಾಗಿದ್ದೇನೆ. ವಕೀಲರ ಸಮಸ್ಯೆಗಳ ಪರಿಹಾರ ಹಾಗೂ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದು ಅವರು ಹೇಳಿದರು. ಕಳೆದ ಲೋಕಸಭೆ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸಿ, ಗೆಲ್ಲಿಸಿದ ವಕೀಲರಿಗೆ ಕೃತಜ್ಞತೆ ಸಲ್ಲಿಸುವೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಶಿವಶರಣಪ್ಪ (ಪಪ್ಪು) ಪಾಟೀಲ ಮಾತನಾಡಿ, ವಕೀಲರ ಸಂಘದ ಕಟ್ಟಡ 2018 ರಲ್ಲೇ ಪೂರ್ಣಗೊಂಡಿದೆ. ಆದರೆ, ಲಿಫ್ಟ್ ಅಳವಡಿಕೆ ಆಗಿರಲಿಲ್ಲ. ಇದೀಗ ಕಾಮಗಾರಿ ಆರಂಭವಾಗಿರುವುದು ಸಂತಸ ಉಂಟು ಮಾಡಿದೆ ಎಂದು ತಿಳಿಸಿದರು. ಸರ್ಕಾರ ವಕೀಲರ ಗೃಹ ನಿರ್ಮಾಣ ಮಂಡಳಿ ಸ್ಥಾಪಿಸಬೇಕು. ವಕೀಲರ ಸಂಘದ ಕಟ್ಟಡಕ್ಕೆ ಸೋಲಾರ್ ಘಟಕ ಅಳವಡಿಸಲು ಅನುದಾನ ಒದಗಿಸಬೇಕು. ಯುವ ವಕೀಲರ ಪ್ರೋತ್ಸಾಹ ಧನ ಹೆಚ್ಚಿಸಬೇಕು ಎಂದು ಬೇಡಿಕೆ ಮಂಡಿಸಿದರು. ಇದೇ ವೇಳೆ ಜಿಲ್ಲಾ ವಕೀಲರ ಸಂಘದಿಂದ ಸಾಗರ್ ಖಂಡ್ರೆ ಅವರನ್ನು ಅಭಿನಂದಿಸಲಾಯಿತು. ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ವಿ.ಎಂ. ಆನಂದಶೆಟ್ಟಿ, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಗುಂಡರೆಡ್ಡಿ ಗುಡಾಡಿ, ಪ್ರಧಾನ ಕಾರ್ಯದರ್ಶಿ ನಾಗೇಂದ್ರ ಬಿರಾದಾರ, ಜಂಟಿ ಕಾರ್ಯದರ್ಶಿ ಶಿಲ್ಪಾ ಪಾಟೀಲ, ಖಜಾಂಚಿ ಪ್ಯಾರುಸಾಬ್ ಎಂ. ಶೇಕ್ ಮತ್ತಿತರರು ಇದ್ದರು.

ಕಟ್ಟಡದಲ್ಲಿ ಲಿಫ್ಟ್ ಇಲ್ಲದ ಕಾರಣ ಹಿರಿಯ ವಕೀಲರಿಗೆ ತೊಂದರೆಯಾಗುತ್ತಿತ್ತು. ಲಿಫ್ಟ್ ಕಾಮಗಾರಿ ಪೂರ್ಣಗೊಂಡ ನಂತರ ಮೊದಲ ಹಾಗೂ ಎರಡನೇ ಮಹಡಿಗೆ ಹೋಗಲು ಅನುಕೂಲವಾಗಲಿದೆ.

# ಚುನಾವಣಾಧಿಕಾರಿಗಳು ನಿಯಮಿತವಾಗಿ ರಾಜಕೀಯ ಪಕ್ಷಗಳ ಸಭೆ ನಡೆಸಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಮಾ.04:ಪ್ರಜಾಪ್ರಭುತ್ವದ ಸಧೃಡಗೊಳಿಸಲು ಸಹಾಯವಾಗುವಂತೆ ಹಾಗೂ ಚುನಾವಣಾ ಸಂಬಂಧಿತ ಸಮಸ್ಯೆಗಳು ಉದ್ಭವಿಸಿದಲ್ಲಿ ಸಂಬಂಧಿತ ಚುನಾವಣಾಧಿಕಾರಿಗಳು ನಿಯಮಿತವಾಗಿ ರಾಜಕೀಯ ಪಕ್ಷಗಳ ಸಭೆ ನೆಡೆಸುವ ಮೂಲಕ ಚುನಾವಣಾ ಕಾನೂನುಗಳ ಕುರಿತು ಅರಿವು ಮೂಡಿಸುವ ಕಾರ್ಯವನ್ನು ನಿರಂತರವಾಗಿ ಮಾಡಬೇಕು ಎಂದು ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಅವರು ಕರೆ ನೀಡಿದರು. ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರಾಗಿ ಅಧಿಕಾರ ಸ್ವೀಕರಿಸಿದ ನಂತರ ನವದೆಹಲಿಯ ಭಾರತೀಯ ಪ್ರಜಾಪ್ರಭುತ್ವ ನಿರ್ವಹಣಾ ಸಂಸ್ಥೆ ಯಲ್ಲಿ ಇಂದು ಹಮ್ಮಿಕೊಂಡಿದ್ದ ಎಲ್ಲಾ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾಧಿಕಾರಿಗಳ ಎರಡು ದಿನಗಳ ಸಮ್ಮೇಳನ ಉದ್ದೇಶಿಸಿ ಮಾತನಾಡಿದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರ್ ಕನೀನಿನಿ ರವರ ಕಛೇರಿ, ಕೆ.ಪಿ.ಸಿ. ವಿಭಾಗ ನಂ.1, ಬೀದರ–585401.

No. KNNL/EE/KPC1 /BDR /PB/TND/2024-25/1993 Date:27.02.2025

:: "ಇ"ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ::

No. KNNL/EE/KPC1 /BDR /PB/TND/2024-25/1913 Date:14.02.2025
No. KNNL/EE/KPC1 /BDR /PB/TND/2024-25/1833 Date:30.01.2025
No. KNNL/EE/KPC1 /BDR /PB/TND/2024-25/1761 Date:21.01.2025
No. KNNL/EE/KPC1 /BDR /PB/TND/2024-25/1628 Date:30.12.2024
No.EE/KNNL/KPC/Dn-1/BDR/PB/TND/2024-25/1472 Date:10.12.2024

ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಚುಲ್ಕಿನಲಾ ಯೋಜನೆಯ 2701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ "ಇ"ಪ್ರೊಕ್ಯೂರಮೇಂಟ್‌ನಲ್ಲಿ ಶೇಕಡವಾರು ಏಕ–ಲಕೋಟೆಯ ಟೆಂಡರ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿರುತ್ತವೆ. ಸಾಮಾನ್ಯ ವರ್ಗದವರಿಗೆ ಮೀಸಲಿಟ್ಟ ಕಾಮಗಾರಿಗಳಿಗೆ (ಇಂಡೆಂಟ್ ಸಂ:2284/Call-6,2285/Call-6,) ಟೆಂಡರಿಗಿಟ್ಟ ಮೊತ್ತವು ರೂ:168707.00 ಹಾಗೂ ರೂ.338568.00 (ಒಂದು ಲಕ್ಷದ ಆರವತ್ತೆಂಟು ಸಾವಿರದ ಏಳು ನೂರಾ ಸೂನ್ಯ ಏಳು ರೂಪಾಯಿ ಮಾತ್ರ, ಹಾಗೂ ಮೂರು ಲಕ್ಷದ ಮೂವತ್ತೆಂಟು ಸಾವಿರದ ಐದು ನೂರಾ ಆರವತ್ತೆಂಟು ರೂಪಾಯಿ ಮಾತ್ರ) ಮತ್ತು ಇ.ಎಮ್.ಡಿ. ಮೊತ್ತವು ರೂ:5000.00/– ಹಾಗೂ ರೂ:10,000.00/– (ಐದು ಸಾವಿರ ಮಾತ್ರ ಹಾಗೂ ಹತ್ತು ಸಾವಿರದ ಮಾತ್ರ) ಇದ್ದು, ಕೆಲಸದ ಅವಧಿ ಮಳೆಗಾಲ ಸೇರಿ 1 ತಿಂಗಳು ಇರುತ್ತದೆ.

1)"ಇ"ಪ್ರೊಕ್ಯೂರಮೇಂಟ್‌ನಲ್ಲಿ htpps://kppp.karnataka.gov.in ಖಾಲಿ ಟೆಂಡರ ಫಾರ್ಮಗೆ ವಿನಂತಿ ಮತ್ತು ಪೇಪರಗಳನ್ನು ಡೌನಲೋಡ್ ಮಾಡಿಕೊಳ್ಳುವುದು ಮತ್ತು ಇ–ಪೋರ್ಟಲ್ ಮೂಲಕ ಭರ್ತಿ ಮಾಡಿ ಟೆಂಡರ ಸಲ್ಲಿಸುವ ದಿನಾಂಕ: **27–02–2025 ರಿಂದ 06–03–2025 ರ 16.00** ಘಂಟೆಯವರೆಗೆ. 2) ದಿನಾಂಕ: 07–03–2025 ರಂದು 17.00 ಘಂಟೆಯ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿದವರ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಕನೀನಿನಿ, ಕೆ.ಪಿ.ಸಿ.ವಿಭಾಗ ನಂ.1, ಬೀದರ.

ವಾ.ಸಾ.ಸಂ.ಇ/ಬೀದರ/432/ಕೆ.ಎಸ್.ಎಂ.ಸಿ.&ಎ/2024–25

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.